ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 17 ಭಾನುವಾರ 2023

ಸಂಪುಟ: 44 | ಸಂಚಿಕೆ: 153 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಿಮ್ಮ ಪತ್ರಗಳು

ಇಂತಹ ಪತ್ರಿಕೆಗೆ ಓದುಗರೇ ಬೆನ್ನೆಲುಬಾಗಿ ನಿಲ್ಲೋಣ...!

ಮಾನ್ಯರೆ,

ನಾನು, 'ಮೈಸೂರು ಮಿತ್ರ' ಪತ್ರಿಕೆಯನ್ನು ಸುಮಾರು 40 ವರ್ಷಗಳಿಂದಲೂ ಪ್ರತಿದಿನ ತಪ್ಪದೇ ಓದುತ್ತಾ ಬಂದಿದ್ದೇನೆ. ನನಗೆ ತಿಳಿದಿರುವಂತೆ, ಹಳೆ ಮೈಸೂರು ಭಾಗದಲ್ಲಿ ಮೊದಲು ಜಿಲ್ಲಾ, ನಂತರ ಪ್ರಾದೇಶಿಕ ಪತ್ರಿಕೆಯಾಗಿ 'ಮೈಸೂರು ಮಿತ್ರ' ಅತೀ ಹೆಚ್ಚಿನ ಪ್ರಸಾರ ದಿನ ಪತ್ರಿಕೆಯಾಗಿದೆ. ಲಕ್ಷಾಂತರ ಓದುಗರನ್ನು ಹೊಂದಿದೆ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ.

ಇತ್ತೀಚೆಗೆ ನಾನು ಗಮನಿಸಿದ ಒಂದು ಅಂಶವೆಂದರೆ; ಸರ್ಕಾರದ ಜಾಹೀರಾತುಗಳು ರಾಜ್ಯ ಮಟ್ಟದ, ಜೊತೆಗೆ ಸ್ಥಳೀಯ ಸಣ್ಣ–ಪುಟ್ಟ ಪತ್ರಿಕೆಗಳಲ್ಲಿ ಪುಟಗಟ್ಟಲೇ ಪ್ರಕಟವಾಗುತ್ತಿವೆ. ಆದರೆ 'ಮೈಸೂರು ಮಿತ್ರ'ದಲ್ಲಿ ಈ ಜಾಹೀರಾತುಗಳು ಪ್ರಕಟವಾಗದಿರಲು ಕಾರಣವೇನಿರಬಹುದು?

ನನಗೆ ಅರಿವಿರುವಂತೆ ಪ್ರಸಾರ ಸಂಖ್ಯೆ ಆಧರಿಸಿ ಪತ್ರಿಕೆಗಳಿಗೆ ಸರ್ಕಾರ ಜಾಹೀರಾತುಗಳನ್ನು ನೀಡಿ, ತನ್ನ ಜನಪರ ಕಾರ್ಯಗಳು, ಜನೋಪಯೋಗಿ ಯೋಜನೆಗಳನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ.

ಆದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ಈ ರೀತಿಯಾದ ತಾರತಮ್ಯ ಮಾಡುವುದಾದರೂ ಏಕೆ? ಅಷ್ಟಕ್ಕೂ ಇಂತಹದ್ದಕ್ಕೆಲ್ಲಾ ಜನರ ತೆರಿಗೆ ಹಣವನ್ನೇ ವಿನಿಯೋಗಿಸುತ್ತಾರೆಯೇ ಹೊರತು, ಇವರ್‍ಯಾರು ತಮ್ಮ ಜೇಬಿನಿಂದ ಏನು ಭರಿಸಲ್ಲ ತಾನೇ? ಇಂದಿನ ದಿನಗಳಲ್ಲಿ ಪತ್ರಿಕೆ ನಡೆಸುವುದೇ ದೊಡ್ಡ ಸವಾಲಿನ ಕೆಲಸವೂ ಆಗಿದೆ. ಅಂತಹದ್ದರಲ್ಲಿ ಸರ್ಕಾರ ಎಲ್ಲಾ ಪತ್ರಿಕೆಗಳನ್ನು ಸಮಾನಾಗಿ ಪರಿಗಣಿಸಿ, ಜಾಹೀರಾತುಗಳನ್ನು ಬಿಡುಗಡೆ ಮಾಡಬೇಕಾಗಿತ್ತು. ಆದರೆ ಈ ಮಾನದಂಡ 'ಮೈಸೂರು ಮಿತ್ರ'ನ ವಿಷಯದಲ್ಲಿ ಪಾಲನೆ ಆಗುತ್ತಿಲ್ಲ ಎಂಬುದು ಮನವರಿಕೆ ಆಗುತ್ತಿದೆ.

ಒಂದು ವೇಳೆ ಪೂರ್ವಾಗ್ರಹಪೀಡಿತವಾಗಿ ಸರ್ಕಾರ ತನ್ನ ಜಾಹೀರಾತು ಬಿಡುಗಡೆ ವಿಷಯದಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿರುವುದೇ ಆದರೆ ಇಂತಹ ಮೈಸೂರಿನ ಜನಪ್ರಿಯ ಪತ್ರಿಕೆಗೆ ಓದುಗರಾದ ನಾವು ಬೆನ್ನೆಲುಬಾಗಿ ನಿಲ್ಲೋಣ.

–ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ, ಮೈಸೂರು

ಸೆ.20ರಂದು ಪ್ರಧಾನಿ ಮೋದಿ ಸಮ್ಮುಖದಲ್ಲೇ

ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಸೇರ್ಪಡೆ

- ಅಂದು ಬಿಜೆಪಿ ಕಚೇರಿಯಲ್ಲಿ ನಡೆಯುವ ಸಮಾರಂಭದಲ್ಲಿ ಅಧಿಕೃತ ಸೇರ್ಪಡೆ
- ಜಂಟಿಯಾಗಿ ಲೋಕಸಭಾ ಚುನಾವಣೆಯಲ್ಲಿ 'ಇಂಡಿಯಾ' ವಿರುದ್ಧ ಸೆಣಸಾಟ
- ಕಾಂಗ್ರೆಸ್ 'ಹಸ್ತ' ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಮಾಜಿ ಪ್ರಧಾನಿ ದೇವೇಗೌಡರ ನಿರ್ಧಾರ

ಬೆಂಗಳೂರು, ಸೆ.16 (ಕೆಎಂಶಿ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲೇ ಜೆಡಿಎಸ್, ಎನ್‌ಡಿಎ ಮೈತ್ರಿಕೂಟ ಸೇರ್ಪಡೆಯಾಗಲಿದೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕೆಲವರು ತಮ್ಮ ವಿರೋಧಿ ಬಣವಾದ ಜೆಡಿಎಸ್–ಬಿಜೆಪಿಯ ಶಾಸಕರು ಮತ್ತು ಮುಖಂಡರನ್ನು ಆಪರೇಷನ್ ಹಸ್ತ ಮಾಡಲು ಮುಂದಾಗಿದ್ದರ ಪರಿಣಾಮ ಮೈತ್ರಿ ಗಟ್ಟಿಗೊಂಡು ತ್ವರಿತ ವಿಲೀನಕ್ಕೆ ನಾಂದಿ ಹಾಡಲಾಗಿದೆ.


[ಸಂಗ್ರಹ ಚಿತ್ರ]

ನವದೆಹಲಿಯ ಅಕ್ಬರ್ ಮಾರ್ಗ್‌ನಲ್ಲಿರುವ ಬಿಜೆಪಿ ಕಚೇರಿಯಲ್ಲಿ ಸೆ.20ರ ಬುಧವಾರದಂದು ನಡೆಯಲಿರುವ ಸಮಾರಂಭದಲ್ಲಿ ಜೆಡಿಎಸ್ ಅಧಿಕೃತವಾಗಿ ಇಂಡಿಯಾ ವಿರೋಧಿ ಕೂಟಕ್ಕೆ ಸೇರ್ಪಡೆಗೊಳ್ಳುತ್ತಿದೆ.

ಜೆಡಿಎಸ್‌ನ ವರಿಷ್ಠ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಕೈ ಹಿಡಿದು ಮೇಲೆತ್ತುವ ಮೂಲಕ ಕಮಲ ಹಾಗೂ ತೆನೆ ಹೊತ್ತ ಮಹಿಳೆ ಜಂಟಿಯಾಗಿ ಲೋಕಸಭಾ ಚುನಾವಣಾ ಕಣಕ್ಕಿಳಿಯಲಿವೆ. ಉಭಯ ಪಕ್ಷಗಳ ಮೈತ್ರಿ ಘೋಷಣೆ ಸಮಾರಂಭವನ್ನು ಯಶಸ್ವಿಗೊಳಿಸುವ ಉದ್ದೇಶದಿಂದ ಬಿಜೆಪಿ ವರಿಷ್ಠರು ಭರದ ಸಿದ್ಧತೆ ನಡೆಸಿದ್ದು, ಅವರ ಆಹ್ವಾನದ ಮೇರೆಗೆ ನಾಳೆ ಬೆಳಗ್ಗೆ ದೇವೇಗೌಡರು ದೆಹಲಿಗೆ ತೆರಳುತ್ತಿದ್ದಾರೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮೈತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಸೆ.19ರಂದು ದೆಹಲಿಗೆ ತೆರಳಲಿದ್ದಾರೆ. ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಹೀನಾಯ ಸೋಲುಂಡ ನಂತರ ಕರ್ನಾಟಕದಲ್ಲಿ ▶ 9ನೇ ಪುಟಕ್ಕೆ

ಇಂದು ಏಷ್ಯಾಕಪ್ ಫೈನಲ್

ಭಾರತ–ಶ್ರೀಲಂಕಾ ಸೆಣಸಾಟ



ಫೈನಲ್ ಪಂದ್ಯದ ವಿವರ

ಭಾರತ Vs ಶ್ರೀಲಂಕಾ
ಸೆ.17, ಮಧ್ಯಾಹ್ನ 3ಕ್ಕೆ ಆರಂಭ
ಸ್ಥಳ: ಆರ್ ಪ್ರೇಮದಾಸ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಕೊಲಂಬೊ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕೊಲಂಬೊ, ಸೆ.16–ಭಾರತ ಹಾಗೂ ಶ್ರೀಲಂಕಾ ನಡುವಿನ ಏಷ್ಯಾ ಕಪ್ ಕ್ರಿಕೆಟ್ ಫೈನಲ್ ಪಂದ್ಯಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಭಾನುವಾರ ಮಧ್ಯಾಹ್ನ 3 ಗಂಟೆಗೆ ಇಲ್ಲಿನ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ಉಭಯ ತಂಡಗಳು ಏಷ್ಯಾ ಕಪ್‌ಗಾಗಿ ಸೆಣಸಾಟ ನಡೆಸಲಿವೆ.

2018ರಲ್ಲಿ ಭಾರತ ಕೊನೆ ಬಾರಿಗೆ ಬಾಂಗ್ಲಾದೇಶ ವಿರುದ್ಧ ಗೆದ್ದು ಏಷ್ಯಾ ಕಪ್ ಮುಡಿಗೇರಿಸಿಕೊಂಡಿತ್ತು. ಅಂದಿನಿಂದ ಭಾರತ ಈ ಪ್ರಮುಖ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿಲ್ಲ. ಇದೀಗ ಪ್ರಶಸ್ತಿ ಬರ ನೀಗಿಸಿಕೊಳ್ಳಲು ಟೀಮ್ ಇಂಡಿಯಾಗೆ ಉತ್ತಮ ಅವಕಾಶ ಒದಗಿ ಬಂದಿದೆ. ಭಾರತಕ್ಕೆ ಇದು 10ನೇ ಫೈನಲ್ ಆಗಿದ್ದರೆ, ಶ್ರೀಲಂಕಾಕ್ಕೆ 12ನೇ ಫೈನಲ್ ಆಗಿದೆ. ಭಾರತ ಈಗಾಗಲೇ 7 ಬಾರಿ ಗೆದ್ದಿದ್ದು, 8ನೇ ಬಾರಿ ಏಷ್ಯಾಕಪ್ ▶ 9ನೇ ಪುಟಕ್ಕೆ

ಡಿಎಂಕೆ ಓಲೈಕೆಗೆ ತಮಿಳುನಾಡಿಗೆ ಕದ್ದು ಮುಚ್ಚಿ ಕಾವೇರಿ ನೀರು


ಸಾಬೀತು ಮಾಡುವುದಾಗಿ ಸಂಸದ ಪ್ರತಾಪ್ ಸಿಂಹ ಸವಾಲು

- ಪ್ರತಿ ದಿನ ಸದ್ದಿಲ್ಲದೆ 5 ಸಾವಿರ ಕ್ಯುಸೆಕ್ ನೀರು ಬಿಡುಗಡೆ
- ಪ್ರಧಾನಿ ಮೋದಿ ಮಧ್ಯಸ್ಥಿಕೆ ಅಸಾಧ್ಯ
- ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥ ವಾದ ಮಂಡಿಸಲಿ
- ಕಿರಿಕ್ ಮಾಡಬೇಡಪ್ಪ ಎಂದು ಸ್ಟಾಲಿನ್‌ಗೆ ಹೇಳಲಿ



ಮೈಸೂರು, ಸೆ.16(ಬಿಎಲ್‌ಯು)– ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಜೊತೆ ಕಾಂಗ್ರೆಸ್ ಮೈತ್ರಿ ಹಿನ್ನೆಲೆಯಲ್ಲಿ ಅಲ್ಲಿನ ಸಿಎಂ ಸ್ಟಾಲಿನ್ ಓಲೈಸಲು ಈಗಲೂ ಕೂಡ ರಾಜ್ಯ ಸರ್ಕಾರ ತಮಿಳುನಾಡಿಗೆ ಕದ್ದು ಮುಚ್ಚಿ ಕಾವೇರಿ ನೀರು ಹರಿಸುತ್ತಿದ್ದು, ಇದನ್ನು ನಾನು ಸಾಬೀತು ಮಾಡಬಲ್ಲೆ ಎಂದು ಸಂಸದ ಪ್ರತಾಪ್ ಸಿಂಹ ಸವಾಲು ಹಾಕಿದರು.

ಮೈಸೂರಿನ ಟೌನ್‌ಹಾಲ್‌ನಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ನನ್ನ ಮಾತು ಸುಳ್ಳು ಎನ್ನುವುದಾದರೆ ಈಗಲೂ ಕೂಡ ಕೆಆರ್‌ಎಸ್ ಹಾಗೂ ಕಬಿನಿ ಡ್ಯಾಂಗೆ ಹೋಗಿ ಪರೀಕ್ಷೆ ಮಾಡಿ, ಸದ್ದಿಲ್ಲದೆ ತಮಿಳುನಾಡಿಗೆ ನೀರು ಹರಿಸುತ್ತಿರುವ ಸತ್ಯಾಂಶ ಆಗ ತಿಳಿಯುತ್ತದೆ ಎಂದರು. ಕಾಂಗ್ರೆಸ್, ಇಂಡಿಯಾ ಒಕ್ಕೂಟದಲ್ಲಿ ಡಿಎಂಕೆ ಮೈತ್ರಿ



ಹಿನ್ನೆಲೆಯಲ್ಲಿ ತಮಿಳುನಾಡಿಗೆ ನಿರಂತರವಾಗಿ ನೀರು ಬಿಡುತ್ತಿದೆ. ಮುಂದಿನ ಲೋಕಸಭಾ ಚುನಾವಣೆಯ ದೃಷ್ಟಿಯಿಂದ ಡಿಎಂಕೆ ಓಲೈಕೆಗಾಗಿ ನೀರು ಹರಿಸುತ್ತಿದ್ದಾರೆ. ಸೆಪ್ಟೆಂಬರ್ 13ರಿಂದ ನಿರಂತರವಾಗಿ 5 ಸಾವಿರ ಕ್ಯುಸೆಕ್ ಕಾವೇರಿ ನೀರು ಬಿಡಲಾಗುತ್ತಿದೆ. ಇದನ್ನು ಸುಖಾಸುಮ್ಮನೆ ಹೇಳದೆ ಚಾಲೆಂಜ್ ಮಾಡಿ ಹೇಳುತ್ತೇನೆ ಎಂದು ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದರು.

ಕೆಆರ್ ಎಸ್ ಜಲಾಶಯದಲ್ಲಿ ಕೇವಲ 13 ಟಿಎಂಸಿ ನೀರಿದೆ. ಇನ್ನು ಹೇಮಾವತಿ ಜಲಾಶಯದಲ್ಲಿ 12 ಟಿಎಂಸಿ ನೀರಿದೆ. ಕಬಿನಿ ಹಾಗೂ ಹಾರಂಗಿ ಜಲಾಶಯ ಬರಿದಾಗಿದೆ. ನಮ್ಮ ಜಲಾಶಯಗಳಲ್ಲಿ ಪ್ರಸ್ತುತ ಇರುವ ನೀರು ಕುಡಿಯಲು ಕೂಡ ಸಾಕಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ರಾಜಕೀಯ ಕಾರಣಕ್ಕೆ ತಮಿಳುನಾಡಿಗೆ ನೀರು ಹರಿಸುತ್ತಿದೆ ಎಂದು ಕಿಡಿಕಾರಿದರು. ಈಗಲಾದರೂ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡುವುದನ್ನು ನಿಲ್ಲಿಸಿ ಕುಡಿಯುವ ನೀರಿಗಾಗಿ ▶ 9ನೇ ಪುಟಕ್ಕೆ

ಯುವಕನ ವ್ಹೀಲಿಂಗ್ ಚಾಳಿಗೆ ಅಮಾಯಕ ದನಗಾಹಿ ಬಲಿ

ಆರೋಪಿಗೆ ನ್ಯಾಯಾಂಗ ಬಂಧನ

ನಂಜನಗೂಡು, ಸೆ. 16– ಯುವಕನೊಬ್ಬನ ವ್ಹೀಲಿಂಗ್ ಪುಂಡಾಟಕ್ಕೆ ರಸ್ತೆ ಬದಿ ಕುಳಿತಿದ್ದ ದನಗಾಹಿ ಬಲಿಯಾದ ಘಟನೆ ನಂಜನಗೂಡು ತಾಲೂಕು ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಶನಿವಾರ ಸಂಜೆ ನಡೆದಿದ್ದು, ಪೊಲೀಸರು ಯುವಕನನ್ನು ಬಂಧಿಸಿ, ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಆತ ಜೈಲು ಪಾಲಾಗಿದ್ದಾನೆ.

ಮೈಸೂರಿನ ಗಾಯತ್ರಿಪುರಂ ನಿವಾಸಿಯಾಗಿದ್ದು, ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರ ಪುತ್ರನಾಗಿರುವ ಸೈಯ್ಯದ್ ಐವಾನ್(18) ಬಂಧಿತ ಯುವಕನಾಗಿದ್ದು, ಈತನ ಪುಂಡಾಟಕ್ಕೆ ಇಮ್ಮಾವು ಗ್ರಾಮದ ದನಗಾಹಿ ಗುರುಸ್ವಾಮಿ (65) ಬಲಿಯಾಗಿದ್ದರೆ, ಗೋವಿಂದರಾಜು ಎಂಬುವರು ತೀವ್ರವಾಗಿ ಗಾಯಗೊಂಡು ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿವರ: ತಾಲೂಕಿನ ಇಮ್ಮಾವು ಗ್ರಾಮದ ನಿವಾಸಿಗಳಾದ ಗುರುಸ್ವಾಮಿ ಮತ್ತು ಗೋವಿಂದರಾಜು ಜಾನುವಾರುಗಳನ್ನು ಮೇಯಲು ಬಿಟ್ಟು ಇಮ್ಮಾವು ಕೈಗಾರಿಕಾ ಪ್ರದೇಶದ ಏಷಿಯನ್ ಪೇಂಟ್ಸ್ ▶ 9ನೇ ಪುಟಕ್ಕೆ

ಇಂದು ಪ್ರಧಾನಿ ನರೇಂದ್ರ ಮೋದಿ ಜನ್ಮದಿನ; ಅದ್ದೂರಿಯಾಗಿ ಆಚರಿಸಲು ಬಿಜೆಪಿ ಯೋಜನೆ



ನವದೆಹಲಿ: ಪ್ರಧಾನಿ ಮೋದಿಯವರ 73ನೇ ಹುಟ್ಟುಹಬ್ಬವನ್ನು ಸ್ಮರಣೀಯವಾಗಿಸಲು ಬಿಜೆಪಿ ತಯಾರಿ ನಡೆಸಿದೆ. ಪ್ರಧಾನಿ ಮೋದಿ ಅವರು ಭಾನುವಾರ 73ನೇ ವಸಂತಕ್ಕೆ ಕಾಲಿಡಲಿದ್ದಾರೆ. ಇದರ ಬೆನ್ನಲ್ಲೇ ಪಕ್ಷವು ಸೆ.17ರಿಂದ ಅ.2ರವರೆಗೆ 16 ದಿನಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬಕ್ಕೆ ಬಿಜೆಪಿ ವಿಶೇಷ ಸಿದ್ಧತೆಗಳನ್ನು ಪ್ರಾರಂಭಿಸಿದೆ. ದೇಶಾದ್ಯಂತ 'ಸೇವಾ ಹಿ ಸಂಘಟನೆ' ಕಾರ್ಯಕ್ರಮವನ್ನು ಆಯೋಜಿಸಿದೆ.

16 ದಿನಗಳ ಈ ಕಾರ್ಯಕ್ರಮವು ಮಹಾತ್ಮ ಗಾಂಧಿ ಜಯಂತಿಯ ದಿನವಾದ ಅ.2ರಂದು ಮುಕ್ತಾಯಗೊಳ್ಳಲಿದೆ. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್, ವಿನೋದ್ ತಾವ್ಡೆ, ಸುನಿಲ್ ಬನ್ಸಾಲ್, ಸಂಜಯ್ ಬಂಡಿ ಮತ್ತು ಕೈಲಾಶ್ ವಿಜಯವರ್ಗಿಯ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮದ ಸಿದ್ಧತೆಗಳ ಸಭೆ ನಡೆಯಿತು.

ಬಿಜೆಪಿ 'ಸೇವಾ ಪಖ್ವಾಡಾ' ಆಯೋಜನೆ: ಬಿಜೆಪಿಯು ಈ ಸಭೆಯಲ್ಲಿ 'ಮೇರಿ ಮಾತಾ ಮೇರಾ ದೇಶ' ಮತ್ತು ಇತರ ಮುಂಬರುವ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಯಿತು. ಈ ಕಾರ್ಯಕ್ರಮದಡಿ ಮುಖಂಡರು ಗ್ರಾಮಗಳಿಗೆ ತೆರಳಿ ಜನರನ್ನು ಭೇಟಿ ಮಾಡುವಂತೆ ತಿಳಿಸಲಾಗಿದೆ. ಕಳೆದ ವರ್ಷವೂ ಬಿಜೆಪಿ ಪ್ರಧಾನಿ ಮೋದಿ ಯವರ ಜನ್ಮದಿನದಿಂದ ಮಹಾತ್ಮಾ ಗಾಂಧಿಯವರ ಜನ್ಮದಿನವಾದ ಅ.2ರವರೆಗೆ 'ಸೇವಾ ಪಖ್ವಾಡಾ' ಆಯೋಜಿಸಿತ್ತು. ಈ ಕಾರ್ಯಕ್ರಮದ ಅಡಿಯಲ್ಲಿ ಪಕ್ಷವು ಜಿಲ್ಲಾ ಮಟ್ಟದಲ್ಲಿ ಪ್ರಧಾನಿ ಮೋದಿಯವರ ಪ್ರದರ್ಶನಗಳನ್ನು ಆಯೋಜಿಸಿತ್ತು. ಸೆ.25ರಂದು ದೀನ ದಯಾಳ್ ಉಪಾಧ್ಯಾಯ ಜಯಂತಿ ಮತ್ತು ಅ.2ರಂದು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಸೇವಾ ಪಖ್ವಾಡಾ ಎಂದು ಆಚರಿಸಲಿದೆ.

ಸೆ.19ರಂದು ವಿಶೇಷ ಸ್ವಾತಿ ಪೂಜೆ



ಮೈಸೂರು,ಸೆ.16–ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಸೆ.19ರಂದು ಮಂಗಳವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಪ್ರಧಾನ ವ್ಯವಸ್ಥಾಪಕ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಮಾಹಿತಿ ಮೊ. 9342188323, 7598832271 ಸಂಪರ್ಕಿಸಿ.

ತಾಂತ್ರಿಕ ವ್ಯವಸ್ಥಾಪಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಸೆ.16– 2023– 24ನೇ ಸಾಲಿಗೆ ಆತ್ಮ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲೂಕಿನಲ್ಲಿ ಖಾಲಿ ಇರುವ ತಾಲೂಕು ತಾಂತ್ರಿಕ ವ್ಯವಸ್ಥಾಪಕರ ಹುದ್ದೆಗೆ ಒಂದು ವರ್ಷದ ನೇರ ಗುತ್ತಿಗೆ ಆಧಾರದ ಮೇಲೆ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಂತೆ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಕೃಷಿ ಸಂಬಂಧಿತ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ 2 ವರ್ಷಗಳ ಕ್ಷೇತ್ರ ಮಟ್ಟದ ಅನುಭವ ಹೊಂದಿರಬೇಕು. ಆಸಕ್ತರು ಮೈಸೂರಿನ ನ್ಯೂ ಸಯಾಜಿರಾವ್ ರಸ್ತೆಯಲ್ಲಿನ ಸಾರ್ವಜನಿಕ ಕಚೇರಿಗಳ ಕಟ್ಟಡದ ಕೃಷಿ ಜಂಟಿ ನಿರ್ದೇಶಕರ ಕಚೇರಿಯ ಆತ್ಮ ವಿಭಾಗದಲ್ಲಿ ಅರ್ಜಿಗಳನ್ನು ಪಡೆದು ನಿಗದಿತ ನಮೂನೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ ಸೆ.25 ಸಂಜೆ 5 ಗಂಟೆಯೊಳಗೆ ಕಚೇರಿಗೆ ಸಲ್ಲಿಸುವಂತೆ ತಿಳಿಸಲಾಗಿದೆ. ಅರ್ಜಿಗಳೊಂದಿಗೆ ವಿದ್ಯಾರ್ಥಿಗೆ ಸಂಬಂಧಿಸಿದ ಎಲ್ಲಾ ವರ್ಷದ ಅಂಕ ಪಟ್ಟಿಗಳು ಪ್ರಮಾಣ ಪತ್ರಗಳು, ಕಂಪ್ಯೂಟರ್ ಜ್ಞಾನಕ್ಕೆ ಸಂಬಂಧಿಸಿದ್ದ ಪ್ರಮಾಣ ಪತ್ರಗಳು, ಅನುಭವಕ್ಕೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು ಕಡ್ಡಾಯವಾಗಿರುತ್ತದೆ ಮತ್ತು ಎಲ್ಲಾ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಳಿಗಾಗಿ ಯೋಜನೆ ನಿರ್ದೇಶಕರು ಹಾಗೂ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿನ ಹುದ್ದೆಗೆ ಸಂಬಂಧಿಸಿದ ವಿಷಯ ನಿರ್ವಾಹಕರು ಮತ್ತು ಕಂಪ್ಯೂಟರ್ ನಿರ್ವಾಹಕರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ನಕಲಿ ದಾಖಲೆ ಸೃಷ್ಟಿಸಿ ಜಮೀನು ಮಾರಾಟ: ಪ್ರಕರಣ ದಾಖಲು

ಮೈಸೂರು,ಸೆ.16–ನಕಲಿ ದಾಖಲೆಗಳನ್ನು ಸೃಷ್ಟಿಸಿ ಜಮೀನನ್ನು ಮಾರಾಟ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ಕೆಸರೆ 1ನೇ ಹಂತದ ನಿವಾಸಿ ಸಿದ್ದರಾಜಮ್ಮ(50) ಎಂಬುವರ ಜಮೀನಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಬೆಂಗಳೂರಿನ ಕಾಮಾಕ್ಷಿ(78), ಸ್ವಸ್ತಿಕ್ ಶ್ರೀನಿವಾಸ್ (40), ಸ್ವಪ್ನ(50) ಮತ್ತು ಮಂಗಳೂರಿನ ಸಂತೋಷ್‌ಕುಮಾರ್ (59) ಎಂಬುವರು ಮಾರಾಟ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ವಿವರ: ಸಿದ್ದರಾಜಮ್ಮ ಅವರ ತಂದೆ ಕಾಳಯ್ಯ ಎಂಬುವರಿಗೆ 1987ರ ಆಗಸ್ಟ್ 27ರಂದು ಮೈಸೂರಿನ ಬೆಲವತ್ತ ಸರ್ವೆ ನಂಬರ್ 30ರಲ್ಲಿ 0.19 ಗುಂಟೆ ಮತ್ತು ಸರ್ವೆ ನಂಬರ್ 200ರಲ್ಲಿ 0.04 ಗುಂಟೆ ಜಮೀನನ್ನು ರಾಜ್ಯ ಸರ್ಕಾರದಿಂದ ಮಂಜೂರು ಮಾಡಿ ಹಕ್ಕುಪತ್ರವನ್ನು ನೀಡಲಾಗಿತ್ತು. ಈ ಜಮೀನಿನ ಖಾತೆ 2003ರ ಜನವರಿ 9ರಂದು ಸಿದ್ದರಾಜಮ್ಮ ಅವರ ಹೆಸರಿಗೆ ವರ್ಗಾವಣೆಯೂ ಆಗಿದೆ.

ಈ ಮಧ್ಯೆ ಆರೋಪಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ 2003ರ ಜುಲೈ 10ರಂದು ಮಾರಾಟ ಮಾಡಿದ್ದಾರೆ ಎಂದು ನೀಡಿದ ದೂರನ್ನು ನ್ಯಾಯಾಲಯದ ಆದೇಶದ ಮೇರೆಗೆ ದಾಖಲಿಸಿಕೊಂಡಿರುವ ಎನ್.ಆರ್. ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬೈಕ್ ವ್ಹೀಲಿಂಗ್ ಮಾಡುತ್ತಿದ್ದ ಯುವಕನ ಬಂಧನ; ಬೈಕ್ ವಶಕ್ಕೆ



ಮೈಸೂರು,ಸೆ.16–ಮೈಸೂರಿನ ವಿವಿಪುರಂ ಸಂಚಾರ ಠಾಣೆ ಪೊಲೀಸರು ಬೈಕ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದ ಯುವಕನನ್ನು ಬಂಧಿಸಿ ಬೈಕ್ ವಶಪಡಿಸಿಕೊಂಡಿದ್ದಾರೆ.

ಮೈಸೂರು ತಾಲೂಕು ಮೈದನಹಳ್ಳಿ ಗ್ರಾಮದ ಮನೋಜ್(20) ಬಂಧನಕ್ಕೊಳಗಾದವನಾಗಿದ್ದು, ಈತ ಸೆ.15ರಂದು ಮಧ್ಯಾಹ್ನ 1.40ರ ಸುಮಾರಿನಲ್ಲಿ ಹೂಟಗಳ್ಳಿ ಸಿಗ್ನಲ್ ಲೈಟ್ ಜಂಕ್ಷನ್‌ನಿಂದ ಬೆಳವಾಡಿ ಕಡೆಗೆ ಯಮಹಾ ಬೈಕ್‌ನಲ್ಲಿ (ಕೆಎ 09–ಜೆಎಫ್ 0856) ವ್ಹೀಲಿಂಗ್ ಮಾಡುತ್ತಾ ಹೋಗುತ್ತಿದ್ದುದ್ದನ್ನು ನೋಡಿದ ಕಾನ್‌ಸ್ಟೇಬಲ್ ಕೆ.ಎಸ್.ಹರ್ಷತ್ ಅವರು ವಾಕಿಟಾಕಿಯಲ್ಲಿ ಬೆಳವಾಡಿ ಪಾಯಿಂಟ್‌ನಲ್ಲಿ ಕರ್ತವ್ಯದಲ್ಲಿದ್ದ ಕಾನ್‌ಸ್ಟೇಬಲ್ ಕೀರ್ತಿರಾಜ್ ಅವರಿಗೆ ವಿಷಯ ತಿಳಿಸಿ, ವ್ಹೀಲಿಂಗ್ ಮಾಡುತ್ತಿದ್ದ ಯುವಕನ ಬೈಕ್ ಅನ್ನು ಹಿಂಬಾಲಿಸಿದ್ದಾರೆ. ಇಬ್ಬರೂ ಕಾನ್‌ಸ್ಟೇಬಲ್‌ಗಳು ಸೇರಿ ಮೈಸೂರು–ಹುಣಸೂರು ರಸ್ತೆಯ ಕೃಷ್ಣ ಬೇಕರಿ ಬಳಿ ಯುವಕನನ್ನು ಬಂಧಿಸಿ, ಬೈಕ್ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ವಿವಿಪುರಂ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಾಭದ ಆಮಿಷ: ಆನ್‌ಲೈನ್‌ನಲ್ಲಿ 15 ಲಕ್ಷ ವಂಚನೆ

ಮೈಸೂರು,ಸೆ.16– ಕಂಪನಿಯೊಂದರಲ್ಲಿ ಹೂಡಿಕೆ ಮಾಡಿದರೆ ಹೆಚ್ಚು ಲಾಭ ದೊರೆಯುತ್ತದೆ ಎಂದು ನಂಬಿಸಿ ಇಂಜಿನಿಯರ್‌ವೊಬ್ಬರಿಗೆ ಆನ್‌ಲೈನ್ ಮೂಲಕ 15 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಕೆ.ಮೋಹನ್‌ಕುಮಾರ್(27) ವಂಚನೆಗೊಳಗಾದವರಾಗಿದ್ದು, 8002319345 ಸಂಖ್ಯೆಯಿಂದ ಕರೆ ಮಾಡಿದ ವಂಚಕ The marcomavenue.com ಕಂಪನಿಯಲ್ಲಿ ಟೆಲಿಗ್ರಾಂ ಗ್ರೂಪ್ ಮೂಲಕ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರುತ್ತದೆ ಎಂದು ಹೇಳಿದ್ದನ್ನು ನಂಬಿ ಅವರು 15 ಲಕ್ಷ ರೂ. ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ



ಪಟೇಲ್ ಕೆಂಚೇಗೌಡರು

ಮೈಸೂರು, ಸೆ. 16–ಮೈಸೂರು ತಾಲೂಕು ಕೆ.ಬಡಗಲಹುಂಡಿ ನಿವಾಸಿ, ಬೀರಿಹುಂಡಿ ಗ್ರಾಪಂ ಮಾಜಿ ಸದಸ್ಯ ಹಾಗೂ ಕೇರ್ಗಳ್ಳಿ ಕೆಎಸಿಸಿಎಸ್‌ಎನ್ ಸೊಸೈಟಿ ಹಾಲಿ ಸದಸ್ಯರಾಗಿದ್ದ ಪಟೇಲ್ ಕೆಂಚೇಗೌಡರು(85) ಶನಿವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಐವರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಭಾನುವಾರ) ಬೆಳಗ್ಗೆ 11.30ಕ್ಕೆ ಕೆ. ಬಡಗಲಹುಂಡಿಯ ಅವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಓಟಿ ಟೆಕ್ನೀಷಿಯನ್‌ಗಳಿಗೆ ಬುನಾದಿ ತರಬೇತಿ



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಆರ್ಥೋ ಓಟಿ ಟೆಕ್ನೀಷಿಯನ್‌ಗಳಿಗಾಗಿ ಶನಿವಾರ ಆಯೋಜಿಸಿದ್ದ ಬುನಾದಿ ತರಬೇತಿ ಕಾರ್ಯಕ್ರಮದಲ್ಲಿ ಕೀಲು ಮತ್ತು ಮೂಳೆ ತಜ್ಞ ಡಾ.ಎನ್.ನಿತ್ಯಾನಂದರಾವ್ ಪ್ರಾತ್ಯಕ್ಷಿಕೆ ನೀಡಿದರು. (ಬಲದಿಂದ) ಡಾ.ಶೈಲೇಶ್ ಪೈ, ಡಾ.ಫಹೀಮ್, ಬೀನಾ ಆಂಟನಿ ಚಿತ್ರದಲ್ಲಿದ್ದಾರೆ.

ಮೈಸೂರು, ಸೆ. 16(ಆರ್‌ಕೆ)– ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಆಪರೇಟಿಂಗ್ ರೂಮ್ ಪರ್ಸನಲ್ ಬುನಾದಿ ತರಬೇತಿ ಕೋರ್ಸ್ ಅನ್ನು ಏರ್ಪಡಿಸಲಾಗಿತ್ತು.

ಡಿಪ್ಯೆ ಸಿಂಥೆಸ್ ಸಂಸ್ಥೆ ಆಯೋಜಿಸಿದ್ದ ಒಂದು ದಿನದ ತರಬೇತಿಯಲ್ಲಿ ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ 50 ಮಂದಿ ಆಪರೇಷನ್ ಥಿಯೇಟರ್ (ಓಟಿ) ಟೆಕ್ನೀಷಿಯನ್‌ಗಳು, ಸಹಾಯಕರು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಮೂಳೆ ಮತ್ತು ಕೀಲು (ಆರ್ಥೋ) ಸಂಬಂಧಿತ ರೋಗಿಗಳಿಗೆ ಶಸ್ತ್ರಕ್ರಿಯೆ (ಆಪರೇಷನ್)ಯಲ್ಲಿ ತಜ್ಞ ವೈದ್ಯರಿಗೆ ಪೂರಕವಾಗಿ ಸಹಾಯ ಟೆಕ್ನೀಷಿಯನ್‌ಗಳಿಗೆ ಅಭಿವೃದ್ಧಿಗೊಂಡಿರುವ ತಂತ್ರಜ್ಞಾನ, ಆವಿಷ್ಕಾರಗಳಿಗನುಗುಣವಾಗಿ ಕೌಶಲ್ಯ ಮತ್ತು ಜ್ಞಾನ ಹೊಂದುವ ಸಲುವಾಗಿ ಇಂದಿನ ತರಬೇತಿ ಕೋರ್ಸ್ ಉಪಯೋಗವಾಯಿತು. ಸರ್ಜಿಕಲ್ ಟೆಕ್ನೀಷಿಯನ್‌ಗಳು, ಆಪರೇಟಿಂಗ್ ರೂಂ ನರ್ಸ್‌ಗಳು, ಸರ್ಜಿಕಲ್ ಅಸಿಸ್ಟೆಂಟ್‌ಗಳು ಹಾಗೂ ಇತರ ಆರೋಗ್ಯ ಕ್ಷೇತ್ರದಲ್ಲಿ ನಿರತರಾದ ಸಿಬ್ಬಂದಿಗೆ ಶಸ್ತ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕ್ರಮದ ಬಗ್ಗೆ ತಜ್ಞರು ತರಬೇತಿಯಲ್ಲಿ ಮಾಹಿತಿ ನೀಡಿದರು. ಇತ್ತೀಚಿನ ಟ್ರಾಮಾ ಇಂಪ್ಲಾಂಟ್‌ಗಳು, ಓಟಿ ಎಟಿಕೆಟ್, ಮೂಳೆ ಜೋಡಣೆ ಬಗ್ಗೆ ಉಪನ್ಯಾಸ, ಚರ್ಚೆ, ಪ್ರಾಯೋಗಿಕ ಪ್ರಾತ್ಯಕ್ಷಿಕೆ, ಪ್ರಶ್ನೋತ್ತರ, ಸಂವಾದದ ಮೂಲಕ ಅಗತ್ಯ ಮಾಹಿತಿ ನೀಡಲಾಯಿತಲ್ಲದೆ, ಮೂಳೆ ಶಸ್ತ್ರಕ್ರಿಯೆಯಲ್ಲಿ ಬಳಸುವ ಸಲಕರಣೆಗಳು, ವಿಧಾನಗಳ ಕುರಿತಂತೆ ತಜ್ಞರು ಓಟಿ ಅಸಿಸ್ಟೆಂಟ್‌ಗಳಿಗೆ ತಿಳಿವಳಿಕೆ ನೀಡಲಾಯಿತು.

ಫ್ರಾಕ್ಚರ್ಸ್ ಪ್ರಿನ್ಸಿಪಲ್ಸ್, ರಿಡಕ್ಷನ್ ತಂತ್ರಗಾರಿಕೆ, ಸ್ಕ್ರೂ ಮಾಡಲು ಬೇಕಾದ ಮೂಲ ಸಲಕರಣೆಗಳು, ಪ್ಲೇಟ್ ಅಳವಡಿಕೆ, ರೋಗಿಗಳಿಗೆ ರೇಡಿಯೇಷನ್ ಕೇರ್, ಎಕ್ಸ್ ರೇ, ಓಡುವ ವಿಧಾನಗಳು, ಓಪನ್ ಫ್ರಾಕ್ಚರ್ ನಿರ್ವಹಣಾ ತತ್ವಗಳ ಬಗ್ಗೆಯೂ ಮಾಹಿತಿ ನೀಡಲಾಯಿತು. ಪ್ರಸಿದ್ಧ ಆರ್ಥೋಪೆಡಿಕ್ ಸರ್ಜನ್‌ಗಳು ಹಾಗೂ ಅನುಭವ ಉಳ್ಳ ಓಟಿ ಸ್ಪೆಷಲಿಸ್ಟ್‌ಗಳು ಗೋಷ್ಠಿಗಳನ್ನು ನಡೆಸಿಕೊಟ್ಟರು. ಡಾ.ಶೈಲೇಶ್ ಪೈ, ಮಂಗಳೂರಿನ ಡಾ.ಫಹೀಮ್, ಸೆಲ್ವಿ ಮಾಣಿಕ್ಯಂ ಮತ್ತು ಬೀನಾ ಆಂಟನಿ ಅವರು ಶಿಬಿರಾರ್ಥಿಗಳಿಗೆ ಆರ್ಥೋ ಓಟಿಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಉಪನ್ಯಾಸ ನೀಡಿದರು. ಆರ್ಥೋಪೆಡಿಕ್ ಅಸೋಸಿಯೇಷನ್ ಆಫ್ ಸೌತ್ ಇಂಡಿಯಾ ಸರ್ಜನ್ಸ್ (OASIS) ಅಧ್ಯಕ್ಷರಾದ ಖ್ಯಾತ ಮೂಳೆ ತಜ್ಞ ಡಾ. ಎನ್. ನಿತ್ಯಾನಂದ ರಾವ್ ಅವರು ಟ್ರೇನಿಂಗ್ ಕೋರ್ಸ್ ಮೇಲ್ವಿಚಾರಣೆ ನಡೆಸಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದವರಿಗೆ ಶಿಬಿರವು ಮೌಲ್ಯಯುತ ಕಲಿಕಾ ಅನುಭವವನ್ನು ನೀಡಿತು.

ಇಂದು ವಿಶ್ವಕರ್ಮ ಜಯಂತಿ ಆಚರಣೆ



ಮೈಸೂರು, ಸೆ. 16– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ವಿಶ್ವಕರ್ಮ ಜಯಂತ್ಯುತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಭಾನುವಾರ (ಸೆ.17) ಕಲಾಮಂದಿರದಲ್ಲಿ ವಿಶ್ವಕರ್ಮ ಜಯಂತಿಯನ್ನು ಆಚರಿಸಲಾಗುತ್ತಿದೆ.

ಜಯಂತಿ ಆಚರಣೆ ಅಂಗವಾಗಿ ಬೆಳಗ್ಗೆ 8 ಗಂಟೆಗೆ ಇರ್ವಿನ್ ರಸ್ತೆಯ ಕಾಳಿಕಾಂಭ ಕಮಟೇಶ್ವರಸ್ವಾಮಿ ದೇವಸ್ಥಾನದಿಂದ ಜಾನಪದ ಕಲಾತಂಡಗಳೊಂದಿಗೆ ಕಲಾಮಂದಿರದವರೆಗೆ ಮೆರವಣಿಗೆ ನಡೆಯಲಿದೆ. ಬೆಳಗ್ಗೆ 11.30ಕ್ಕೆ ಕಲಾಮಂದಿರದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು, ವಿಶ್ವಕರ್ಮ ಏಕದಂಡಗಿ ಮಠದ ಶ್ರೀ ಸೂರ್ಯನಾರಾಯಣ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಭಾಷಣಕಾರರಾಗಿ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್ ಭಾಗವಹಿಸುವರು. ಮುಖ್ಯ ಅತಿಥಿಗಳಾಗಿ ಸಮಿತಿ ಅಧ್ಯಕ್ಷ ಸಿ.ಸಿದ್ದಾಚಾರ್, ಉಪಾಧ್ಯಕ್ಷ ರಾಜುಕಾರ್ಯ, ಕಾರ್ಯದರ್ಶಿ ಜಿ.ನಾರಾಯಣಚಾರ್, ಸಹ ಕಾರ್ಯದರ್ಶಿ ಸೋಮಾಚಾರ್ (ಸ್ವಾಮಿ), ಖಜಾಂಚಿ ರವಿಕುಮಾರ್, ಸಂಘಟನಾ ಕಾರ್ಯದರ್ಶಿ ಸಿದ್ದರಾಜು ಮತ್ತಿತರರು ಉಪಸ್ಥಿತರಿರುವರು.

ಸೆ.23, 24ರಂದು ಮೈಸೂರಿನ ಕೊಡಗು ಮಾಡೆಲ್ ಶಾಲೆಯಲ್ಲಿ ವಿಜ್ಞಾನ ಮೇಳ



ವಿಜ್ಞಾನ ಮೇಳದಲ್ಲಿ ನಡೆಯಲಿರುವ ಕರಿಯರ್ ಗೈಡೆನ್ಸ್ ಪ್ರೋಗ್ರಾಂ ಮತ್ತು ಫೋಲ್ಡ್‌ಸ್ಕೋಪ್ ಲೈವ್ ವರ್ಕ್‌ಶಾಪ್‌ನಲ್ಲಿ ಎಲ್ಲ ಮಕ್ಕಳು, ಪೋಷಕರು ಭಾಗವಹಿಸಬಹುದು.

ಮೈಸೂರು,ಸೆ.16–ಮೈಸೂರಿನ ವಿದ್ಯಾಶಂಕರ ನಗರದಲ್ಲಿರುವ ಕೊಡಗು ಮಾಡೆಲ್ ಸ್ಕೂಲ್, ಮೈಸೂರು ಪ್ರೊಮೋಟ್ಸ್ ಬೈ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್, ಮೈಸೂರು ಪೂರ್ವ ವಿದ್ಯಾಸಂಸ್ಥೆಯು ಸೆ.23 ಮತ್ತು 24ರ ಶನಿವಾರ ಮತ್ತು ಭಾನುವಾರದಂದು ವಿದ್ಯಾಶಂಕರನಗರದಲ್ಲಿರುವ ಶಾಲೆಯ ಆವರಣದಲ್ಲಿ ವಿಜ್ಞಾನ ಮೇಳವನ್ನು ಆಯೋಜಿಸಿದೆ.

ಈ ವಿಜ್ಞಾನ ಮೇಳವು ಮಕ್ಕಳಿಗೆ ಸೃಜನಶೀಲತೆ ಮತ್ತು ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವ ವೇದಿಕೆಯನ್ನು ಒದಗಿಸುತ್ತದೆ. ಇಲ್ಲಿ ವಿದ್ಯಾರ್ಥಿಗಳು ತಮ್ಮ ವೈಜ್ಞಾನಿಕ ಕೌಶಲ್ಯವನ್ನು ಪ್ರದರ್ಶಿಸಬಹುದು ಹಾಗೂ ವಿಜ್ಞಾನದ ಕಾರ್ಯ ಮಾದರಿಗಳನ್ನು ಪ್ರದರ್ಶಿಸುವ ಮೂಲಕ ವಿಜ್ಞಾನದ ಆವಿಷ್ಕಾರದಲ್ಲಿ ಆಸಕ್ತಿಯನ್ನು ಮೂಡಿಸುತ್ತದೆ. ಉದ್ಘಾಟನಾ ಸಮಾರಂಭವು ಸೆ.23ರಂದು ಬೆಳಗ್ಗೆ 10.00 ಗಂಟೆಗೆ ಅಕಾಡೆಮಿ ನ್ಯೂಸ್‌ಪೇಪರ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ 'ಸ್ಟಾರ್ ಆಫ್ ಮೈಸೂರು' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಡೆಪ್ಯುಟಿ ಸಿಇಒ, ಶಿಕ್ಷಣ ಮುಖ್ಯಸ್ಥ ಎಸ್.ಪ್ರವೀಣ್ ಕುಮಾರ್ ಹಾಗೂ ಕೊಡಗು ಮಾಡೆಲ್ ಸ್ಕೂಲ್ ಅಧ್ಯಕ್ಷ ಪುಲಿಯಂಡ ಎಸ್.ದೇವಯ್ಯ ಅವರಿಂದ ಉದ್ಘಾಟನೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

"10 ಮತ್ತು 12ನೇ ತರಗತಿಯನ್ನು ಪೂರ್ಣಗೊಳಿಸಿದ ನಂತರ ಏನು?" ಈ ಪ್ರಶ್ನೆಗೆ ಶ್ರೀ ಶಂಕರ್ ಬೆಳ್ಳೂರು–ಶೈಕ್ಷಣಿಕ ತರಬೇತುದಾರರು ವೃತ್ತಿ ಮಾರ್ಗದರ್ಶನಕ್ಕಾಗಿ ವಿಶೇಷವಾಗಿ 9 ರಿಂದ 12ನೇ ತರಗತಿಯ ಪಾಲಕರು ಮತ್ತು ವಿದ್ಯಾರ್ಥಿಗಳಿಗೆ 23ನೇ ಸೆಪ್ಟಂಬರ್ 2023 ರಂದು ಮಧ್ಯಾಹ್ನ 2.30 ಗಂಟೆಗೆ ಉತ್ತರಿಸುತ್ತಾರೆ. ಈ ಕಾರ್ಯಕ್ರಮ ಪೋಷಕರಿಗೆ ಸಾಕಷ್ಟು ಪ್ರಯೋಜನಕಾರಿಯಾಗಿದೆ.

ಸೆ.24 ಭಾನುವಾರದಂದು ಬೆಳಗ್ಗೆ 10 ಗಂಟೆಗೆ, 8ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪೇಪರ್ ಮೈಕ್ರೋಸ್ಕೋಪ್‌ಗಳನ್ನು ಸಿದ್ಧಪಡಿಸಿ ವೀಕ್ಷಣೆ ಮಾಡುವ ವಿನೂತನ ವಿಧಾನವನ್ನು ಸಿಎಸ್‌ಐಆರ್–ಕೇಂದ್ರ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ, ನಿವೃತ್ತ ಮುಖ್ಯ ವಿಜ್ಞಾನಿ ಕೊಳ್ಳೇಗಾಲ ಶರ್ಮಾ ಅವರು ನಡೆಸಿಕೊಡಲಿದ್ದಾರೆ. ಕುತೂಹಲಕಾರಿಯಾಗಿ ಈ ಕಾರ್ಯಾಗಾರದಲ್ಲಿ ತಮ್ಮ ಮಕ್ಕಳೊಂದಿಗೆ ಪೋಷಕರು ಕೂಡ ಭಾಗವಹಿಸಬಹುದು. ವಿಜ್ಞಾನ ಮೇಳದಲ್ಲಿ ಎಲ್ಲ ಮಕ್ಕಳು ಮತ್ತು ಪೋಷಕರು ಭಾಗವಹಿಸಬಹುದು. ಕರಿಯರ್ ಗೈಡೆನ್ಸ್ ಪ್ರೋಗ್ರಾಂ ಮತ್ತು ಫೋಲ್ಡ್‌ಸ್ಕೋಪ್ ಲೈವ್ ವರ್ಕ್‌ಶಾಪ್‌ನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಪೋಷಕರು ಮತ್ತು ವಿದ್ಯಾರ್ಥಿಗಳು ಮುಂಚಿತವಾಗಿ ನೋಂದಾಯಿಸಿಕೊಳ್ಳಬೇಕು. ಮಾಹಿತಿ ಮತ್ತು ನೋಂದಾಯಿಸಲು ಈ ಮೊಬೈಲ್ ಸಂಖ್ಯೆಗೆ ಕರೆ ಮಾಡಿ: 6363647704, 9845304360 ಸಂಪರ್ಕಿಸಬಹುದು.

ತೊಡೆ ಮೂಳೆ ಕ್ಯಾನ್ಸರ್‌ಗೆ ಕೃತಕ ಮೂಳೆ ಅಳವಡಿಕೆ ಮೂಲಕ ಯಶಸ್ವಿ ಚಿಕಿತ್ಸೆ



ಮೈಸೂರು, ಸೆ.16(ಜಿಎ)–ತೊಡೆ ಮೂಳೆಯ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ರೋಗಿಯೊಬ್ಬರಿಗೆ ಟೋಟಲ್ ಫೆಮರ್ ರೀಪ್ಲೇಸ್ಮೆಂಟ್ ವಿಧಾನದ ಶಸ್ತ್ರಚಿಕಿತ್ಸೆ ಮೂಲಕ ಕೃತಕ ಮೂಳೆ ಅಳವಡಿಸುವ ಶಸ್ತ್ರಚಿಕಿತ್ಸೆಯನ್ನು ನಗರದಲ್ಲಿ ಇದೇ ಪ್ರಥಮ ಬಾರಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನಡೆಸಲಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಎಂ.ಎನ್.ರವಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತೀವ್ರವಾದ ತೊಡೆಯ ಮೂಳೆ ನೋವಿನೊಂದಿಗೆ ಆಸ್ಪತ್ರೆಗೆ ಆಗಮಿಸಿದ 65 ವರ್ಷದ ಮಹಿಳೆಗೆ ಸಮಗ್ರ ರೋಗ ನಿರ್ಣಯ ಪರೀಕ್ಷೆಗೊಳಪಡಿಸಿದಾಗ ಆಕೆ ತೊಡೆ ಭಾಗದ ಮೂಳೆ ಕ್ಯಾನ್ಸರ್‌ನಿಂದ ಕೂಡಿದ್ದು, ಗಮನಕ್ಕೆ ಬಂದಿತು. ಈ ಹಿಂದೆಲ್ಲ ಇಂತಹ ಸಂದರ್ಭದಲ್ಲಿ ಸಂಪೂರ್ಣವಾಗಿ ತೊಡೆಯ ಭಾಗದವರೆಗೆ ಕಾಲನ್ನು ಕತ್ತರಿಸಬೇಕಾಗುತ್ತಿತ್ತು. ಆದರೆ ಈಗ ಅತ್ಯಾಧುನಿಕ ಚಿಕಿತ್ಸಾ ವಿಧಾನ ಪರಿಚಯವಾಗಿದ್ದು, ಇದರ ಮೂಲಕ ಆಕೆಗೆ ಸುಮಾರು ಎಂಟು ಗಂಟೆ ಶಸ್ತ್ರಚಿಕಿತ್ಸೆ ನಡೆಸಿ, ಕ್ಯಾನ್ಸರ್ ಪೀಡಿತ ಮೂಳೆ ತೆಗೆದು, ಲೋಹದ ಕೃತಕ ಮೂಳೆ ಅಳವಡಿಸಲಾಗಿದೆ. ಈಗ ಮಹಿಳೇ ಆರೋಗ್ಯದಿಂದಿದ್ದಾರೆ. ಈ ಶಸ್ತ್ರಚಿಕಿತ್ಸೆಯಲ್ಲಿ ಡಾ.ಕೆ.ಆರ್.ಸುಹಾರ್, ಡಾ.ಎಂ.ಬಿ. ಸುಮನ್ ಅವರ ತಂಡ ಭಾಗಿಯಾಗಿತ್ತು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಸುಹಾಸ್ ಮತ್ತು ಡಾ.ಸುಮನ್ ಉಪಸ್ಥಿತರಿದ್ದರು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 97.16 ಅಡಿ	ಇಂದಿನ ಮಟ್ಟ 2,276.26 ಅಡಿ	ಇಂದಿನ ಮಟ್ಟ 2,858.19 ಅಡಿ
ಹಿಂದಿನ ವರ್ಷದ ಮಟ್ಟ 124.28 ಅಡಿ	ಹಿಂದಿನ ವರ್ಷದ ಮಟ್ಟ 2,283.10 ಅಡಿ	ಹಿಂದಿನ ವರ್ಷದ ಮಟ್ಟ 2,858.00 ಅಡಿ
ನಿನ್ನೆಯ ಮಟ್ಟ 97.38 ಅಡಿ	ನಿನ್ನೆಯ ಮಟ್ಟ 2,276.25 ಅಡಿ	ನಿನ್ನೆಯ ಮಟ್ಟ 2858.32 ಅಡಿ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.9.2023 ಭಾನುವಾರ, ಮಳೆ ನಕ್ಷತ್ರ: ಉತ್ತರಾ 14.09.2023ರಿಂದ 27.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಹಸ್ತ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ದಿ ಬೆಟರ್ ಹ್ಯಾಂಡ್ ಸಂಸ್ಥೆ:** ರಕ್ತದಾನ ಶಿಬಿರ, ಸ್ಥಳ: ಆಚಾರ್ಯ ತುಳಸಿ ಡಯಾಗ್ನೋಸ್ಟಿಕ್ ಕೇಂದ್ರ, ನಾರಾಯಣಶಾಸ್ತ್ರಿ ರಸ್ತೆ, ಬೆಳಗ್ಗೆ 8ರಿಂದ.

■ **ಶ್ರೀ ಅಭಯಂ ಫೌಂಡೇಷನ್:** ಸುಮಂಗಲಿಯರಿಗೆ ಸ್ವರ್ಣಗೌರಿ, ಗಣೇಶ ಹಬ್ಬದ ಪ್ರಯುಕ್ತ ಬಾಗಿನ ಸಮರ್ಪಣಾ ಸಮಾರಂಭ, ಸಾನ್ನಿಧ್ಯ : ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ವಂಗೀಪುರ ನಂಬೀಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಸಮಾಜ ಸೇವಕ ಡಾ. ರಘುರಾಂ ರಾಜಪೇಯಿ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಶಾಸಕ ಹರೀಶ್‌ಗೌಡ, ಡಾ.ಎಂ.ಎಸ್.ಮುರಳೀಧರ ಶಾಸ್ತ್ರಾ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಬೆಳಗ್ಗೆ 8.30ಕ್ಕೆ.

■ **ಮೈಸೂರು ಜಿಲ್ಲಾ ವೀರ ಮಡಿವಾಳರ ಜಾಗೃತಿ ಯುವ ಬಳಗ:** ಪ್ರಧಾನಿ ನರೇಂದ್ರ ಮೋದಿಜೀಯವರ ಹುಟ್ಟುಹಬ್ಬದ ಪ್ರಯುಕ್ತ ರಕ್ತದಾನ ಶಿಬಿರ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಉಪಸ್ಥಿತರು: ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಶ್ರೀ ಹುಲಿಕಾಳಮ್ಮ ದೇವಸ್ಥಾನ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸ್ತ್ರೀ ರೋಗ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ.

■ **ರೋಗಮೋಚನ ಧನ್ವಂತರಿ ಸನ್ನಿಧಾನ, ಉತ್ತರಾಧಿ ಮಠ :** ಧನ್ವಂತರಿ ಜಯಂತಿ ಪ್ರಯುಕ್ತ ಬೃಹತ್ ಉಚಿತ ಆಯುರ್ವೇದ ತಪಾಸಣಾ ಶಿಬಿರ, ಸಾನ್ನಿಧ್ಯ : ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಶ್ರೀ ರಾಮಕೃಷ್ಣ ಆಶ್ರಮದ ಸಂಚಾಲಕ ಶ್ರೀ ಮಹಾಮೇಧಾನಂದ ಸ್ವಾಮೀಜಿ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಅತಿಥಿಗಳು : ಮೇಯರ್ ಶಿವಕುಮಾರ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ. ಹೇಮಂತ್‌ಕುಮಾರ್, ಸ್ಥಳ: ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪ, ಅಗ್ರಹಾರ, ಬೆಳಗ್ಗೆ 10ಕ್ಕೆ.

■ **ಸುಯೋಗ್ ಆಸ್ಪತ್ರೆ:** ಫೈಬ್ರೋಸ್ಕ್ಯಾನ್ ತಪಾಸಣಾ ಶಿಬಿರ, ಉದ್ಘಾಟನೆ: ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿದಾನಂದಜಿ ಮಹಾರಾಜ್, ಅಧ್ಯಕ್ಷತೆ: ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಮುಖ್ಯ ಅತಿಥಿಗಳು: ಡಾ.ಶರತ್‌ಕುಮಾರ್, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ವಿಶ್ವಕರ್ಮ ಜಯಂತ್ಯುತ್ಸವ ಸಮಿತಿ:** ವಿಶ್ವಕರ್ಮ ಜಯಂತಿ, ಬೆಳಗ್ಗೆ 8 ಗಂಟೆಗೆ ಇರ್ವಿನ್ ರಸ್ತೆಯ ಕಾಳಿಕಾಂಭ ಕಮಟೇಶ್ವರಸ್ವಾಮಿ ದೇವಸ್ಥಾನದಿಂದ ಜಾನಪದ ಕಲಾತಂಡಗಳೊಂದಿಗೆ ಕಲಾಮಂದಿರದವರೆಗೆ ಮೆರವಣಿಗೆ, ಬೆಳಗ್ಗೆ 11.30ಕ್ಕೆ ಸಭಾ ಕಾರ್ಯಕ್ರಮ, ಉದ್ಘಾಟನೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಾನ್ನಿಧ್ಯ: ಶ್ರೀ ಸೂರ್ಯನಾರಾಯಣ ಸ್ವಾಮೀಜಿ, ಅಧ್ಯಕ್ಷತೆ: ಶಾಸಕ ಹರೀಶ್‌ಗೌಡ, ಮುಖ್ಯ ಭಾಷಣ : ಡಾ. ಶೆಲ್ವಪಿಳ್ಳೈ ಅಯ್ಯಂಗಾರ್, ಸ್ಥಳ: ಕಲಾಮಂದಿರ.

■ **ಮೈಸೂರು ಧಾರ್ಮಿಕ ಪ್ರತಿಷ್ಠಾನ, ಮೈಸೂರು ಕಲಾ ಪ್ರತಿಷ್ಠಾನ :** ಮೈಸೂರು ಗಣೇಶ ಉತ್ಸವ, ಪರಿಸರ ಸ್ನೇಹಿ ಗಣೇಶ ವಿಗ್ರಹ ತಯಾರಿಕೆಯ ಕಾರ್ಯಾಗಾರ, ಮಕ್ಕಳಿಗೆ ವಿವಿಧ ರೀತಿಯ ಸ್ಪರ್ಧೆಗಳು, ಸ್ಥಳ: ಮಾಧವ ಕೃಪ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3ರಿಂದ.

■ **ಜೀವಧಾರ ರಕ್ತನಿಧಿ ಕೇಂದ್ರ ಹಾಗೂ 24ನೇ ವಾರ್ಡಿನ ಮಂಡಿಮೊಹಲ್ಲಾ ಹಿತರಕ್ಷಣಾ ವೇದಿಕೆ :** ಗೌರಿ ಗಣೇಶ ಹಬ್ಬ ಹಾಗೂ ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನಾಚರಣೆ ಅಂಗವಾಗಿ ಮಹಿಳೆಯರಿಗೆ ಬಾಗಿನ ಕಾರ್ಯಕ್ರಮ, ಸ್ಥಳ: ಶ್ರೀಮತಿ ಗುಣಬಾಯಿ ರುಕ್ಮಿಣಿಬಾಯಿ ಸಮುದಾಯ ಭವನ, ಲಷ್ಕರ್ ಮೊಹಲ್ಲಾ, ಸಂಜೆ 4 ಗಂಟೆಗೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಪರಿವರ್ತನ ರಂಗ ಸಮಾಜ :** 'ಅಂಗಳದಲ್ಲಿ ಮಂಗಳ ಹಕ್ಕಿಯ ನೆರಳು' ನಾಟಕ ಪ್ರದರ್ಶನ, ನಿರ್ದೇಶನ: ಪ್ರೊ.ಎಸ್.ಆರ್.ರಮೇಶ್, ಸ್ಥಳ: ನಮನ ಕಲಾಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ:** ಕಾರಂತ ನಮನ ನಾಟಕೋತ್ಸವದ ಅಂಗವಾಗಿ ಚೋರ ಚರಣದಾಸ ನಾಟಕ ಪ್ರದರ್ಶನ, ನಿರ್ದೇಶನ: ಮಂಡ್ಯ ರಮೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಶ್ರೀ ಉತ್ತರಾದಿ ಮಠ, ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಶ್ರೀ ಧನ್ವಂತರಿ ಜಯಂತಿ ಪ್ರಯುಕ್ತ ಸಪ್ತರಾತ್ರೋತ್ಸವ, ಬೆಳಗ್ಗೆ 8ಕ್ಕೆ ಫಲಪಂಚಾಮೃತ ಅಭಿಷೇಕ, 10,000 ಆಹುತಿಯ ಮಹಾ ಧನ್ವಂತರಿ ಯಾಗ, ವಿದ್ವಾಂಸರು ಹಾಗೂ ಗೃಹಸ್ಥರಿಂದ ಸಾಮೂಹಿಕ ವಿಷ್ಣುಸಹಸ್ರನಾಮ ಪಾರಾಯಣ, ಪಲ್ಲಕ್ಕಿ ಉತ್ಸವ, ಮಹಾಮಂಗಳಾರತಿ, ಧನ್ವಂತರಿ ಮಹಾಪ್ರಸಾದ, ಪಂಡಿತ್ ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರಿಂದ ಶ್ರೀ ಮದ್ಭಾಗವತ ಸಪ್ತಾಹ ಪ್ರವಚನ, ಸ್ಥಳ: ರೋಗ ಮೋಚನ ಶ್ರೀ ಧನ್ವಂತರಿ ಸನ್ನಿದನ, ಉತ್ತರಾದಿ ಮಠ, ಸಂಜೆ 7ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಪುಂಡಿಕೈ ಗಣಪಯ್ಯ ಭಟ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬದುಕು ಮಣ್ಣಿನೊಂದಿಗೆ –ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ವನವಾಸಿ ಕಲ್ಯಾಣದ ಪುಟ್ಟಮ್ಮ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.40 ನಮ್ಮ ಆರೋಗ್ಯ–ಕ್ಯಾನ್ಸರ್‌ಗೆ ಆಯುರ್ವೇದ ಚಿಕಿತ್ಸೆ ಕುರಿತು ಡಾ.ಬೀನಾ ಎಂ.ಡಿ.ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವ ಪ್ರಜ್ಞಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ–ಕೆ.ಬಿ.ಮೀನಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ನಾಗಚಂದ್ರಿಕಾ, ಶೇಷಗಿರಿದಾಸರು, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಜಿ.ಎಸ್.ಲಕ್ಷ್ಮಿ, 2.35 ಭಾರತ ಹಾಗೂ ಶ್ರೀಲಂಕಾ ತಂಡಗಳ ನಡುವೆ ಕೊಲೊಂಬೋದಲ್ಲಿ ನಡೆಯಲಿರುವ ಏಷಿಯಾ ಕಪ್ ಕ್ರಿಕೆಟ್ ಅಂತಿಮ ಪಂದ್ಯದ ವೀಕ್ಷಕ ವಿವರಣೆ, 6.50 ಕೃಷಿರಂಗ–ಪಶುರಂಗ–ಪ್ರಾಯೋಜಿತ ಕಾರ್ಯಕ್ರಮ. ಹೈನುಗಾರಿಕೆ ಹಾಗೂ ಸೈಲೇಜ್ ತಯಾರಿಕೆ ಕುರಿತು ಪಿರಿಯಾಪಟ್ಟಣ ತಾಲೂಕು ಹುಣಸವಾಡಿಯ ಪಿ.ಡಿ. ರಾಜಾರಾಮ ಪೈ ಅವರೊಂದಿಗೆ ಸಂದರ್ಶನ ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಭಾರತ ಹಾಗೂ ಶ್ರೀಲಂಕಾ ತಂಡಗಳ ನಡುವೆ ಕೊಲೊಂಬೋದಲ್ಲಿ ನಡೆಯಲಿರುವ ಏಷಿಯಾ ಕಪ್ ಕ್ರಿಕೆಟ್ ಅಂತಿಮ ಪಂದ್ಯದ ವೀಕ್ಷಕ ವಿವರಣೆ

ಸೆ.25, ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜಿಲ್ಲಾ ಮಟ್ಟದಲ್ಲಿ ಜನತಾ ದರ್ಶನ

● ಜಿಲ್ಲಾಧಿಕಾರಿಗಳಿಗೆ ಸಿಎಂ ಅಪರ ಮುಖ್ಯ ಕಾರ್ಯದರ್ಶಿ ಸೂಚನೆ ● ಪ್ರತಿ ತಿಂಗಳು ಜಿಲ್ಲಾ ಮಟ್ಟದ ಜನತಾ ದರ್ಶನ ● 15 ದಿನಕ್ಕೊಮ್ಮೆ ಡಿಸಿಗಳಿಂದ ತಾಲೂಕು ಮಟ್ಟದ ಜನತಾ ದರ್ಶನ

ಬೆಂಗಳೂರು,ಸೆ.16–ಸಾರ್ವಜನಿಕರ ಅಹವಾಲುಗಳನ್ನು ಜಿಲ್ಲಾ ಮಟ್ಟದಲ್ಲೇ ಆಲಿಸಿ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ನಡೆಸಬೇಕೆಂದು ಡಿಸಿಗಳಿಗೆ ತಿಳಿಸಿರುವ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯೆಲ್, ಸೆ.25ರಂದು ಎಲ್ಲಾ ಜಿಲ್ಲೆಗಳಲ್ಲೂ ಜನತಾ ದರ್ಶನ ಕಾರ್ಯಕ್ರಮ ನಡೆಸಬೇಕೆಂದು ತಿಳಿಸಿದ್ದಾರೆ.



ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ನಡೆಯಲಿರುವ ಜನತಾ ದರ್ಶನದಲ್ಲಿ ಸಂಬಂಧಿಸಿದ ಚುನಾಯಿತ ಪ್ರತಿನಿಧಿಗಳನ್ನು ಶಿಷ್ಟಾಚಾರಕ್ಕೆ ಅನುಗುಣವಾಗಿ ಆಹ್ವಾನಿಸಬೇಕು ಹಾಗೂ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಜಿಲ್ಲಾ ಎಸ್ಪಿಗಳು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಿಕೊಂಡು ಜವಾಬ್ದಾರಿಯುತವಾಗಿ ಜನತಾ ದರ್ಶನ ಕಾರ್ಯಕ್ರಮವನ್ನು ನಡೆಸಬೇಕು ಎಂದು ಸೂಚಿಸಿದ್ದಾರೆ.

ಸಂಬಂಧಿಸಿದ ಉಸ್ತುವಾರಿ ಕಾರ್ಯದರ್ಶಿಗಳು ಆಯಾ ಡಿಸಿಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಜನತಾ ದರ್ಶನ ಕಾರ್ಯಕ್ರಮದ ರೂಪುರೇಷೆಗಳನ್ನು ಸಿದ್ಧಪಡಿಸಬೇಕು. ಜಿಲ್ಲೆಯ ಜನರಿಗೆ ಜನತಾ ದರ್ಶನ ನಡೆಯುವ ಸ್ಥಳ, ವೇಳೆ ಇತ್ಯಾದಿಗಳನ್ನು ಜಾಹೀರಾತು ಮುಖಾಂತರ ಮುಂಚಿತವಾಗಿಯೇ ತಿಳಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ನೋಡಿಕೊಳ್ಳಬೇಕು. ಅಂದು ಜಿಲ್ಲಾ ಮಟ್ಟದ ಹಾಗೂ ಪ್ರತೀ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು ಜನತಾ ದರ್ಶನದಲ್ಲಿ ಹಾಜರಿದ್ದು, ಸಾರ್ವಜನಿಕರಿಂದ ಸ್ವೀಕೃತವಾಗದ ಎಲ್ಲಾ ಅರ್ಜಿಗಳನ್ನು ಹಾಲಿ ಚಾಲ್ತಿಯಲ್ಲಿರುವ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ ಜಿಪಿಜಿಆರ್ಎಸ್ ತಂತ್ರಾಂಶದಲ್ಲಿ ದಾಖಲಿಸುವುದಲ್ಲದೇ ಅರ್ಜಿಗಳ ವಿಲೇವಾರಿಯನ್ನು ನಿರ್ವಹಿಸಬೇಕು. ಅರ್ಜಿಗಳನ್ನು ಜಾಗ್ರತೆಯಿಂದ ಹಾಗೂ ಸಹಾನುಭೂತಿಯಿಂದ ಪರಿಶೀಲಿಸಿ ನಿಗದಿತ ಕಾಲಾವಧಿಯೊಳಗೆ ನಿಯಮಾನುಸಾರ ಪರಿಹಾರೋಪಾಯಗಳನ್ನು ಒದಗಿಸುವ ಕುರಿತು ಅಗತ್ಯ ಕ್ರಮ ವಹಿಸಬೇಕು. ಜಿಲ್ಲಾ ಮಟ್ಟದಲ್ಲಿ ಪ್ರತಿ ತಿಂಗಳು ಜನತಾ ದರ್ಶನ ನಡೆಸುವುದರ ಜೊತೆಗೆ ಡಿಸಿಗಳು ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾ ವ್ಯಾಪ್ತಿಯ ಒಂದು ತಾಲೂಕನ್ನು ಆಯ್ಕೆ ಮಾಡಿಕೊಂಡು ತಾಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ನಡೆಸಬೇಕು ಎಂದು ಅವರು ಸೂಚಿಸಿದ್ದಾರೆ.

ಲಾಂಛನ ಅನಾವರಣಗೊಳಿಸಿ ಶುಭ ಕೋರಿದ ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಸೆ.16– ತೆಲುಗು ಸಿನಿಮಾ ರಂಗದಲ್ಲಿ ಅನನ್ಯ ಸೇವೆಗೈದ ಸಾಧಕರಿಗೆ ಕೊಡ ಮಾಡುವ ನಂದಿ ಪ್ರಶಸ್ತಿ ಈಗ ಕನ್ನಡದಲ್ಲಿಯೂ ಪ್ರಾರಂಭವಾಗುತ್ತಿದೆ. ಅದರ ಮೊದಲ ಭಾಗ ಎನ್ನುವಂತೆ ನಂದಿ ಪ್ರಶಸ್ತಿಯ ಲಾಂಛನ ಬಿಡುಗಡೆ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅದರ ಲೋಗೋ ಲಾಂಚ್ ಮಾಡಿ, ಶುಭ ಕೋರಿದ್ದಾರೆ.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮಾ. ಹರೀಶ್ ನೇತೃತ್ವದಲ್ಲಿ ನಿನ್ನೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಲೋಗೋ ಅನಾವರಣ ಮಾಡಿಸಿದ್ದಾರೆ. ಅನಿತಾ ರೆಡ್ಡಿ, ನಿತ್ಯಾನಂದ ಪ್ರಭು, ಪದ್ಮಾವತಿ ಚಂದ್ರಶೇಖರ್, ಭಾಮಾ ಗಿರೀಶ್, Aiplex ಗಿರೀಶ್ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಂದಿ ಹೆಸರಿನಲ್ಲಿ ಪ್ರಶಸ್ತಿ ಕೊಡಬೇಕೆಂದು ಸಿನಿಮಾ ರಂಗದ ಸ್ನೇಹಿತರ ಜತೆ ಚರ್ಚಿಸಿ ಈ ತೀರ್ಮಾನ ಮಾಡಲಾಗಿದೆ ಎಂದು ಅಧ್ಯಕ್ಷ ಭಾ.ಮಾ. ಹರೀಶ್ ತಿಳಿಸಿದ್ದಾರೆ.

ಮೈಸೂರು ನಗರಕ್ಕೆ ಹರಿದು ಬರುತ್ತಿದೆ ಕೇರಳ ರಾಜ್ಯದ ವೈದ್ಯಕೀಯ ತ್ಯಾಜ್ಯ

ಟ್ರಕ್ ಪೊಲೀಸರಿಗೆ ಒಪ್ಪಿಸಿದ ಲಾರಿ ಮಾಲೀಕರ ಒಕ್ಕೂಟ

● ನಿಫಾ ವೈರಸ್ ಭೀತಿ ಮಧ್ಯೆ ಮೈಸೂರಿಗೆ ತ್ಯಾಜ್ಯ
● ಇದರ ಹಿಂದೆ ದೊಡ್ಡ ಮಾಫಿಯಾ ಕಾರ್ಯಾಚರಣೆ
● ಪೊಲೀಸರು, ಆರ್‌ಟಿಒ ಶಾಮೀಲಿರುವ ಶಂಕೆ
● ಮೈಸೂರಿಗೆ ರೋಗಗಳ ಆತಂಕದ ಜೊತೆಗೆ ಕಸ ಪೀಡೆ

ಮೈಸೂರು, ಸೆ.16(ಬಿಎಲ್‌ಯು)– ಕೇರಳದಲ್ಲಿ ನಿಫಾ ವೈರಸ್ ವ್ಯಾಪಕವಾಗಿ ಹರಡುತ್ತಿರುವ ಆತಂಕದ ಪರಿಸ್ಥಿತಿಯಲ್ಲಿ ಕೇರಳದ ವೈದ್ಯಕೀಯ ತ್ಯಾಜ್ಯವನ್ನು ಮೈಸೂರು ನಗರಕ್ಕೆ ತಂದು ಸುರಿಯಲಾಗುತ್ತಿದೆ. ಹೀಗೆ ವೈದ್ಯಕೀಯ ತ್ಯಾಜ್ಯದೊಂದಿಗೆ ಮೈಸೂರಿಗೆ ಬಂದಿದ್ದ ಟ್ರಕ್ ಅನ್ನು ಮೈಸೂರಿನ ಲಾರಿ ಮಾಲೀಕರ ಒಕ್ಕೂಟದವರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ನಿಫಾ ವೈರಸ್‌ನಿಂದ ಕೇರಳದಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಈ ಸೋಂಕಿರುವ 950 ಜನರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ನೂರಾರು ಮನೆಗಳನ್ನು ಕ್ವಾರಂಟೈನ್ ಮಾಡಲಾಗಿದೆ. ಇಂತಹ ಆತಂಕದ ಪರಿಸ್ಥಿತಿಯಲ್ಲಿ ಕೇರಳದ ವೈದ್ಯಕೀಯ ತ್ಯಾಜ್ಯವನ್ನು ಮೈಸೂರಿಗೆ ತಂದು ಸುರಿಯಲಾಗುತ್ತಿದೆ. ಕಳೆದ ಕೆಲವು ತಿಂಗಳ ಹಿಂದೆ ಕೇರಳ ಮೂಲದ ವ್ಯಕ್ತಿಗಳನ್ನು ಪೊಲೀಸರು ಬಂಧಿಸಿ, ಲಾರಿಗಳನ್ನು ವಶಕ್ಕೆ ಪಡೆದಿದ್ದರು. ಈಗ ಮತ್ತೆ ವೈದ್ಯಕೀಯ ತ್ಯಾಜ್ಯವನ್ನು ಮೈಸೂರಿಗೆ ತಂದು ಸುರಿಯುವುದು ಆರಂಭವಾಗಿದೆ.

ಮೈಸೂರು ಲಾರಿ ಮಾಲೀಕರ ಒಕ್ಕೂಟದ ಕಾರ್ಯದರ್ಶಿ ಅಭಿಷೇಕ್ ಮತ್ತು ವಿಶ್ವನಾಥ್ ಅವರು ಕಡಕೊಳ ಕೈಗಾರಿಕಾ ಪ್ರದೇಶದಿಂದ ಮೈಸೂರು ನಗರಕ್ಕೆ ಬರುವಾಗ ಕಡಕೊಳ ಚೆಕ್‌ಪೋಸ್ಟ್ ಬಳಿ ಹೋಗುತ್ತಿದ್ದ ಲಾರಿಯಿಂದ ದುರ್ವಾಸನೆ ಬರುತ್ತಿತ್ತು. ಟಾರ್ಪಾಲ್ ಮುಚ್ಚಿದ್ದರಿಂದ ಒಳಗೆ ಏನಿದೆ ಎಂಬುದು ಅವರಿಗೆ ತಿಳಿಯಲಿಲ್ಲ.

ತರುವಾಯ ಲಾರಿಯನ್ನು ಅಡ್ಡಗಟ್ಟಿ ನಿಲ್ಲಿಸಿ, ಟಾರ್ಪಾಲ್ ತೆಗೆದು ನೋಡಿದಾಗ ಅಲ್ಲಿ ವೈದ್ಯಕೀಯ ತ್ಯಾಜ್ಯವಿತ್ತು. ಲಾರಿ ಮಾಲೀಕನನ್ನು ಪ್ರಶ್ನಿಸಿದಾಗ, ವೈದ್ಯಕೀಯ ತ್ಯಾಜ್ಯವನ್ನು ಮೈಸೂರು ನಗರದ ಹೊರಭಾಗದಲ್ಲಿ ಸುರಿಯಲು ತಂದಿರುವುದಾಗಿ ಆತ ಸತ್ಯಾಂಶ



ಒಪ್ಪಿಕೊಂಡನು. ಕೂಡಲೇ ಅಭಿಷೇಕ್ ಹಾಗೂ ವಿಶ್ವನಾಥ್, ಮೈಸೂರು ದಕ್ಷಿಣ ಪೊಲೀಸರಿಗೆ ವಿಷಯ ತಿಳಿಸಿದರು. ಸ್ಥಳಕ್ಕೆ ಬಂದ ಪೊಲೀಸರು ಈಗ ಲಾರಿ ವಶಕ್ಕೆ ಪಡೆದು ಚಾಲಕನನ್ನು ವಿಚಾರಣೆಗೊಳಪಡಿಸಿದ್ದಾರೆ.

ವೈದ್ಯಕೀಯ ತ್ಯಾಜ್ಯವನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಹೀಗೆ ವಿಲೇವಾರಿ ಮಾಡಲು ಸರ್ಕಾರ ಕಂಪನಿಯೊಂದಕ್ಕೆ ಜವಾಬ್ದಾರಿ ವಹಿಸಿರುತ್ತದೆ. ಆ ಕಂಪನಿಯವರು ಆಸ್ಪತ್ರೆಗಳಿಂದ ನಿರ್ದಿಷ್ಟ ಶುಲ್ಕ ಪಡೆದು ವೈದ್ಯಕೀಯ ತ್ಯಾಜ್ಯ ಸಂಗ್ರಹಿಸಿ ಅದನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡುತ್ತಾರೆ.

ಆದರೆ ಕರ್ನಾಟಕಕ್ಕೆ ಹೊಂದಿಕೊಂಡಿರುವ ಕೇರಳ ಗಡಿಯಲ್ಲಿ ವೈದ್ಯಕೀಯ ತ್ಯಾಜ್ಯ ವಿಲೇವಾರಿ ಮಾಡುವ ಅಂತಹ ಕಂಪನಿಗಳು ಇಲ್ಲ. ಈ ಹಿನ್ನೆಲೆಯಲ್ಲಿ ಅಲ್ಲಿನ ವೈದ್ಯಕೀಯ ತ್ಯಾಜ್ಯವನ್ನು ಸನಿಹದ ಮೈಸೂರಿಗೆ ತಂದು ಸುರಿಯುತ್ತಿದ್ದಾರೆ. ಕರ್ನಾಟಕ ಚೆಕ್‌ಪೋಸ್ಟ್‌ನಲ್ಲಿರುವ ಪೊಲೀಸ್ ಹಾಗೂ ಆರ್‌ಟಿಒನವರಿಗೆ ಕೇರಳದಿಂದ ಬರುವ ವೈದ್ಯಕೀಯ ತ್ಯಾಜ್ಯದ ಬಗ್ಗೆ ಮಾಹಿತಿ ಇರುತ್ತದೆ. ಆದರೆ ಲಂಚ ನೀಡಿ ಸುಲಭವಾಗಿ ಕರ್ನಾಟಕದೊಳಗೆ ಪ್ರವೇಶಿಸಿರಬಹುದು ಎಂಬ ಆರೋಪವಿದೆ.

ವೈದ್ಯಕೀಯ ತ್ಯಾಜ್ಯವನ್ನು ಲಾರಿಗೆ ತುಂಬಲು 10 ಸಾವಿರ ರೂಪಾಯಿ, ಲಾರಿ ಬಾಡಿಗೆ 10 ಸಾವಿರ ರೂಪಾಯಿ ಹಾಗೂ ತ್ಯಾಜ್ಯ ಸುರಿಯಲು 5 ಸಾವಿರ ರೂಪಾಯಿ ಸೇರಿ ಒಂದು ಲಾರಿಗೆ 25 ಸಾವಿರ ರೂಪಾಯಿ ಸಿಗುತ್ತದೆ. ಕೇರಳದ ಲಾರಿಯವರು ಸುಲಭ ಬಾಡಿಗೆಗಾಗಿ ಹೀಗೆ ವೈದ್ಯಕೀಯ ತ್ಯಾಜ್ಯವನ್ನು ಮೈಸೂರು ನಗರಕ್ಕೆ ತಂದು ಸುರಿಯುತ್ತಿದ್ದಾರೆ. ಕೇರಳದ ವೈದ್ಯಕೀಯ ತ್ಯಾಜ್ಯವನ್ನು ಮೈಸೂರಿಗೆ ತಂದು ಸುರಿಯುವ ದೊಡ್ಡ ಮಾಫಿಯಾವೇ ಇದೆ ಎಂದು ಹೇಳಲಾಗುತ್ತಿದೆ.

ಕೇರಳದಲ್ಲಿ ನಿಫಾ ವೈರಸ್ ವ್ಯಾಪಕವಾಗಿ ಹರಡುತ್ತಿರುವ ಈ ಸಂದರ್ಭದಲ್ಲಿ ಮೈಸೂರಿಗೆ ತಂದು ವೈದ್ಯಕೀಯ ತ್ಯಾಜ್ಯ ಸುರಿಯುತ್ತಿರುವುದು ಆತಂಕಕಾರಿ ವಿಚಾರವಾಗಿದೆ. ಪೊಲೀಸ್ ಹಾಗೂ ಆರ್‌ಟಿಒ ಹಿರಿಯ ಅಧಿಕಾರಿಗಳು ಚೆಕ್‌ಪೋಸ್ಟ್ ಭದ್ರಪಡಿಸಬೇಕು. ವೈದ್ಯಕೀಯ ತ್ಯಾಜ್ಯ ತುಂಬಿರುವ ಇಂತಹ ಲಾರಿಗಳು ಕರ್ನಾಟಕಕ್ಕೆ ಬರುವುದಕ್ಕೆ ಕಡಿವಾಣ ಹಾಕಬೇಕು. ಇಲ್ಲದಿದ್ದರೆ ಮೈಸೂರು ಜನರಿಗೆ ಮತ್ತೊಂದು ಪಿಡುಗು ಕಾಡುವುದು ನಿಶ್ಚಿತ.

ರಾಜ್ಯದಲ್ಲಿ 91 ಯೋಜನೆಗಳ ಮೂಲಕ 7660 ಕೋಟಿ ಹೂಡಿಕೆಗೆ ಅನುಮೋದನೆ

● ಇದರಿಂದ 18146 ಜನರಿಗೆ ಉದ್ಯೋಗಾವಕಾಶ ● ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾಹಿತಿ



ಕರ್ನಾಟಕ ಉದ್ಯೋಗಮಿತ್ರ ಕಚೇರಿಯಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ 140ನೇ ಸಭೆ ನಡೆಯಿತು. ಈ ವೇಳೆ ಇಲಾಖೆ ಅಧಿಕಾರಿಗಳು ಇದ್ದರು.

ಬೆಂಗಳೂರು, ಸೆ.16(ಕೆಎಂಶಿ)–ರಾಜ್ಯದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಿರುವ ರಾಜ್ಯ ಸರ್ಕಾರ 91 ಯೋಜನೆಗಳ ಒಟ್ಟು 7,660 ಕೋಟಿ ರೂಪಾಯಿ ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಿದೆ.

ಇಲ್ಲಿನ ಕರ್ನಾಟಕ ಉದ್ಯೋಗಮಿತ್ರ ಕಚೇರಿಯಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಹಾಗೂ ಮೂಲಸೌಲಭ್ಯ ಅಭಿವೃದ್ಧಿ, ಸಚಿವ ಎಂ.ಬಿ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿಯ 140ನೇ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಯಿತು. ಈ ಯೋಜನೆಗಳಿಂದ ಸುಮಾರು 18,146 ಜನರಿಗೆ ಉದ್ಯೋಗ ಅವಕಾಶಗಳು ಲಭಿಸಲಿವೆಯೆಂದು ಸಚಿವ ಎಂ.ಬಿ.ಪಾಟೀಲ ಅವರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನುಮೋದನೆ ನೀಡಿರುವ ಪ್ರಸ್ತಾವನೆಗಳಲ್ಲಿ 50 ಕೋಟಿ ರೂಪಾಯಿಗೂ ಅಧಿಕ ಬಂಡವಾಳ ಹೂಡಿಕೆಯ 25 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಇವುಗಳಿಂದ 5,750.73 ಕೋಟಿ ರೂ. ಬಂಡವಾಳ ಹೂಡಿಕೆಯಾಗಲಿದ್ದು, ಸುಮಾರು 13,742 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ ಎಂದು ಸಚಿವ ಎಂ.ಬಿ.ಪಾಟೀಲ್ ಹೇಳಿದರು.

15 ಕೋಟಿಯಿಂದ ರೂ 50 ಕೋಟಿ ರೂ. ಒಳಗಿನ ಬಂಡವಾಳ ಹೂಡಿಕೆಯ 57 ಹೊಸ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಇವುಗಳಿಂದ 1,145 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು ಅಂದಾಜು 4,404 ಜನರಿಗೆ ಉದ್ಯೋಗ ಲಭ್ಯವಾಗಲಿದೆ. ಇದಲ್ಲದೇ ಹೆಚ್ಚುವರಿ ಬಂಡವಾಳ ಹೂಡಿಕೆಯ 8 ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಇದರಿಂದ 763.85 ಕೋಟಿ ಬಂಡವಾಳ ಹೂಡಿಕೆಯಾಗಲಿದೆ. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಸೆಲ್ವಕುಮಾರ್, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಆಯುಕ್ತ ಗುಂಜನ್ ಕೃಷ್ಣ, ಕಾರ್ಮಿಕ ಇಲಾಖೆ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ಕೆಐಎಡಿಬಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಂ.ಮಹೇಶ್, ಐಟಿ ಬಿಟಿ ಇಲಾಖೆ ನಿರ್ದೇಶಕ ಎಚ್.ವಿ.ದರ್ಶನ್, ಕರ್ನಾಟಕ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡಬಸವರಾಜು ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಪ್ರಮುಖ ಪ್ರಸ್ತಾವನೆಗಳ ಪಟ್ಟಿ

● ಪ್ರತಿಭಾ ಪಾಟೀಲ್ ಶುಗರ್ ಇಂಡಸ್ಟ್ರೀಸ್ ಪ್ರೈವೇಟ್ ಲಿ., ಕಣ್ಣೂರ್, ವಿಜಯಪುರ ತಾಲೂಕು, ವಿಜಯಪುರ, ಹೂಡಿಕೆ: 489.50 ಕೋಟಿ, ಉದ್ಯೋಗ: 275. ● ಗುರುದೇವ್ ರಿಫೈನರಿಸ್ & ಅಲೈಡ್ ಇಂಡಸ್ಟ್ರೀಸ್, ತಡವಳಗ ಪೋಸ್ಟ್, ವಿಜಯಪುರ ಜಿಲ್ಲೆ. ಹೂಡಿಕೆ: 488.49 ಕೋಟಿ, ಉದ್ಯೋಗ: 255. ● ದೇವಶ್ರೀ ಇಸ್ಪಾತ್ ಪ್ರೈವೇಟ್ ಲಿ., ಹಳವರ್ತಿ, ಕೊಪ್ಪಳ ಜಿಲ್ಲೆ, ಹೂಡಿಕೆ: 470 ಕೋಟಿ, ಉದ್ಯೋಗ: 800. ● ಏಕಸ್ ಕನ್ಸೂಮರ್ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್, ಇತ್ತಿಗಟ್ಟಿ, ಧಾರವಾಡ ಜಿಲ್ಲೆ, ಹೂಡಿಕೆ 456 ಕೋಟಿ, ಉದ್ಯೋಗ: 1,187. ● ಇಂಟಿಗ್ರೇಟೆಡ್ ಸೋಲಾರ್ ಪವರ್ ಪ್ರೈವೇಟ್ ಲಿ., ಮಿಂಡಹಳ್ಳಿ, ಕೋಲಾರ ಜಿಲ್ಲೆ, ಹೂಡಿಕೆ: 441.08 ಕೋಟಿ, ಉದ್ಯೋಗ: 720. ● ಸೌತ್ ವೆಸ್ಟ್ ಮೈನಿಂಗ್ ಲಿಮಿಟೆಡ್, ಮೂಸಿನಾಯಕನ ಹಳ್ಳಿ, ಬಳ್ಳಾರಿ ಜಿಲ್ಲೆ, ಹೂಡಿಕೆ: 411 ಕೋಟಿ, ಉದ್ಯೋಗ: 65. ● ಶಶಿ ಅಲೊಯ್ಸ್ ಪ್ರೈವೇಟ್ ಲಿ., ಭೈರನಾಯಕನಹಳ್ಳಿ, ಚಳ್ಳಕೆರೆ ತಾಲೂಕು, ಚಿತ್ರದುರ್ಗ, ಹೂಡಿಕೆ: 380 ಕೋಟಿ, ಉದ್ಯೋಗ: 400. ● ಎಸ್‌ಎಫ್‌ಎಸ್ ಗ್ರೂಪ್ ಇಂಡಿಯಾ ಪ್ರೈವೇಟ್ ಲಿ., ಬೆಳಗಾವಿ ಜಿಲ್ಲೆ, ಹೂಡಿಕೆ: 250 ಕೋಟಿ, ಉದ್ಯೋಗ: 844. ● ಮೈಸೂರ್ ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್, ರಾಯಚೂರು ಜಿಲ್ಲೆ, ಹೂಡಿಕೆ: 240 ಕೋಟಿ, ಉದ್ಯೋಗ: 157. ● ಲಾಮ್ ರಿಸರ್ಚ್ ಇಂಡಿಯಾ ಪ್ರೈವೇಟ್ ಲಿ., ಬೆಂಗಳೂರು, ಹೂಡಿಕೆ: 235.91 ಕೋಟಿ, ಉದ್ಯೋಗ: 1,724. ● ಟಾಟಾ ಸೆಮಿಕಂಡಕ್ಟರ್ ಅಸೆಂಬ್ಲಿ ಅಂಡ್ ಟೆಸ್ಟ್ ಪ್ರೈವೇಟ್ ಲಿ., ಕೊಲಾರ ಜಿಲ್ಲೆ, ಹೂಡಿಕೆ: 200 ಕೋಟಿ, ಉದ್ಯೋಗ: 155. ● ಮಾರುತಿ ಸುಜುಕಿ ಇಂಡಿಯಾ ಲಿ., ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೂಡಿಕೆ: 137 ಕೋಟಿ, ಉದ್ಯೋಗ: 1,908.





ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ ಸಹಯೋಗದೊಂದಿಗೆ ಜೆಕೆ ಟೈರ್ಸ್ ವತಿಯಿಂದ 33 ಲಕ್ಷ ವೆಚ್ಚದ ಸಿಎಸ್‌ಆರ್ ಫಂಡ್‌ನಲ್ಲಿ ಮಾನಸ ಗಂಗೋತ್ರಿಯ ಮಹಿಳಾ ವಿದ್ಯಾರ್ಥಿ ನಿಲಯದ ಆವರಣದಲ್ಲಿ ನಿರ್ಮಿಸಿರುವ ನೂತನ ಮಹಿಳಾ ಶೌಚಾಲಯ ಕಟ್ಟಡವನ್ನು ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ಸಿಂಡಿಕೇಟ್ ಸದಸ್ಯರಾದ ಡಾ.ಚೈತ್ರಾ ನಾರಾಯಣ, ಜೆಕೆ ಟೈರ್ಸ್‌ನ ವಿ.ಈಶ್ವರ್‌ರಾವ್, ಆರ್.ಜಗದೀಶ್ ಉಪಸ್ಥಿತರಿದ್ದರು.

ಕಾವಾ ಕಾಲೇಜಿನ ಪ್ರವೇಶಾತಿಗೆ ಅರ್ಜಿ

ಮೈಸೂರು, ಸೆ.16– ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಂಸ್ಥೆಯಲ್ಲಿ ಬ್ಯಾಚುಲರ್ ಆಫ್ ವಿಜುಯಲ್ ಆರ್ಟ್ಸ್ (ಬಿವಿಎ) [ಎನ್‌ಇಪಿ ಪದ್ಧತಿ] ದೃಶ್ಯಕಲೆಯಲ್ಲಿ 2023–24ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬಿ.ವಿ.ಎ. ಪದವಿ ಪ್ರವೇಶಾತಿಗಾಗಿ ಬಾಕಿ ಉಳಿದಿರುವ ಸೀಟುಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಅಧಿಸೂಚನೆಯಂತೆ ದಂಡ ಶುಲ್ಕದೊಂದಿಗೆ ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿ ಪದವಿಯಲ್ಲಿ 3 ನೇ ಸೆಮಿಸ್ಟರ್‌ನಿಂದ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಾ ಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ. ಅರ್ಜಿ ಸಲ್ಲಿಸಲು ಸೆ.22 ಕೊನೆಯ ದಿನಾಂಕವಾಗಿದ್ದು, ಸೆ.23ರಂದು ಬೆಳಗ್ಗೆ 11 ಗಂಟೆಗೆ ಅರ್ಹತಾ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ https://uucms.karnataka.gov.in ಮತು https://www.cavamysore.karnataka.gov.in. ಅಥವಾ ದೂ.ಸಂ. 0821–2438931 ಅನ್ನು ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆ : "ಕ್ರಿಕೆಟ್ ಆಟದ ಬಗ್ಗೆ ಅತಿ ಚಿಕ್ಕದಾಗಿ ಒಂದು ಪ್ರಬಂಧ ಬರೆಯಿರಿ.

ಗುಂಡ ಬರೆದದ್ದು : "ಮಳೆ ಬಂದ ಕಾರಣ ಪಂದ್ಯ ರದ್ದಾಯಿತು!"

ಮೈಸೂರು ಮಿತ್ರ

ಭಾನುವಾರ, 17 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕೊಂಬೆ ಮೇಲೆ ಕುಳಿತ ಹಕ್ಕಿ ಅಲುಗಾಡುವ ಆ ಕೊಂಬೆಯನ್ನು ನೋಡಿ ಭಯ ಪಡುವುದಿಲ್ಲ. ಕಾರಣ ಅದು ನಂಬಿದ್ದು ಕೊಂಬೆಯನ್ನಲ್ಲ, ತನ್ನ ರೆಕ್ಕೆಗಳನ್ನು. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಿ ಬಿಟ್ಟರೆ ಬಣ್ಣಗೇಡು

ನಿಮ್ಮ ಪತ್ರಗಳು

ಶೃಂಗಸಭೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಹರಣ!

ಮಾನ್ಯರೆ,

ದೇಶದಲ್ಲಿ ಆಡಳಿತಾರೂಢ ರಾಜಕೀಯ ಪಕ್ಷ ಅಥವಾ ರಾಜಕಾರಣಿಗಳು ಸಾರ್ವಜನಿಕವಾಗಿ ಶ್ರೀಸಾಮಾನ್ಯರಿಗೆ ಮತ್ತು ಮಾಧ್ಯಮಗಳಿಗೆ ವಿವರಣೆಯನ್ನು ನೀಡಬೇಕಾಗಿರುವುದು ಅವರ ಆದ್ಯ ಕರ್ತವ್ಯ. ಇದಕ್ಕೆ ಹೊರತಾಗಿರುವುದು ನರೇಂದ್ರ ಮೋದಿ ಮಾತ್ರ ಅವರು ಪ್ರಧಾನಿಯಾದ ನಂತರ ಒಂದೇ ಒಂದು ಬಹಿರಂಗ ಪತ್ರಿಕಾ ಗೋಷ್ಠಿ ನಡೆಸಿಲ್ಲ. ಇದು ಜಿ–ಟ್ವೆಂಟಿ ಶೃಂಗಸಭೆಯಲ್ಲೂ ಪುನರಾವರ್ತನೆಯಾಗಿ ಇತಿಹಾಸದಲ್ಲೇ ಕೆಟ್ಟ ದಾಖಲೆಗೆ ಮುನ್ನುಡಿ ಬರೆಯಿತು. ಪತ್ರಿಕಾ ಮಾಧ್ಯಮ ಪ್ರಜಾಪ್ರಭುತ್ವದಲ್ಲಿ ನಾಲ್ಕನೇ ಅಂಗ ಎಂದು ಹೇಳುತ್ತಾರೆ. ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ತಮ್ಮ ನಿಲುವನ್ನು ಪ್ರತಿಪಾದಿಸುತ್ತಾ ಮಾಧ್ಯಮಗಳ ಹಕ್ಕುಗಳು ನಾಗರಿಕರ ಹಕ್ಕಿನೊಳಗೆ ಅಡಗಿದೆ ಎಂದಿದ್ದರು.

ಕೆಲವೊಂದು ಸುಪ್ರೀಂ ಕೋರ್ಟ್ ತೀರ್ಪುಗಳಲ್ಲಿ ಪತ್ರಿಕಾ ಸ್ವಾತಂತ್ರ್ಯ ಒಂದು ಮೂಲ ಭೂತ ಹಕ್ಕೆಂದು ಸ್ಪಷ್ಟಪಡಿಸಲಾಗಿದೆ. ಜಿ–ಟ್ವೆಂಟಿ ಶೃಂಗಸಭೆ ಮುಕ್ತಾಯ ಆಗುತ್ತಿದ್ದಂತೆ ಸವಿವರಗಳನ್ನು ಸುದ್ದಿಗೋಷ್ಠಿ ಮೂಲಕ ಮಾಧ್ಯಮಗಳಿಗೆ ನೀಡಬೇಕಾಗಿತ್ತು. ಆದರೆ, ಅದಕ್ಕೆಲ್ಲಾ ನಿರ್ಬಂಧ ಹೇರಿದ್ದ ಮೋದಿ ಸರ್ಕಾರದ ನಡೆಗೆ ಸಾಕಷ್ಟು ವಿರೋಧ ವ್ಯಕ್ತವಾಗಿ ದ್ವಿಪಕ್ಷೀಯ ಮಾತುಕತೆ ವೇಳೆ ಭಾರತದಲ್ಲಿ ಮಾನವ ಹಕ್ಕುಗಳು ರಕ್ಷಣೆ ಹಾಗೂ ಪತ್ರಿಕಾ ಸ್ವಾತಂತ್ರ್ಯ ಗೌರವಿಸುವಂತೆ ಪ್ರಧಾನಿ ಮೋದಿಗೆ ಜೋ ಬೈಡೆನ್ ಹೇಳಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಸಂವಿಧಾನದ ಅನುಚ್ಛೇದ 19ರ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಹರಣವಾಗಿ ನಿರಂಕುಶ ಪ್ರಭುತ್ವ ಸೃಷ್ಟಿಯಾಗುತ್ತಿದೆ.

– ಅನಿಲ್ ಕುಮಾರ್, ನಂಜನಗೂಡು.

ಅರೇನಹಳ್ಳಿ ಮುಳ್ಳಕೆರೆ ದುರವಸ್ಥೆ ಸರಿಪಡಿಸಿ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕು ರಾವಂದೂರು ಹೋಬಳಿಯ ಅರೇನಹಳ್ಳಿ ಗ್ರಾಮದಲ್ಲಿ ಎರಡು ಕೆರೆಗಳಿವೆ. ಅದರಲ್ಲಿ ಒಂದು ಹೊಸಕಟ್ಟೆ ಮತ್ತೊಂದು ಮುಳ್ಳಕೆರೆ. ಇದರಲ್ಲಿ ಇದ್ದ ಮಟ್ಟಿಗೆ ಪರವಾಗಿಲ್ಲ ಎಂದರೆ ಅದು ಹೊಸಕಟ್ಟೆ, ಆದರೆ ತೀರಾ ತಾತ್ಸಾರಕ್ಕೆ ಒಳಗಾಗಿರುವುದು ಮುಳ್ಳಕೆರೆ. ಈಗಾಗಲೇ ಹೊಸಕಟ್ಟೆ ಕೆರೆಯ ಬಯಲಿನಲ್ಲಿ ಗದ್ದೆ ಹೊಂದಿರುವ ರೈತರು ಭತ್ತ ಬೆಳೆಯಲು ಅಗತ್ಯ ಕ್ರಮಗಳನ್ನು ಕೈಗೊಂಡು ಪೈರು ಧರೆಗಿಳಿಸಲು ತೀರಾ ಉತ್ಸುಕತೆಯಿಂದ ಇದ್ದಾರೆ. ಮತ್ತೊಂದು ಕಡೆ ಮುಳ್ಳಕೆರೆ ಬಯಲಿನ ರೈತರು ಯಾವಾಗ ಗದ್ದೆಗಳಿಗೆ ನೀರು ಹರಿದು ಬರುವುದೋ ಎಂದು ಕಾದು ಕಾದು ಕೊರಗುತ್ತಿದ್ದಾರೆ. ಅಂದರೆ ಇಲ್ಲಿನ ಕೆರೆ ತುಂಬಲು ಇಲ್ಲಿಗೆ ಸಮರ್ಪಕವಾದ ನೀರಿನ ಹರಿವು ಬರುವಂತೆ ಕಾಲುವೆ ಮಾರ್ಗ ನಿರ್ಮಾಣ ಮಾಡಿಲ್ಲ. ಇದ್ದರೂ ಅದು ಅವೈಜ್ಞಾನಿಕವಾಗಿದೆ. ಈ ಬಗ್ಗೆ ಗ್ರಾಮ ಪಂಚಾಯತ್ ಸದಸ್ಯರಿಗೆ ತಿಳಿಸಲಾಗಿದೆ. ಆದರೂ ಈ ಬಗ್ಗೆ ಯಾವುದೇ ರೀತಿಯ ಕ್ರಮಗಳನ್ನು ಕೈಗೊಂಡಿಲ್ಲ. ಕೆಲವೊಂದು ಸಬೂಬು ಹೇಳಿ ದಿನದೂಡುತ್ತಿದ್ದಾರೆ. ಇಂತಹ ಬೆಳವಣಿಗೆಗಳು ಅಭಿವೃದ್ಧಿಗೆ ಆಘಾತಕಾರಿ. ಜತೆಗೆ ಇವರಿಗೆ ಸಾಥ್ ನೀಡುವ ಪಿಡಿಓಗಳಂತಹ ಅಧಿಕಾರಿ ವರ್ಗ ಇದ್ದರಂತೂ ಅಲ್ಲಿನ ಅಭಿವೃದ್ಧಿ ಮರೀಚಿಕೆಯೇ ಸರಿ. ಇಂತಹ ಮನೋಧೋರಣೆಯ ಬದಲಿಗೆ ಆದಷ್ಟು ಬೇಗ ಹಾರಂಗಿ ಅಣೆಕಟ್ಟು ಅಥವಾ ಕರಡಿಲಕ್ಕನ ಕೆರೆಯ ಏತ ನೀರಾವರಿಯಿಂದ ಬರುವ ನೀರನ್ನು ಮುಳ್ಳಕೆರೆಗೂ ಹರಿಸಿದರೆ ಎಷ್ಟೋ ಬಡರೈತರಿಗೆ ತುಂಬಾ ಅನುಕೂಲವಾಗುತ್ತದೆ ಅಲ್ಲವೇ.

ಈ ಬಗ್ಗೆ ಪಿರಿಯಾಪಟ್ಟಣ ತಾಲ್ಲೂಕು ನೀರಾವರಿ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ, ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆ ಸರಿಯೇ?

ಮಾನ್ಯರೆ,

ಮೈಸೂರಿನ ಎಲ್ಲಾ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಕವರ್‌ಗಳನ್ನು ಬಳಸುತ್ತಿದ್ದಾರೆ. ಹೋಟೆಲ್ ಮತ್ತು ಅಂಗಡಿಗಳ ಮೇಲೆ ದಾಳಿ ಮಾಡಿ ದಂಡ ವಿಧಿಸುವ ಅಧಿಕಾರಿಗಳು ಇವರ ಮೇಲೇಕೆ ಮೃದು ಧೋರಣೆ ತೋರುತ್ತಿದ್ದಾರೆ. ಕಾನೂನು ಪಾಲನೆ ಎಲ್ಲರಿಗೂ ಒಂದೇ ಅಲ್ಲವೇ? –ನೊಂದ ಪರಿಸರವಾದಿಗಳು, ಮೈಸೂರು.

ಸಾರ್ವಜನಿಕ ಶೌಚಾಲಯಗಳ ಬಳಕೆ ಉಚಿತವಾಗಲಿ

ಮಾನ್ಯರೆ,

ರಾಜ್ಯದಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕ ವಲಯದಲ್ಲಿರುವ ಬಸ್ ತಂಗುದಾಣ ಮತ್ತು ರೈಲ್ವೆ ನಿಲ್ದಾಣ, ನಗರ ಪ್ರದೇಶದ ಕೆಲವು ಕಡೆ, ಕೆಲವು ಆಸ್ಪತ್ರೆಗಳಲ್ಲಿ, ಕೆಲವು ವ್ಯಾಪಾರದ ಸ್ಥಳಗಳಲ್ಲಿ ಹಾಗೂ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿರುವ ಶೌಚಾಲಯಗಳಿಗೆ ಹಣ ನೀಡಿ ಪ್ರತಿನಿತ್ಯ ಲಕ್ಷಾಂತರ ಜನರು ಉಪಯೋಗಿಸುತ್ತಾರೆ. ಸರ್ಕಾರವು ಈಗಾಗಲೇ ರಾಜ್ಯಕ್ಕೆ ವಿವಿಧ ಉಚಿತ ಸೌಲಭ್ಯ ನೀಡಿದೆ. ಶೌಚಾಲಯಗಳು ಉಚಿತವಾದಲ್ಲಿ ಇಂದಿಗೂ ಸಹ ರಾಜ್ಯದಾದ್ಯಂತ ಕೆಲವರಿಗೆ ವಾಸ ಮಾಡಲು ಮನೆಗಳಿಲ್ಲದೆ ರಸ್ತೆ, ಮೈದಾನ, ಉದ್ಯಾನವನ, ಬಸ್ಸು , ರೈಲು ನಿಲ್ದಾಣಗಳು ಮತ್ತು ಇತರೆ ಸ್ಥಳಗಳಲ್ಲಿ ಮಲಗಿ ಜೀವನ ನಡೆಸುವವರಿಗೆ ಸಾರ್ವಜನಿಕ ಶೌಚಾಲಯಗಳನ್ನು ಉಚಿತವಾಗಿ ಬಳಸಲು ಅವಕಾಶ ಕಲ್ಪಿಸಿದರೆ ಅನುಕೂಲವಾಗುತ್ತದೆ. ಕೆಲವರು ಹಣ ಇಲ್ಲದೆ ಸಾರ್ವಜನಿಕ ಪ್ರದೇಶಗಳನ್ನು ಲೆಕ್ಕಿಸದೆ ಅಲ್ಲಲ್ಲಿ ಮಹಿಳೆಯರು ಇದ್ದರೂ ಕೆಲವು ಪುರುಷರು ಮೂತ್ರ ವಿಸರ್ಜನೆ ಮಾಡುವುದರಿಂದ ಜನರಿಗೆ ಕಿರಿಕಿರಿ ಮತ್ತು ತೊಂದರೆಯಾಗುತ್ತದೆ. ಆದ್ದರಿಂದ ಶೌಚಾಲಯಗಳ ಬಳಕೆಯ ಸೌಲಭ್ಯವನ್ನು ಉಚಿತವಾಗಿ ನೀಡಿ ಸಮಾಜಕ್ಕೆ ಹರಡುವ ರೋಗಗಳನ್ನು ತಡೆಯಬೇಕೆಂದು ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ನಿರ್ಮಲಾ ಕಾನ್ವೆಂಟ್ ಬಳಿ ಹಸುಗಳ ಉಪಟಳ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ವಿ.ವಿ. ಮೊಹಲ್ಲಾ 2ನೇ ಮುಖ್ಯ ರಸ್ತೆ ನಿರ್ಮಲಾ ಕಾನ್ವೆಂಟ್ ಬಳಿ ಹಸುಗಳ ಉಪಟಳ ಹೆಚ್ಚಾಗಿದೆ. ಸ್ವಲ್ಪ ದಿನದ ಹಿಂದೆ ಗೂಳಿಯೊಂದು ಅಶೋಕ ರಸ್ತೆ ಗೀತಾ ಮಂದಿರದ ಬಳಿ ಜನರನ್ನು ಅಟ್ಟಾಡಿಸಿ ಮಾರಣಾಂತಿಕವಾಗಿ ಗಾಯಗೊಳಿಸಿತ್ತು. ಚಿಕ್ಕ ಮಕ್ಕಳು, ದ್ವಿಚಕ್ರ ವಾಹನ ಚಾಲಕರು, ಶಾಲಾ ಮಕ್ಕಳನ್ನು ಕರೆದೊಯ್ಯುವ ವ್ಯಾನ್ ಚಾಲಕರು ಎಲ್ಲರಿಗೂ ಈ ಹಸುಗಳಿಂದ ತೊಂದರೆಯಾಗಿದೆ. ಹಸುಗಳು ಚಿಕ್ಕ ಮಕ್ಕಳನ್ನು ತಿವಿದು ಗಾಯಗೊಳಿಸುವ ಸಾಧ್ಯತೆ ಇದೆ. ಮೈಸೂರು ಮಹಾನಗರ ಪಾಲಿಕೆ, ಗೋವು ಸಂರಕ್ಷಣಾ ದಳದವರು ಈ ಸಮಸ್ಯೆ ಬಗೆಹರಿಸಬೇಕಾಗಿ ಮನವಿ.

– ನೊಂದ ವಿದ್ಯಾರ್ಥಿಗಳು, ನಿರ್ಮಲಾ ಕಾನ್ವೆಂಟ್, ಮೈಸೂರು.



ಪಿಒಪಿ ಗಣಪನ ಮುಂದೆ ಮಣ್ಣಿನ ಗಣಪ!

- ನಿಷೇಧಿತ ಪಿಒಪಿ ಗಣಪನ ಮೂರ್ತಿಗೆ ಡಿಮ್ಯಾಂಡು
- ಪರಿಸರ ಸ್ನೇಹಿ ಮಣ್ಣಿನ ಗಣಪನಿಗೆ ಕುಗ್ಗಿದ ಬೇಡಿಕೆ
- ವಿವಿಧ ಬಗೆಯ ಗಣಪನಮೂರ್ತಿ ಮಾರುಕಟ್ಟೆಗೆ



■ ಎಂ.ಟಿ.ಯೋಗೇಶ್‌ಕುಮಾರ್

ನಾಡಿನಾದ್ಯಂತ ಗಣೇಶ ಚತುರ್ಥಿಯ ಸಂಭ್ರಮ ಮನೆ ಮಾಡಿದ್ದು, ಸಾಂಸ್ಕೃತಿಕ ನಗರಿ ಮೈಸೂರಲ್ಲಿ ನಿಷೇಧಿತ ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣೇಶನ ಮೂರ್ತಿಯ ಹಾವಳಿಯಿಂದ ಈ ಬಾರಿಯೂ ಪರಿಸರ ಸ್ನೇಹಿ ಮಣ್ಣಿನ ಗಣಪನ ಮೂರ್ತಿಗೆ ಬೇಡಿಕೆ ಕುಂದಿ, ಕುಶಲಕರ್ಮಿಗಳು ಚಿಂತಾಕ್ರಾಂತರಾಗಿದ್ದಾರೆ.

ಗಣೇಶನ ಹಬ್ಬಕ್ಕೆ ಇನ್ನೊಂದೇ ದಿನ ಮಾತ್ರ ಬಾಕಿ ಇದ್ದು, ಪರಿಸರಸ್ನೇಹಿ ಜೇಡಿಮಣ್ಣಿನಿಂದ ತಯಾರಿಸಿದ ಗಣೇಶನ ಮೂರ್ತಿಗೆ ಜನರಿಂದ ನಿರೀಕ್ಷಿತ ಪ್ರಮಾಣದಲ್ಲಿ ಬೇಡಿಕೆ ವ್ಯಕ್ತವಾಗಿಲ್ಲ. ಈ ಹಿನ್ನೆಲೆಯಲ್ಲಿ ತಾವು ಸಾಲ–ಸೋಲ ಮಾಡಿ ತಯಾರಿಸಿರುವ ಗಣೇಶನ ಮೂರ್ತಿಗಳು ಮಾರಾಟವಾಗುತ್ತವೋ–ಇಲ್ಲವೋ ಎಂಬ ಆತಂಕ ಗಣಪನ ಮೂರ್ತಿ ತಯಾರಕರಲ್ಲಿ ಮನೆ ಮಾಡಿದೆ.

ಪರಿಸರ ಸಂರಕ್ಷಣೆಯ ಹಿತ ದೃಷ್ಟಿಯಿಂದ ಕಳೆದ ಕೆಲ ವರ್ಷಗಳ ಹಿಂದೆಯೇ ಪರಿಸರಕ್ಕೆ ಮಾರಕವಾದ ಹಾಗೂ ನೀರಿನಲ್ಲಿ ಅಷ್ಟು ಬೇಗ ಕರಗದ ಪ್ಲಾಸ್ಟರ್ ಆಫ್ ಪ್ಯಾರೀಸ್ (ಪಿಒಪಿ)ನಿಂದ ತಯಾರಿಸಿರುವ ಗಣೇಶನ ಮೂರ್ತಿ ಬಳಕೆ ನಿಷೇಧಿಸುವ ಆದೇಶ ಹೊರಡಿಸಲಾಗಿತ್ತಾದರೂ, ಕೆಲವು ವ್ಯಾಪಾರಿಗಳಿಗೆ ತಪ್ಪು ಮಾಹಿತಿ ನೀಡಿ ಪಿಒಪಿ ಗಣೇಶನ ಮೂರ್ತಿಯನ್ನು ನೆರೆ ರಾಜ್ಯಗಳ ತಯಾರಕರು ಸರಬರಾಜು ಮಾಡುತ್ತಿದ್ದಾರೆ. ಇದರಿಂದ ಕುಶಲಕರ್ಮಿಗಳು, ಅದರಲ್ಲೂ ಕುಂಬಾರಿಕೆ ವೃತ್ತಿಯನ್ನೇ ಆಧರಿಸಿದ ಸ್ಥಳೀಯರು ಮಣ್ಣಿನಿಂದ ತಯಾರಿಸುತ್ತಿರುವ ಮಣ್ಣಿನ ಗಣಪನ ಮೂರ್ತಿಗಳು ಮಾರಾಟವಾಗದೇ ಚಿಂತಾಕ್ರಾಂತರಾಗಿದ್ದಾರೆ.

ಆಕರ್ಷಕ ಪಿಒಪಿ ಗಣಪ: ಮೈಸೂರಿನ ಒಂಟಿಕೊಪ್ಪಲು, ವಿಜಯನಗರ, ಟೆರೇಷಿಯನ್ ಕಾಲೇಜು ವೃತ್ತ, ಹೆಬ್ಬಾಳು ಸೇರಿದಂತೆ ವಿವಿಧೆಡೆ ಆಳೆತ್ತರದ, ವರ್ಣರಂಜಿತ ಪಿಒಪಿ ಗಣೇಶನ ಮೂರ್ತಿಗಳ ಮಾರಾಟ ಜೋರಾಗಿಯೇ ನಡೆಯುತ್ತಿದೆ. ವಿವಿಧ ಬಣ್ಣ ಮಾತ್ರವಲ್ಲದೆ, ಆಕರ್ಷಕ ವಿನ್ಯಾಸ ಹಾಗೂ ವಿವಿಧ ರೂಪದಲ್ಲಿ ತಯಾರಿಸಿದ ಪಿಒಪಿ ಗಣೇಶನ ಮೂರ್ತಿಗೆ ಯುವ ಸಮುದಾಯ ಮಾರುಹೋಗುತ್ತಿದ್ದು, ಮಣ್ಣಿನ ಗಣೇಶನ ಮೂರ್ತಿಯತ್ತ ಅವರ ಗಮನ ವಿಲ್ಲ. ಪಿಒಪಿ ಗಣೇಶನ ಮೂರ್ತಿ ತಮಿಳುನಾಡು, ಮಹಾರಾಷ್ಟ್ರ ಸೇರಿದಂತೆ ಕೆಲ ರಾಜ್ಯಗಳಿಂದ ಸಾವಿರಾರು ಸಂಖ್ಯೆ ಯಲ್ಲಿ ಮೈಸೂರು ಪ್ರವೇಶಿಸಿದ್ದು, ಹೆಚ್ಚಿನ ಕಮಿಷನ್ ಆಸೆ ತೋರಿಸಿ, ಕೆಲವು ಮಾರಾಟಗಾರರ ಮೂಲಕ ಪಿಒಪಿ ಗಣೇಶನ ಮೂರ್ತಿ ಮಾರಾಟ ಮಾಡಿಸಲಾಗುತ್ತಿದೆ.

ಪಿಒಪಿ ಗಣೇಶನ ಮೂರ್ತಿ ಪೂಜಿಸಿದ ಬಳಿಕ ವಿಸರ್ಜನೆ ಮಾಡುವುದರಿಂದ ಜಲಚರಗಳಿಗೆ ಹಾನಿಯಾಗುತ್ತದೆ. ರಾಸಾಯನಿಕ ಮಣ್ಣಿಗೆ ಸೇರುವುದರಿಂದ ಮಣ್ಣಿನ ಫಲವತ್ತತೆಯೂ ಹಾಳಾಗುತ್ತದೆ. ಈ ಎಲ್ಲಾ ಅಂಶವನ್ನು ಮುಚ್ಚಿಟ್ಟು, ಸ್ಥಳೀಯ ಕೆಲ ವ್ಯಾಪಾರಿಗಳಿಗೆ ತಪ್ಪು ಮಾಹಿತಿ ನೀಡಿ, ಇಂತಹ ಗಣೇಶನ ಮೂರ್ತಿಗಳನ್ನು ಮಾರಾಟ ಮಾಡಿಸಲಾಗುತ್ತಿದೆ. ಇದರಿಂದ ಮಣ್ಣಿನ ಗಣೇಶನ ಮೂರ್ತಿಗೆ ಬೇಡಿಕೆ ಕುಸಿದಿದೆ.

ಧಾರ್ಮಿಕ ಭಾವನೆಗೆ ಧಕ್ಕೆ ಆತಂಕ: ಪರಿಸರಕ್ಕೆ ಮಾರಕವಾದ ಪಿಒಪಿ ಗಣೇಶನ ಮೂರ್ತಿ ಮಾರಾಟಕ್ಕೆ ಅವಕಾಶ ಇಲ್ಲದಿದ್ದರೂ, ಮೈಸೂರು ಮಹಾನಗರ ಪಾಲಿಕೆ ಕಾರ್ಯಾಚರಣೆಗೆ ಹಿಂದೇಟು ಹಾಕುತ್ತಿದೆ. ಧಾರ್ಮಿಕ ಭಾವನಕ್ಕೆ ಧಕ್ಕೆಯಾಗುವ ಆತಂಕ ಇರುವುದರಿಂದ ಕೆಲವೆಡೆ ದಾಳಿ ನಡೆಸಿ, ವ್ಯಾಪಾರಿಗಳಿಗೆ ದಂಡ ವಿಧಿಸಿ, ಪಿಒಪಿ ಗಣೇಶನ ಮೂರ್ತಿ ಮಾರಾಟ ಮಾಡದಂತೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಆದರೆ, ಬಂಡವಾಳ ಹಾಕಿದ್ದೇವೆ ಎಂದು ಹೇಳಿ ಕದ್ದು ಮುಚ್ಚಿ ಪಿಒಪಿ ಗಣೇಶನಮೂರ್ತಿಯನ್ನು ಮಾರಾಟ ಮಾಡಲಾಗುತ್ತಿದೆ.

ವ್ಯಾಪಾರಿಗಳು ಜವಾಬ್ದಾರಿ ಮೆರೆಯಬೇಕು: ಲಾಭದ ಹಿತದೃಷ್ಟಿ ಮಾತ್ರ ಪರಿಗಣಿಸದೆ, ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಕೊಡುಗೆ ನೀಡುವ ದೃಷ್ಟಿಯಿಂದಲಾದರೂ ಬರುವ ವರ್ಷಗಳಲ್ಲಿ ಪಿಒಪಿ ಗಣೇಶನ ಮೂರ್ತಿ ಮಾರಾಟ ಮಾಡದೇ ವ್ಯಾಪಾರಿಗಳು ಜವಾಬ್ದಾರಿ ಮೆರೆಯಬೇಕು. ಉತ್ತಮ ಪರಿಸರ ಎಲ್ಲರಿಗೂ ಮುಖ್ಯ. ಪರಿಸರಕ್ಕೆ ಹಾನಿಯುಂಟಾದರೆ, ಅದರಿಂದ ಆಗುವ ದುಷ್ಪರಿಣಾಮ ಎಲ್ಲರನ್ನು ಕಾಡುತ್ತದೆ. ಈ ಹಿನ್ನೆಲೆಯಲ್ಲಿ ಪಿಒಪಿ ಗಣೇಶನ ಮೂರ್ತಿ ಮಾರಾಟ ಮಾಡಬಾರದು ಎಂದು ಪರಿಸರ ಪ್ರೇಮಿಗಳು ಮನವಿ ಮಾಡುತ್ತಲೇ ಇದ್ದರೂ ಈ ಕಿವಿಯಲ್ಲಿ ಕೇಳಿ ಆ ಕಿವಿಯಲ್ಲಿ ಬಿಡುವವರೇ ಜಾಸ್ತಿಯಾಗಿದ್ದಾರೆ.

ಮಣ್ಣಿನ ಗಣಪತಿಗೆ ಬೇಡಿಕೆ ಕುಸಿತ: ಗೌರಿ–ಗಣೇಶ ಹಬ್ಬವನ್ನೇ ನಂಬಿಕೊಂಡಿರುವ ಅನೇಕ ಕುಟುಂಬಗಳು ಜೇಡಿ ಮಣ್ಣಿನಿಂದ ವಿವಿಧ ಅಳತೆಯ ಗೌರಿ–ಗಣೇಶನ ಮೂರ್ತಿ ತಯಾರಿಸಿ, ಮಾರಾಟಕ್ಕಾಗಿ ಕಾಯುತ್ತಿದ್ದಾರೆ. ಮೈಸೂರಿನ ಕೆ.ಟಿ.ಸ್ಟ್ರೀಟ್, ಕುಂಬಾರಗೇರಿ, ಅಗ್ರಹಾರ ಸೇರಿದಂತೆ ಹಲವೆಡೆ ಪರಿಸರ ಸ್ನೇಹಿ ಮಣ್ಣಿನ ಗಣೇಶನಮೂರ್ತಿ ಸಿದ್ಧಗೊಂಡಿವೆ. ಹಲವು ಕುಶಲಕರ್ಮಿಗಳು ಗಣೇಶನ ಮೂರ್ತಿ ತಯಾರಿಸಿ, ಗ್ರಾಹಕರನ್ನು ಎದುರು ನೋಡುತ್ತಿದ್ದಾರೆ. ಪರಿಸರ ಹಿತ ಬಯಸುವ ಅನೇಕರು ಮಣ್ಣಿನ ಗಣೇಶನ ಮೂರ್ತಿಯನ್ನೇ ಖರೀದಿಸುತ್ತಿದ್ದಾರೆ. ಆದರೆ, ರಸ್ತೆಗಳಲ್ಲಿ ಯುವಕ ಮಂಡಳಿ, ಸಂಘ–ಸಂಸ್ಥೆಗಳ ವತಿಯಿಂದ ಪ್ರತಿಷ್ಠಾಪಿಸಲು ಪಿಒಪಿ ಗಣೇಶನ ಮೂರ್ತಿಗಳನ್ನು ಖರೀದಿಸುತ್ತಿರುವುದರಿಂದ ಕುಶಲಕರ್ಮಿಗಳಿಗೆ ತೀವ್ರ ಹಿನ್ನಡೆಯಾಗುತ್ತಿದೆ.

ಚಂದ್ರಯಾನದಲ್ಲಿ ಗಣಪ: ಮೈಸೂರಿನ ಕೆ.ಟಿ.ಸ್ಟ್ರೀಟ್ ಸಮೀಪದ ಕುಂಬಾರಗೇರಿಯ ವಿದ್ಯಾ ಗಣಪತಿ ಕಲಾ ನಿಲಯ ಮಹೇಶ್ ಹಾಗೂ ಶೋಭ ಅವರು ನೂರಾರು ಮಣ್ಣಿನ ಗಣೇಶನ ಮೂರ್ತಿಯನ್ನು ತಯಾರಿಸಿ, ಮಾರಾಟಕ್ಕೆ ಇಟ್ಟಿದ್ದಾರೆ. ಈ ದಂಪತಿಯ ಮಗ ಎಂ.ಯಶವಂತ್ ವಿವಿಧ ಬಗೆಯ ಗಣೇಶನ ಮೂರ್ತಿ ತಯಾರಿಸಿದ್ದು, ಗಮನ ಸೆಳೆಯುತ್ತಿವೆ. ಚಂದ್ರಯಾನದ ಗಣೇಶ, ವಿಶ್ವಕಪ್‌ಗಾಗಿ ಬ್ಯಾಟ್ ಹಿಡಿದ ಗಣೇಶ, 6 ಅಡಿ ಶಿವನ ಮೂರ್ತಿಯೊಂದಿಗೆ ಇರುವ, ಸಿಂಹದ ಮೇಲೆ ಕುಳಿತಿರುವ, ಬಂಡೆ ಮೇಲೆ ಕುಳಿತಿರುವ, ಗದೆ ಹಿಡಿದು ನಿಂತಿರುವ, ಜಿಂಕೆ ಮೇಲೆ ಕುಳಿತಿರುವ, ಕುಕ್ಕೆ ಮಾರುವಂತೆ, ಗರುಡನ ಮೇಲೆ, ಆನೆ ಮೇಲೆ ಕುಳಿತಿರುವಂತೆ ಮಣ್ಣಿನ ಗಣೇಶಮೂರ್ತಿ ತಯಾರಿಸಿದ್ದಾರೆ.

ಬೆನಕ ಫ್ಯಾನ್ಸಿ ವರ್ಲ್ಡ್ ಹೆಸರಲ್ಲಿ ಗಣೇಶನ ಮೂರ್ತಿ ಮಾರಾಟ ಮಾಡುತ್ತಿರುವ ಟಿ.ಮಂಜುನಾಥ್, ಮಣ್ಣಿನಿಂದ ನೂರಾರು ಗಣೇಶನ ಮೂರ್ತಿ ತಯಾರಿಸಿ ಮಾರಾಟಕ್ಕಿಟ್ಟಿದ್ದಾರೆ. ಬಿಲ್ಲು–ಬಾಣ ಹಿಡಿದಿರುವ ಗಣೇಶ, ಹಸುವಿನ ಮೇಲೆ ಹಾಗೂ ವಿವಿಧ ಸಂಗೀತ ಪರಿಕರಗಳ ಮೇಲಿರುವ ಗಣೇಶನ ಮೂರ್ತಿಯನ್ನು ತಯಾರಿಸಿ ಮಾರಾಟಕ್ಕಿಟ್ಟಿದ್ದಾರೆ.





ಗಣೇಶ ಮೂರ್ತಿ ವಿಸರ್ಜನೆಗೆ ಪಾಲಿಕೆಯಿಂದ ಟ್ಯಾಂಕರ್ ವ್ಯವಸ್ಥೆ




ಮೈಸೂರು, ಸೆ.16– ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಗೌರಿ–ಗಣೇಶ ಮೂರ್ತಿಗಳನ್ನು ಪರಿಸರಕ್ಕೆ ಹಾನಿ ಉಂಟಾಗದ ರೀತಿಯಲ್ಲಿ ವಿಸರ್ಜಿಸಲು ಮೈಸೂರು ಮಹಾನಗರ ಪಾಲಿಕೆ ಕ್ರಮ ಕೈಗೊಂಡಿದೆ.

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆಯಿಂದ ಜಲಮೂಲಗಳ ಮೇಲೆ ಉಂಟಾಗುವ ಮಾಲಿನ್ಯವನ್ನು ತಡೆಯಲು ಹಾಗೂ ಜನಜಂಗುಳಿಯನ್ನು ತಗ್ಗಿಸಲು ಪಾಲಿಕೆಯ 9 ವಲಯಗಳ ಪ್ರಮುಖ ಬೀದಿ ಹಾಗೂ ವೃತ್ತಗಳಲ್ಲಿ ವಿಗ್ರಹಗಳ ವಿಸರ್ಜನೆಗೆ ಸಾರ್ವಜನಿಕರಿಗೆ ಅನುವು ಮಾಡುವ ಹಿತದೃಷ್ಟಿಯಿಂದ ಸೆಪ್ಟೆಂಬರ್ 18, 20 ಮತ್ತು 22ರಂದು ಸಂಜೆ 5ರಿಂದ ರಾತ್ರಿ 11 ಗಂಟೆಯವರೆಗೆ ಟ್ಯಾಂಕರ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಝೋನ್–2ರಲ್ಲಿ ಮಹದೇವಮ್ಮ ದೂ.ಸಂ: 7795380993, ಝೋನ್–3ರಲ್ಲಿ ಅರ್ಪಿತ ದೂ.ಸಂ: 9591787335, ಝೋನ್–4ರಲ್ಲಿ ಶ್ರೀದೇವಿ ದೂ.ಸಂ: 8147240348, ಝೋನ್–5ರಲ್ಲಿ ಚಿನ್ಮಯ್ ದೂ.ಸಂ: 9902975701, ಜೋನ್–6ರಲ್ಲಿ ಮೈತ್ರಿ ಎಸ್. ದೂ.ಸಂ: 8105739384, ಝೋನ್–7ರಲ್ಲಿ ನವೀನ್ ಎಂ.ಎನ್ ದೂ.ಸಂ: 9480413750, ಝೋನ್–8ರಲ್ಲಿ ಶ್ರೀಕಾಂತ್ ಜಿ ದೂ.ಸಂ: 9739959945 ಹಾಗೂ ಝೋನ್–9 ರಲ್ಲಿ ನಾಜೀಯ ದೂ.ಸಂ: 9066849003 ಇವರನ್ನು ಸಂಪರ್ಕಿಸಬಹುದಾಗಿದ್ದು, ವಾರ್ಡ್‌ಗಳ ಅನುಸಾರ ಆರೋಗ್ಯ ನಿರೀಕ್ಷಕರನ್ನು ನೇಮಕ ಮಾಡಲಾಗಿದ್ದು. ವಾರ್ಡ್ ನಂ: 52, 54ರಲ್ಲಿ ಪ್ರೀತಿ ಪಿ. ದೂ.ಸಂ: 9738327757, ವಾರ್ಡ್ ನಂ: 51, 55, 61ರಲ್ಲಿ ಶಿವ ಪ್ರಸಾದ್ ಹೆಚ್.ಎಂ. ದೂ.ಸಂ: 99642 54808, ವಾರ್ಡ್ ನಂ:49, 50ರಲ್ಲಿ ಶೋಭಾ ಸಿ. ದೂ.ಸಂ: 8792988437, ವಾರ್ಡ್ ನಂ: 60, 48, 59ರಲ್ಲಿ ಶಿವ ಕುಮಾರ್ ಜಿ.ಆರ್. ದೂ.ಸಂ: 900814 5906, ವಾರ್ಡ್ ನಂ: 62, 63ರಲ್ಲಿ ಶೀಲಾ ದೂ.ಸಂ: 9632900538, ವಾರ್ಡ್ ನಂ: 56, 64, 65ರಲ್ಲಿ ಆಶ್ವಥ್ ಕೆ. ದೂ.ಸಂ: 7259923805, ವಾರ್ಡ್ ನಂ:43, 44ರಲ್ಲಿ ಸೋಮಶೇಖರ್ ಎಂ.ಕೆ. ದೂ.ಸಂ: 9844432551, ವಾರ್ಡ್ ನಂ: 42, 47ರಲ್ಲಿ ಕಾರ್ತಿಕ್ ಎಲ್. ದೂ.ಸಂ: 9900410697, ವಾರ್ಡ್ ನಂ:45, 58ರಲ್ಲಿ ಪ್ರವೀಣ್‌ಕುಮಾರ್ ದೂ.ಸಂ: 9964874982, ವಾರ್ಡ್ ನಂ: 46, 57ರಲ್ಲಿ ರವಿಶಂಕರ್ ದೂ.ಸಂ: 9449982238, ವಾರ್ಡ್ ನಂ: 19, 21, ವಿಜಯನಗರ 3ನೇ ಹಂತದಲ್ಲಿ ಪ್ರಕಾಶ್ ದೂ.ಸಂ: 9986420857/8123826396, ವಾರ್ಡ್ ನಂ: 6, 18, 22 ರಲ್ಲಿ ಹರೀಶ್ ಕುಮಾರ್ ಟಿ.ಡಿ. ದೂ.ಸಂ: 7676010098, ವಾರ್ಡ್ ನಂ: 3, 5ರಲ್ಲಿ ಸುಗುಣ ಬಿ.ಎನ್. ದೂ.ಸಂ: 7259817305, ವಾರ್ಡ್ ನಂ: 4, 7ರಲ್ಲಿ ಗೀತಾ ಎನ್.ಎಂ. ದೂ.ಸಂ: 9880154561, ವಾರ್ಡ್ ನಂ: 1, 2, 20ರಲ್ಲಿ ಯೋಗೇಶ್ ದೂ.ಸಂ: 8951780625, ವಾರ್ಡ್ ನಂ: 23, 24ರಲ್ಲಿ ಮಂಜುಕುಮಾರ್ ದೂ.ಸಂ: 9164143489, ವಾರ್ಡ್ ನಂ: 25,40,41ರಲ್ಲಿ ಬಸವರಾಜು ದೂ.ಸಂ: 8722646408, ವಾರ್ಡ್ ನಂ: 8, 9ರಲ್ಲಿ ನಮ್ರತಾ ದೂ.ಸಂ: 9741593580, ವಾರ್ಡ್ ನಂ: 27ರಲ್ಲಿ ದರ್ಶನ್ ದೂ.ಸಂ: 7019768854, ವಾರ್ಡ್ ನಂ: 17, 26, 28ರಲ್ಲಿ ಅಶೋಕ ಎನ್.ಆರ್. ದೂ.ಸಂ: 9964506754. ವಾರ್ಡ್ ನಂ: 15, 33ರಲ್ಲಿ ಶ್ರೀನಿಧಿ ಜಿ. ದೂ.ಸಂ: 8217858644, ವಾರ್ಡ್ ನಂ: 13, 16, 29ರಲ್ಲಿ ರಾಜೇಶ್ವರಿ ಬಾಯಿ ವಿ. ದೂ.ಸಂ: 7760954056, ವಾರ್ಡ್ ನಂ: 10ರಲ್ಲಿ ಮಂಜುನಾಥ್ ಡಿ.ಕೆ. ದೂ.ಸಂ: 9538316393/9591867165, ವಾರ್ಡ್ ನಂ: 11, 12, 14ರಲ್ಲಿ ಕೆ.ಎ. ಮುರುಗೇಶ್ ದೂ.ಸಂ: 9481118078, ವಾರ್ಡ್ ನಂ: 32, 38ರಲ್ಲಿ ಧನಂಜಯಗೌಡ ದೂ.ಸಂ: 9071150087, ವಾರ್ಡ್ ನಂ: 30 ಮಂಜುನಾಥ್ ಡಿ.ಕೆ. ದೂ.ಸಂ: 9538316393/9591867165, ವಾರ್ಡ್ ನಂ: 34, 35, 36ರಲ್ಲಿ ಪ್ರಭಾಕರ್ ದೂ. ಸಂ: 9844040434, ವಾರ್ಡ್ ನಂ: 37, 53ರಲ್ಲಿ ದರ್ಶನ್ ಎಸ್.ಎಸ್. ದೂ. ಸಂ: 7019768854 ಸಂಪರ್ಕಿಸಬಹುದು.

ಗೌರಿ–ಗಣೇಶ ಹಬ್ಬದ ಮಾರ್ಗಸೂಚಿ ಬಿಡುಗಡೆ



ಮೈಸೂರು, ಸೆ.16– 2023–24ನೇ ಸಾಲಿನ ಗೌರಿ–ಗಣೇಶ ಚತುರ್ಥಿ ಹಬ್ಬದ ಆಚರಣೆ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಸರಳ ಆಚರಣೆಯನ್ನು ನಡೆಸಲು ತಿಳಿಸಲಾಗಿದೆ.

ಪರಿಸರ ಸ್ನೇಹಿ ಜೇಡಿಮಣ್ಣಿನಿಂದ ತಯಾರಿಸಿದ ಗೌರಿ ಮತ್ತು ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜಿಸಿದ ನಂತರ ಮನೆಯಲ್ಲೇ ವಿಸರ್ಜಿಸಿ ಪರಿಸರ ಮಾಲಿನ್ಯವನ್ನು ನಿಯಂತ್ರಿಸುವುದು, ಪರಿಸರದ ಮೇಲೆ ಪರಿಣಾಮ ಬೀರುವಂತಹ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಹಾಗೂ ರಾಸಾಯನಿಕ ಬಣ್ಣಗಳನ್ನು ಒಳಗೊಂಡ ಗೌರಿ–ಗಣೇಶ ಮೂರ್ತಿಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಗೌರಿ–ಗಣೇಶ ಹಬ್ಬವನ್ನು ಸರಳ ರೀತಿಯಲ್ಲಿ ಭಕ್ತಿ ಪೂರ್ವಕವಾಗಿ ದೇವಸ್ಥಾನದೊಳಗೆ, ತಮ್ಮ ಮನೆಯೊಳಗೆ ಅಥವಾ ಸರ್ಕಾರಿ ಖಾಸಗಿ ಸಾರ್ವಜನಿಕ ಬಯಲು ಪ್ರದೇಶಗಳಲ್ಲಿ ಕನಿಷ್ಠ ಸಂಖ್ಯೆಯೊಂದಿಗೆ ಆಚರಿಸಲು ತಿಳಿಸಲಾಗಿದೆ.

ಪಾರಂಪರಿಕ ಗೌರಿ–ಗಣೇಶೋತ್ಸವಕ್ಕಾಗಿ ಸಮಿತಿಗಳು, ಮಂಡಳಿಗಳು ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲು ಮುನ್ಸಿಪಲ್ ಕಾರ್ಪೊರೇಷನ್ ಅಥವಾ ಸ್ಥಳೀಯ ಆಡಳಿತದಿಂದ ಪೂರ್ವಾನುಮತಿ ಪಡೆಯಬೇಕು ಹಾಗೂ ಪಾರಂಪರಿಕ ಗೌರಿ ಗಣೇಶ ಮೂರ್ತಿ ಮತ್ತು ಮನೆಯಲ್ಲಿ ವಿಗ್ರಹಗಳನ್ನು ಪೂಜಿಸುವವರು ಮನೆಯಲ್ಲಿಯೇ ವಿಸರ್ಜಿಸುವುದು. ಸರ್ಕಾರಿ ಮತ್ತು ಖಾಸಗಿ ಬಯಲು ಪ್ರದೇಶಗಳಲ್ಲಿ ಪ್ರತಿಷ್ಠಾಪಿಸುವ ಗೌರಿ–ಗಣೇಶ ಮೂರ್ತಿಗಳನ್ನು ಸಮೀಪವಾಗುವಂತಹ ಮಾರ್ಗಗಳನ್ನು ಬಳಸಿಕೊಂಡು ಮೈಸೂರು ಮಹಾನಗರ ಪಾಲಿಕೆ ಜಿಲ್ಲಾಡಳಿತ ಹತ್ತಿರದ ಸ್ಥಳೀಯ ಸಂಸ್ಥೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ನಿರ್ಮಿಸಲಾಗಿರುವ ಹೊಂಡ ಅಥವಾ ಸಂಚಾರಿ ವಿಸರ್ಜನೆ ವ್ಯವಸ್ಥೆ (ಮೊಬೈಲ್ ಎಮರ್ಜೆನ್ ಟ್ಯಾಂಕ್) ಅಥವಾ ಕೃತಕ ವಿಸರ್ಜನಾ ಟ್ಯಾಂಕರ್‌ಗಳಲ್ಲಿ ವಿಸರ್ಜಿಸುವಂತೆ ತಿಳಿಸಲಾಗಿದೆ. ಹಬ್ಬದಂದು ಪಟಾಕಿ ಸಿಡಿಸುವುದನ್ನು ನಿಷೇಧಿಸಿದ್ದು, ಚರಂಡಿಯಲ್ಲಿ ಹೂವಿನ ಹಾರ, ತಟ್ಟೆ, ಲೋಟ, ಎಲೆಗಳನ್ನು ಎಸೆಯದಂತೆ ಕಸದ ವಾಹನಗಳನ್ನು ಬಳಸುವುದು. ಹಬ್ಬದ ದಿನಗಳಲ್ಲಿ ರಾತ್ರಿ 10ರಿಂದ ಬೆಳಗ್ಗೆ 6 ಗಂಟೆಯವರೆಗೆ ಧ್ವನಿವರ್ಧಕಗಳನ್ನು ಬಳಕೆ ಮಾಡಬಾರದು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.



ಮೈಸೂರಿನ ಅನಂತಗೀತ ವಿದ್ಯಾಲಯದಲ್ಲಿ ಗೌರಿ–ಗಣೇಶ ಹಬ್ಬದ ಪ್ರಯುಕ್ತ ವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಕ್ಷಕಿ ಸುಲೋಚನಾ, ಮಣ್ಣಿನ ಗಣಪತಿ ನಿರ್ಮಾಣ ಕುರಿತು ಪ್ರಾತ್ಯಕ್ಷಿಕೆ ನಡೆಸಿದರು. ವಿದ್ಯಾರ್ಥಿಗಳು ಮಣ್ಣಿನಿಂದ ಗಣಪತಿ ಮಾಡಿ ಗೌರಿ–ಗಣೇಶ ಹಬ್ಬ ಆಚರಿಸಿದರು. ಸಂಸ್ಥೆಯ ಅಧ್ಯಕ್ಷ ವೇಣು ಗೋಪಾಲ್, ಕಲ್ಲೂರು ಶ್ರೀಕಾಂತ್, ಅಮರನಾಥ್ ಇತರರಿದ್ದರು.

ನಾಳೆ ಗಣೇಶ ಹಬ್ಬದ ಸಾರ್ವತ್ರಿಕ ರಜೆ ಘೋಷಣೆ

ಬೆಂಗಳೂರು,ಸೆ.16–ವರಸಿದ್ಧಿ ವಿನಾಯಕ(ಗಣೇಶಹಬ್ಬ) ವ್ರತದ ಸಾರ್ವತ್ರಿಕ ರಜಾ ದಿನವನ್ನು ಸೆ.18ರಂದು ರಾಜ್ಯ ಸರ್ಕಾರ ಘೋಷಣೆ ಮಾಡಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಈಗಾಗಲೇ ಆದೇಶ ಹೊರಡಿಸಿರುವಂತೆ ಸೆ.18ರಂದು ಗಣೇಶ ಹಬ್ಬಕ್ಕೆ ರಜೆ ಇರುತ್ತದೆ. ಅದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ. ಗಣೇಶ ಚತುರ್ಥಿ ಸಾರ್ವತ್ರಿಕ ರಜೆ ಬಗ್ಗೆ ಜನರಲ್ಲಿ ಅನಗತ್ಯ ಗೊಂದಲ ಬೇಡ ಎಂದು ಸ್ಪಷ್ಟಪಡಿಸಲಾಗಿದೆ. ಆದರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾಧಿಕಾರಿಗಳು ಗಣೇಶ ಹಬ್ಬದ ರಜೆಯನ್ನು ಸೆ.18ರ ಬದಲು ಸೆ.19ರಂದು ಘೋಷಣೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅದು ಇನ್ನು ಪರಿಶೀಲನೆ ಹಂತದಲ್ಲಿದೆ ಎಂದು ತಿಳಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಭಾನುವಾರ 17 ಸೆಪ್ಟೆಂಬರ್ 2023

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಕಾಲಿಗೆರಗಿ ನಮಸ್ಕಾರ ಮಾಡಿದ್ದೇನೆ

ಹೆಚ್.ಡಿ.ದೇವೇಗೌಡರಿಗೆ ನಮಸ್ಕರಿಸಿದ ಬಗ್ಗೆ ಪ್ರತಾಪ್ ಸಿಂಹ ಸಮರ್ಥನೆ

- ಹಿರಿಯರ ಕಾಲಿಗೆರಗಿ ನಮಸ್ಕರಿಸುವುದು ನನ್ನ ರೂಢಿ
- ದೇಶಕ್ಕೆ ಹೆಚ್.ಡಿ.ದೇವೇಗೌಡರ ಕೊಡುಗೆ ಸ್ಮರಣೀಯ

ಮೈಸೂರು, ಸೆ.16(ಬಿಎಲ್‌ವೈ)– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಾತ್ರವಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾಲಿಗೂ ಬಿದ್ದು ನಮಸ್ಕಾರ ಮಾಡಿದ್ದೇನೆ ಎಂದು ಸಂಸದ ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ಮೈಸೂರಿಗೆ ಬಂದಿದ್ದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕಾಲಿಗೆ ನಮಸ್ಕಾರ ಮಾಡಿರುವುದನ್ನು ವೈಭವೀಕರಿಸುವ ಅಗತ್ಯವಿಲ್ಲ ಎಂದು ಸಲಹೆ ನೀಡಿದರು.

ನಾನು ಎಲ್ಲರ ಕಾಲಿಗೂ ನಮಸ್ಕಾರ ಮಾಡಿದ್ದೇನೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ್, ಮಲ್ಲಿಕಾರ್ಜುನ ಖರ್ಗೆ, ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಆರ್.ಅಶೋಕ್ ಸೇರಿದಂತೆ ಹಲವರ ಕಾಲಿಗೆ ಬಿದ್ದು ನಮಸ್ಕರಿಸಿದ್ದೇನೆ ಎಂದರು. ನಾನು ಮೈಸೂರಿಗೆ ಮಾತ್ರ ಸಂಸದನಲ್ಲ, ಕೊಡಗು ಭಾಗಕ್ಕೂ ಕೂಡ ಸಂಸದನಾಗಿದ್ದೇನೆ. ಮಲೆನಾಡಿನಲ್ಲಿ ಹಿರಿಯರಿಗೆ ಗೌರವ ಕೊಡವುದು ಸಂಪ್ರದಾಯ. ಹೀಗಿರುವಾಗ ಹಿರಿಯರ ಕಾಲಿಗೆ ನಮಸ್ಕಾರ ಮಾಡುವುದು ನನ್ನ ರೂಢಿ. ಹೆಚ್.ಡಿ.ದೇವೇಗೌಡರ ಕಾಲಿಗೆ ನಮಸ್ಕಾರ ಮಾಡಿರುವುದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಪ್ರತಾಪ್ ಸಿಂಹ ಸ್ಪಷ್ಟನೆ ನೀಡಿದರು.



ಪ್ರಧಾನಿ ನರೇಂದ್ರ ಮೋದಿ ಅವರು ಹೆಚ್.ಡಿ.ದೇವೇಗೌಡರನ್ನು ಬಹಳ ಗೌರವಯುತವಾಗಿ ನೋಡುತ್ತಾರೆ. ಜಿಎಸ್‌ಟಿ ಉದ್ಘಾಟನೆ ವೇಳೆ ದೇವೇಗೌಡರ ಕೈ ಹಿಡಿದು ಕರೆದುಕೊಂಡು ಹೋದರು. ನೂತನ ಪಾರ್ಲಿಮೆಂಟ್ ಉದ್ಘಾಟನೆಗೆ ಖುದ್ದು ಕರೆ ಮಾಡಿ ಆತ್ಮೀಯವಾಗಿ ಆಹ್ವಾನಿಸಿದರು. ಇಂತಹ ದೇವೇಗೌಡರ ಬಗ್ಗೆ ನಾನು ಹೆಚ್ಚು ಗೌರವ ಇಟ್ಟುಕೊಂಡಿದ್ದೇನೆ. ಈ ಹಿನ್ನೆಲೆಯಲ್ಲಿ ಅವರ ಕಾಲಿಗೆ ಬಿದ್ದು ನಮಸ್ಕಾರ ಮಾಡಿದ್ದೇನೆ ಎಂದು ಸಮರ್ಥಿಸಿಕೊಂಡರು.

ಹೆಚ್.ಡಿ.ದೇವೇಗೌಡರು ಪ್ರಧಾನ ಮಂತ್ರಿ ಆಗಿದ್ದಾಗ ದೇಶದಲ್ಲಿ ಸ್ಮರಣೀಯ ಕಾರ್ಯಗಳನ್ನು ಮಾಡಿದ್ದಾರೆ. ಆರ್ ಟಿಐ, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಸೇರಿದಂತೆ ಹಲವು ಕೊಡುಗೆಗಳನ್ನು ನೀಡಿದ್ದಾರೆ. ಕೃಷ್ಣ ಮೇಲ್ದಂಡೆ, ಯಗಚಿ ಅಣೆಕಟ್ಟು ಸೇರಿದಂತೆ ನೀರಾವರಿ ಕ್ಷೇತ್ರದಲ್ಲಿ ದೇವೇಗೌಡರು ಮಾಡಿರುವಷ್ಟು ಕೆಲಸವನ್ನು ಬೇರೊಬ್ಬರು ಮಾಡಿಲ್ಲ. ಇಂತಹ ಜನಪರ ಯೋಜನೆ ರೂಪಿಸಿದ ದೇವೇಗೌಡರಂತಹವರು ಹಿಂದೆ ಇರಲಿಲ್ಲ, ಮುಂದೆ ಬರುವುದೂ ಇಲ್ಲ ಎಂದು ಪ್ರತಾಪ್ ಸಿಂಹ ಘೋಷಿಸಿದರು.

ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಣೆ ಮಾಡಬೇಕೇ ಅಥವಾ ಬೇಡವೇ ಎಂಬ ಚರ್ಚೆಯಲ್ಲಿ ನಾನು ಭಾಗಿಯಾಗುವುದಿಲ್ಲ. ಆದರೆ ದಸರಾ ಆಚರಣೆ ಮಾಡುವಾಗ ಹಣ ಖರ್ಚಾಗುತ್ತದೆ. ಅಂದ ಮಾತ್ರಕ್ಕೆ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ ಮುರಿಯುವುದು ಬೇಡ ಎಂದು ಸಲಹೆ ನೀಡಿದರು.

ಮೈಸೂರು ದಸರಾ ಅಂದರೆ ಜಂಬೂ ಸವಾರಿ, ದೀಪಾಲಂಕಾರ, ಕ್ರೀಡೆ, ಗೋಷ್ಠಿ ಸೇರಿದಂತೆ ಹಲವು ವಿಶಿಷ್ಟ ಕಾರ್ಯಕ್ರಮಗಳು ಜರುಗುತ್ತವೆ. ಇದಕ್ಕೆಲ್ಲಾ ಹಣ ಖರ್ಚಾಗುತ್ತದೆ ಎಂದು ಸಂಪ್ರದಾಯ ಅನುಸರಿಸದೆ ಇರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ವಂಚಿಸಿರುವ ಚೈತ್ರಾ ಕುಂದಾಪುರ ಬಂಧನದ ಬಗ್ಗೆ ಪ್ರತಿಕ್ರಿಯೆ ನೀಡಲು ಪ್ರತಾಪ್ ಸಿಂಹ ನಿರಾಕರಿಸಿದರು. ಚೈತ್ರ ಕುಂದಾಪುರ ಯಾರು ಅಂತ ನನಗೆ ಗೊತ್ತಿಲ್ಲ. ಅವರ ಬಗ್ಗೆ ನನ್ನ ಏನನ್ನೂ ಕೇಳಬೇಡಿ ಎಂದರು.

ಮೀಟರ್ ಬಡ್ಡಿ ದಂಧೆಯಿಂದ ತತ್ತರಿಸಿದ್ದ ಬೀದಿಬದಿ ವ್ಯಾಪಾರಿಗಳಿಗೆ ಪಿಎಂ ಸ್ವನಿಧಿ ಯೋಜನೆ ಆಸರೆ

ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ ಅಭಿಮತ



ಮೈಸೂರು,ಸೆ.16(ಎಂಟಿವೈ)– ಮೀಟರ್ ಬಡ್ಡಿ ದಂಧೆಯಿಂದ ತತ್ತರಿಸಿದ್ದ ಬೀದಿಬದಿ ವ್ಯಾಪಾರಿಗಳಿಗೆ ಪಿಎಂ ಸ್ವನಿಧಿ ಯೋಜನೆ ಆಸರೆಯಾಗಿದೆ ಎಂದು ಸಂಸದ ಪ್ರತಾಪ ಸಿಂಹ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಪುರಭವನದಲ್ಲಿ ಶನಿವಾರ ಮೈಸೂರು ಮಹಾನಗರ ಪಾಲಿಕೆ ಹಾಗೂ ವಿವಿಧ ಬ್ಯಾಂಕ್‌ಗಳ ಸಹಯೋಗದಲ್ಲಿ ಆಯೋಜಿಸಿದ್ದ ಪಿಎಂ ಸ್ವ-ನಿಧಿ ಮತ್ತು ಸ್ವ-ನಿಧಿ ಸೇ ಸಮೃದ್ಧಿ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಬೀದಿ ಬದಿ ವ್ಯಾಪಾರಿಗಳು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ವಿವಿಧ ಕಾರ್ಯಕ್ರಮ ಜಾರಿಗೊಳಿಸಿದೆ. ಈ ಹಿಂದೆ ಬೀದಿಬದಿ ವ್ಯಾಪಾರಿಗಳು ವ್ಯಾಪಾರ ಮಾಡಲು ಮೀಟರ್ ಬಡ್ಡಿ ದಂಧೆಕೋರರಿಂದ ಸಾಲ ಪಡೆದು, ಸಂಜೆ ವೇಳೆ ವ್ಯಾಪಾರ ಆಗಲೀ, ಆಗದೇ ಇರಲಿ ಬಡ್ಡಿಯೊಂದಿಗೆ ಸಾಲ ಹಿಂದಿರುಗಿಸಬೇಕಾದ ಪರಿಸ್ಥಿತಿ ಇತ್ತು. ಇದನ್ನು ಗಮನಿಸಿದ ಪ್ರಧಾನಿ ಮೋದಿ ಅವರು ಬೀದಿ ಬದಿ ವ್ಯಾಪಾರಿಗಳಿಗಾಗಿ ಆರ್ಥಿಕ ನೆರವು ನೀಡುವ ಪಿಎಂ ಸ್ವನಿಧಿ ಯೋಜನೆ ಜಾರಿಗೊಳಿಸಿದ್ದಾರೆ ಎಂದು ತಿಳಿಸಿದರು.

ಬೆಂಗಳೂರಲ್ಲಿ ಮೀಟರ್ ಬಡ್ಡಿ ದಂಧೆಕೋರರ ಹಾವಳಿ ತೀವ್ರಗೊಂಡಿತ್ತು. ಬೀದಿ ಬದಿ ವ್ಯಾಪಾರಿಗಳು, ಆಟೋ ಚಾಲಕರು ಸೇರಿದಂತೆ ಅಸಂಘಟಿತ ವಲಯದ ಕಾರ್ಮಿಕರಿಗೆ ಹೆಚ್ಚಿನ ಬಡ್ಡಿಗೆ ಸಾಲ ನೀಡುವ ಮಾಫಿಯಾ ಚಾಲ್ತಿಯಲ್ಲಿತ್ತು. ಆದರೆ ಪಿಎಂ ಸ್ವನಿಧಿ ಯೋಜನೆಯಿಂದ ಬಡ್ಡಿ ದಂಧೆ ಸ್ಥಗಿತಗೊಂಡಿದೆ. ಬಡ ಹಾಗೂ ಶೋಷಿತ ಸಮುದಾಯ, ವ್ಯಾಪಾರಿಗಳ ಏಳಿಗೆಗಾಗಿ ಈ ಯೋಜನೆ ಸಹಕಾರಿಯಾಗಿದೆ ಎಂದರು.

ಮೈಸೂರಲ್ಲಿ ಸ್ವನಿಧಿ ಯೋಜನೆಯಲ್ಲಿ 19,261 ಫಲಾನುಭವಿಗಳಿಗೆ ಸಾಲ ಸೌಲಭ್ಯ ನೀಡಲಾಗಿದೆ. ಕೇಂದ್ರದ ಯೋಜನೆಗಳನ್ನು ತಲುಪಿಸುವಲ್ಲಿ ಮಾಜಿ ಶಾಸಕ ಎಸ್.ಎ.ರಾಮ್‌ದಾಸ್ ಈ ಹಿಂದಿನಿಂದಲೂ ಶ್ರಮಿಸಿದ್ದಾರೆ. ದೇಶದಲ್ಲೇ ಅತೀ ಹೆಚ್ಚು ಜನೌಷಧಿ ಕೇಂದ್ರಗಳನ್ನು ಮೈಸೂರಲ್ಲಿ ಆರಂಭಿಸುವಲ್ಲಿ ರಾಮದಾಸ್ ಅವರ ಕೊಡುಗೆ ಅಪಾರ. ಪಿಎಂ ಸ್ವ-ನಿಧಿ ಯೋಜನೆಯಲ್ಲೂ ಮೈಸೂರಲ್ಲಿ ಉತ್ತಮ ಪ್ರಗತಿಯಾಗಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಎಸ್.ಎ.ರಾಮ್‌ದಾಸ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮ ದಿನವನ್ನು ಭಾನುವಾರ ಆಚರಿಸಲಾಗುತ್ತಿದ್ದು, ಇದರ ಅಂಗವಾಗಿ ರಾಜ್ಯಾದ್ಯಂತ ಪಿಎಂ ಸ್ವನಿಧಿ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಬಾರಿ ಪತ್ರಿಕಾ ವಿತರಕರನ್ನು ಹಾಗೂ ಹಾಲು ವಿತರಕರನ್ನು ಈ ಯೋಜನೆಯಲ್ಲಿ ಸೇರ್ಪಡೆ ಮಾಡಲಾಗಿದೆ. ಇದಕ್ಕಾಗಿ ಫಲಾನುಭವಿಗಳ ನೋಂದಣಿ ಪ್ರಕ್ರಿಯೆ ಆರಂಭಿಸಲಾಗಿದೆ. ಸ್ವನಿಧಿ ಯೋಜನೆಯಲ್ಲಿ ನೋಂದಾಯಿಸಿಕೊಂಡ 60 ವರ್ಷ ಮೇಲ್ಪಟ್ಟವರಿಗೆ ಪಿಂಚಣಿ ನೀಡುವ ಪಿಎಂ ಮನ್‌ಧನ್, ಅಪಘಾತದಲ್ಲಿ ಮೃತಪಟ್ಟವರಿಗೆ, ಸಹಜ ಸಾವಿಗೀಡಾದವರಿಗೆ ಸಹಾಯಧನ, ಬಾಣಂತಿಯರಿಗೆ ನೀಡುವ ಸಹಾಯಧನದ ಯೋಜನೆಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ ಎಂದರು.

ಕಾರ್ಯಕ್ರಮದಲ್ಲಿ ಪಿಎಂ ಸ್ವನಿಧಿ ಯೋಜನೆಯ ಫಲಾನುಭವಿಗಳಾದ ಕುಮಾರ್, ಶ್ರೀಕಾಂತ್, ಸಿದ್ದರಾಜಪ್ಪ ಅವರಿಗೆ ಸಾಲದ ಚೆಕ್ ವಿತರಿಸಲಾಯಿತು. ಬೀದಿಬದಿ ವ್ಯಾಪಾರಿಗಳು ಡಿಜಿಟಲ್ ವ್ಯವಹಾರ ಆರಂಭಿಸಲು ಉತ್ತೇಜಿಸುವ ನಿಟ್ಟಿನಲ್ಲಿ 'ಕ್ಯೂ ಆರ್ ಕೋಡ್' ವ್ಯವಸ್ಥೆಗೂ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪಾ, ಪಾಲಿಕೆ ಆಯುಕ್ತ ಹಷಾದ್ ಉರ್ ರೆಹಮಾನ್ ಶರೀಫ್, ಎಡಿಸಿ ಎಂ.ಜೆ.ರೂಪಾ, ಭಾಸ್ಕರ್, ವಿದ್ಯಾ ಅರಸ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು..



ಹವ್ಯಾಸಿ ಛಾಯಾಗ್ರಾಹಕರಾದ ಜಿ.ಎಲ್.ತ್ರಿಪುರಾಂತಕ ಅವರು ಶಿಕ್ಷಕರ ದಿನಾಚರಣೆ ಅಂಗವಾಗಿ ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳಲ್ಲಿ ಆಯೋಜಿಸಿದ್ದ ಮೊಬೈಲ್ ಛಾಯಾಚಿತ್ರ ಪ್ರದರ್ಶನವನ್ನು ಆಧ್ಯಾತ್ಮಿಕ ಚಿಂತಕರಾದ ಶಂಕರ್ ದೇವನೂರು, ಆಡಳಿತಾಧಿಕಾರಿ ಎಸ್.ಪಿ.ಉದಯಶಂಕರ್ ಮತ್ತಿತರರು ವೀಕ್ಷಿಸುತ್ತಿರುವುದು.

ಜೆಎಸ್‌ಎಸ್ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜು–ಸಿಎಫ್‌ಟಿಆರ್‌ಐ ಒಡಂಬಡಿಕೆ



ಮೈಸೂರು,ಸೆ.16–ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಹಾಗೂ ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಡುವೆ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಸಹಕಾರವನ್ನು ಹೆಚ್ಚಿಸಲು ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಜೆಎಸ್‌ಎಸ್ ಕಾಲೇಜು ಯುಜಿಸಿಯ ದೀನ್ ದಯಾಳ್ ಉಪಾಧ್ಯಾಯ ಕೌಶಲ್ ಕೇಂದ್ರದಡಿಯಲ್ಲಿ ಯುಜಿಸಿ ಅನುಮೋದಿಸಿರುವ ಆಹಾರ ಸಂಸ್ಕರಣೆ ಮತ್ತು ಎಂಜಿನಿಯರಿಂಗ್‌ನಲ್ಲಿ ಎರಡು ವರ್ಷಗಳ ಸ್ನಾತಕೋತ್ತರ ವೃತ್ತಿ ತರಬೇತಿ ಮತ್ತು ಮೂರು ವರ್ಷಗಳ ಪದವಿ ವೃತ್ತಿ ತರಬೇತಿ ಕೋರ್ಸ್‌ಗಳನ್ನು ನಡೆಸುತ್ತಿದೆ. ಈ ಒಪ್ಪಂದದಿಂದ ವಿದ್ಯಾರ್ಥಿಗಳು ಸಿಎಸ್‌ಐಆರ್–ಸಿಎಫ್‌ಟಿಆರ್‌ಐನ ಪ್ರಯೋಗಾಲಯಗಳಲ್ಲಿ ಲಭ್ಯವಿರುವ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಸಲಕರಣೆಗಳನ್ನು ಉಪಯೋಗಿಸಿಕೊಂಡು ಪಠ್ಯಕ್ರಮದ ಕೌಶಲ್ಯ ತರಬೇತಿಯನ್ನು ಪಡೆಯಬಹುದಾಗಿದೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮಹೇಶಪ್ಪ ಮತ್ತು ಜೆಎಸ್‌ಎಸ್ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಸಮ್ಮುಖದಲ್ಲಿ, ಜೆಎಸ್‌ಎಸ್ ಕಾಲೇಜಿನ ಪರವಾಗಿ ಪ್ರಾಂಶುಪಾಲರಾದ ಡಾ.ಎಸ್.ಪ್ರತಿಭಾ ಮತ್ತು ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಪರವಾಗಿ ನಿರ್ದೇಶಕರಾದ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಒಪ್ಪಂದಕ್ಕೆ ಸಹಿ ಮಾಡಿದರು. ಈ ಸಂದರ್ಭದಲ್ಲಿ ಮುಖ್ಯ ವಿಜ್ಞಾನಿ ಬಿ.ವಿ.ಸತ್ಯೇಂದ್ರ ರಾವ್, ಪಿಎಂಸಿ ಮುಖ್ಯಸ್ಥ ವೈ.ಎನ್.ಶ್ರೀರಾಮ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬರ ಘೋಷಣೆ, ಪರಿಹಾರ ಮಾನದಂಡ ಸಮಸ್ಯೆಯೇ ಬರ ಪರಿಸ್ಥಿತಿ ಘೋಷಣೆಗೆ ವಿಳಂಬವಾಗಲು ಕಾರಣ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ
- ಕೇಂದ್ರ ಕೃಷಿ ಸಚಿವರಿಗೆ ಪತ್ರ ಬರೆದರೂ ಉತ್ತರ ಬಂದಿಲ್ಲ

ಬೆಂಗಳೂರು, ಸೆ.16(ಕೆಎಂಶಿ)–ಬರಗಾಲದ ಘೋಷಣೆ ಮತ್ತು ಪರಿಹಾರಕ್ಕೆ ಸಂಬಂಧಿಸಿದ ಕೇಂದ್ರ ಸರ್ಕಾರದ ಬರ ನಿರ್ವಹಣೆ ಕೈಪಿಡಿ 2020 ಮಾನದಂಡಗಳಲ್ಲಿನ ಸಮಸ್ಯೆಗಳ ಕಾರಣದಿಂದಾಗಿಯೇ ಬರಗಾಲ ಘೋಷಣೆ ವಿಳಂಬವಾಗಿದೆ. ಈ ಮಾನದಂಡಗಳನ್ನು ಬದಲಾವಣೆ ಮಾಡದಿದ್ದರೆ ಬರಪೀಡಿತ ಪ್ರದೇಶದಲ್ಲಿ ಪರಿಹಾರ ಕಾರ್ಯಗಳನ್ನು ನಡೆಸಿ ನೊಂದ ಜನರಿಗೆ ನೆರವಾಗಲು ಸಾಧ್ಯವಾಗದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.





ಬರ ಘೋಷಣೆಗೆ ಅಗತ್ಯವಾಗಿರುವ ಮಾನದಂಡಗಳನ್ನು ಮರುಪರಿಶೀಲಿಸಬೇಕಾದ ಅನಿವಾರ್ಯತೆಯನ್ನು ವಿವರಿಸಿ ಕೇಂದ್ರ ಕೃಷಿ ಸಚಿವರಾದ ನರೇಂದ್ರ ಸಿಂಗ್ ತೋಮರ್ ಅವರಿಗೆ ಹಿಂದೆಯೇ ಪತ್ರ ಬರೆದಿದ್ದರೂ ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ಉತ್ತರ ಬಂದಿಲ್ಲ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಾನದಂಡಗಳಲ್ಲಿನ ಬದಲಾವಣೆ ಕೇವಲ ಕರ್ನಾಟಕ ರಾಜ್ಯದ ದೃಷ್ಟಿಯಿಂದ ಮಾತ್ರವೇ ಅಲ್ಲ. ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಒಕ್ಕೂಟವಾದ ಭಾರತ ಗಣರಾಜ್ಯದ ಹಿತದೃಷ್ಟಿಯಿಂದಲೂ ಅತ್ಯಗತ್ಯವಾಗಿರುತ್ತದೆ. ಬರಘೋಷಣೆಯ ಮಾನದಂಡಗಳ ಪರಿಷ್ಕರಣೆಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡಹೇರಬೇಕಾಗಿರುವ ರಾಜ್ಯದ ಬಿಜೆಪಿ ನಾಯಕರು ಆ ಕೆಲಸವನ್ನು ಮಾಡದೆ ರಾಜ್ಯದ ಬರ ಪರಿಸ್ಥಿತಿಯ ರಾಜಕೀಯ ಲಾಭ ಪಡೆಯುವ ದುರುದ್ದೇಶದಿಂದ ಸರ್ಕಾರದ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದಾರೆ.

ಕರ್ನಾಟಕವು ವೈವಿಧ್ಯಮಯವಾದ 14 ಕೃಷಿ–ಹವಾಮಾನ ವಲಯಗಳನ್ನು ಹೊಂದಿದ್ದು, ಪ್ರತಿಯೊಂದು ವಲಯವೂ ತನ್ನದೇ ಆದ ಸವಾಲುಗಳನ್ನು ಹೊಂದಿದೆ. ಪ್ರಸಕ್ತ ಇರುವ ಮಾನದಂಡಗಳು ಎಲ್ಲ ವಲಯಗಳಿಗೂ ಏಕರೂಪವಾಗಿದ್ದು, ಇದು ಬರ ಘೋಷಣೆಗೆ ಅಗತ್ಯವಾದ ಸೂಕ್ಷ್ಮಗಳು ಮತ್ತು ಬದಲಾವಣೆಗಳನ್ನು ಒಳಗೊಳ್ಳುವುದಿಲ್ಲ. ಹಾಗಾಗಿ, ವಲಯವಾರು ನಿರ್ದಿಷ್ಟವಾದ ಸೂಚ್ಯಂಕಗಳನ್ನು ಬರ ಘೋಷಣೆಗೆ ರೂಪಿಸುವುದು ಅಗತ್ಯವಾಗಿರುತ್ತದೆ. ಪ್ರಸಕ್ತ ಬರ ಘೋಷಣೆಯ ಮಾನದಂಡಗಳು ಹವಾಮಾನಶಾಸ್ತ್ರೀಯ, ಕೃಷಿ ಹಾಗೂ ಜಲಶಾಸ್ತ್ರೀಯ ಬರಗಳ ಸೂಚ್ಯಂಕಗಳನ್ನು ತನ್ನ ಮಾನದಂಡಗಳಲ್ಲಿ ಕ್ರೋಢೀಕರಿಸಿಕೊಂಡಿದೆ. ಆದರೆ, ಸದಾ ಕಾಲವೂ ಇದು ಅನ್ವಯಯೋಗ್ಯವೆಂದೇನೂ ಅಲ್ಲ. ಹವಾಮಾನ ಶಾಸ್ತ್ರೀಯ ಬರವನ್ನು ಪರಿಗಣಿಸಿಯೇ ನೋಡುವುದಾದರೆ, ಮುಂಗಾರಿನಲ್ಲಿ ಆರಂಭದಲ್ಲಿ ಮಳೆ ಕೊರತೆ ಇದ್ದದ್ದು ಆನಂತರ ಪ್ರಬಲ ಮಾರುತಗಳ ಪರಿಣಾಮ ಸುಧಾರಿಸಬಹುದು.

ಇತ್ತೀಚಿನ ವರ್ಷಗಳಲ್ಲಿ ಇದು ಹೆಚ್ಚು ಘಟಿಸಿದೆ. ಆಗಸ್ಟ್–ಸೆಪ್ಟೆಂಬರ್ ಅವಧಿಯಲ್ಲಿ ಮಳೆ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ, ಮುಂಗಾರು ಆರಂಭದಲ್ಲಿ ಮಳೆ ಕೊರತೆಯ ಕಾರಣಕ್ಕೆ ಬಿತ್ತನೆ ಪ್ರಮಾಣ ಇಳಿಕೆಯಾಗಿರುತ್ತದೆ. ಪರಿಣಾಮ ಬೆಳೆಯಲ್ಲಿ ಕೊರತೆಯುಂಟಾಗಿ ಕೃಷಿ ಆಧರಿತ ಬರದ ಸನ್ನಿವೇಶ ಉದ್ಭವಿಸುತ್ತದೆ. ಆದರೆ, ಇದೇ ವೇಳೆ ಸುಧಾರಿಸಿದ ಮಳೆಯ ಮಾರುತಗಳಿಂದಾಗಿ ಹವಾಮಾನ ಮತ್ತು ಜಲಶಾಸ್ತ್ರೀಯ ಬರ ಕಾಣದೆ ಹೋಗಬಹುದು. ಈ ಸೂಕ್ಷ್ಮವನ್ನು ಬರ ಘೋಷಣೆಗೆ ಕಡ್ಡಾಯವಾಗಿರುವ ಮಾನದಂಡಗಳು ಒಳಗೊಳ್ಳಬೇಕಾಗಿದೆ.

ಭಾರತೀಯ ಹವಾಮಾನ ಇಲಾಖೆಯು ದೇಶಾದ್ಯಂತ ಶೇ.10 ಮಳೆಯ ಕೊರತೆಯನ್ನೂ ಸಹ ಬರದ ವರ್ಷ ಎಂದು ತೀರ್ಮಾನಿಸಿ ಘೋಷಿಸುತ್ತದೆ. ಆದರೆ, ಮಾನದಂಡಗಳ ಪ್ರಕಾರ ರಾಜ್ಯಗಳು ಬರ ಘೋಷಣೆಯನ್ನು ಮಾಡಬೇಕಾದರೆ ಮಳೆಯ ವ್ಯತ್ಯಯ ಸೂಚ್ಯಂಕವು ಶೇ.60ಕ್ಕಿಂತ ಹೆಚ್ಚಿರಬೇಕು ಎನ್ನಲಾಗಿದೆ.

ನಾವು ಈ ಎರಡರ ನಡುವಿನ ಅಂತರವನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಮಳೆಯ ವ್ಯತ್ಯಯ ಸೂಚ್ಯಂಕವು ಶೇ.20ರಿಂದ ಶೇ.59ರವರೆಗೆ ಇದ್ದರೂ ಅದು ಬರ ಘೋಷಣೆಗೆ ಅಗತ್ಯವಾದ ಕ್ರಿಯಾಕಾರಣ (ಟ್ರಿಗರ್) ಅಂಶವೆಂದು ಪರಿಗಣಿಸಬೇಕು. ಶುಷ್ಕ ಅಥವಾ ಒಣಹವೆಯ ವಿಚಾರದಲ್ಲಿಯೂ ಕೈಪಿಡಿಯಲ್ಲಿ ಕಠಿಣವಾದ ನಿಯಮಾವಳಿ ಇದೆ. ಬರ ಘೋಷಿಸಲು ಮೂರು ವಾರಗಳ ಒಣಹವೆಯನ್ನು ಸೂಚ್ಯಂಕವಾಗಿ ಪರಿಗಣಿಸಲಾಗಿದೆ. ವಿಪರ್ಯಾಸವೆಂದರೆ, ಎರಡು ಮೂರು ವಾರಗಳ ಒಣಹವೆ ಕೂಡ ಬೆಳೆಯ ಮೇಲೆ ಗಂಭೀರ ದುಷ್ಪರಿಣಾಮ ಉಂಟುಮಾಡಿ ಸರಿಪಡಿಸಲಾಗದ ಬೆಳೆ ಹಾನಿಗೆ ಕಾರಣವಾಗುತ್ತದೆ. ಹಾಗಾಗಿ ಮಳೆ ಕುರಿತಾದ ಸೂಚ್ಯಂಕದಲ್ಲಿ ಒಣಹವೆಯ ಅವಧಿಯನ್ನು ಎರಡು ವಾರಗಳಿಗಿಂತ ಕಡಿಮೆ ಎಂದು ಪರಿಗಣಿಸಬೇಕು. ಬರ ಘೋಷಣೆಯ ವಿಳಂಬಕ್ಕೆ ಕಾರಣವಾಗುವ ಕೈಪಿಡಿಯಲ್ಲಿರುವ ಮತ್ತೊಂದು ಪ್ರಮುಖ ಮಾನದಂಡವೆಂದರೆ ಅದು ರಾಜ್ಯ ಸರ್ಕಾರವು ಇನ್ನು ಯಾವುದೇ ಬಿತ್ತನೆ ಚಟುವಟಿಕೆ ನಡೆಯುವುದಿಲ್ಲ ಎಂದು ಬೆಳೆ ಹಂಗಾಮಿನ ವೇಳೆ ಕೇಂದ್ರ ಸರ್ಕಾರಕ್ಕೆ ಕಡ್ಡಾಯವಾಗಿ ಪ್ರಮಾಣಪತ್ರ ಸಲ್ಲಿಸಬೇಕಿರುವುದು. ಇದು ಇನ್‌ಪುಟ್ ಸಬ್ಸಿಡಿ ಪರಿಕಲ್ಪನೆಗೆ ವ್ಯತಿರಿಕ್ತವಾಗಿದೆ. ಇನ್‌ಪುಟ್ ಸಬ್ಸಿಡಿ ಪರಿಕಲ್ಪನೆಯು ತಕ್ಷಣದ ಪರಿಹಾರ ನೀಡುವ ಮೂಲಕ ಆರ್ಥಿಕ ಚಟುವಟಿಕೆಯನ್ನು ಪುನರಾರಂಭಿಸಬೇಕು ಎನ್ನುತ್ತದೆ. ಆದರೆ, ಮೇಲೆ ಹೇಳಿದ ಕೇಂದ್ರದ ನಿಯಮಾವಳಿಯಿಂದಾಗಿ ರಾಜ್ಯ ಸರ್ಕಾರವು ಬರ ಘೋಷಣೆ ಮಾಡಿ ತಕ್ಷಣ ಪರಿಹಾರಕ್ಕೆ ಮುಂದಾಗಲು ಸಾಧ್ಯವಾಗುವುದಿಲ್ಲ. ಬರ ಘೋಷಣೆಗೆ ಪರಿಗಣಿಸಲಾಗುವ ಇತರ ಸೂಚ್ಯಂಕಗಳಾದ ಅಂತರ್ಜಲ ಮಟ್ಟ, ಜೈವಿಕ ಪರಿಸರದ (ಬಯೋಮಾಸ್) ಸೂಚ್ಯಂಕಗಳು ಸಹ ಪರಿಶೀಲನೆಗೆ ಒಳಪಡಬೇಕಾಗುತ್ತದೆ. ಅಂತರ್ಜಲದ ಮಟ್ಟ ಕುಸಿಯಲು ಅಥವಾ ಹೆಚ್ಚಳವಾಗಲು ಕನಿಷ್ಠ 2–3 ವಾರಗಳ ಅವಧಿಯ ಅಗತ್ಯವಿದೆ. ಹಾಗಾಗಿ ಇದರ ಪರಿಗಣನೆಯ ವೇಳೆ ವಿವೇಚನೆ ಅಗತ್ಯ. ಅದೇ ರೀತಿ, ಉಪಗ್ರಹ ಆಧರಿತ ಎನ್‌ಡಿವಿಐ ಸೂಚ್ಯಂಕವು ಕಳೆಯನ್ನೂ ಸಹ ಹಸಿರು ಜೈವಿಕ ಪರಿಸರವೆಂದು ಪರಿಗಣಿಸುವ ಸಾಧ್ಯತೆ ಇದೆ. ಈ ಅಂಶಗಳು ಬರ ಘೋಷಣೆಗೆ ಅಗತ್ಯವಾದ ಸೂಚ್ಯಂಕಗಳ ಪರಿಶೀಲನೆಯಲ್ಲಿ ನೇತ್ಯಾತ್ಮಕ ಪರಿಣಾಮಕ್ಕೆ ಕಾರಣವಾಗುತ್ತವೆ.

ಬೆಳೆ ಹಾನಿ ಸಹಾಯಧನಕ್ಕೆ ಅರ್ಹತೆ ಪಡೆಯಲು ಬರ ನಿರ್ವಹಣೆ ಕೈಪಿಡಿ 2016ರಲ್ಲಿನ ನಿಯಮಗಳು ಹಾಗೂ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ನಿಯಮಾವಳಿಗಳನ್ನು ಸಮೀಕರಿಸುವ ಅಗತ್ಯವಿದೆ. ಬರ ನಿರ್ವಹಣೆ ಕೈಪಿಡಿಯ ಮಾನದಂಡದಡಿ ಬೆಳೆಹಾನಿ ಸಹಾಯಧನಕ್ಕೆ ಅರ್ಹತೆಗೆ ಪಡೆಯಲು ಶೇ.50ರಷ್ಟು ಬೆಳೆಹಾನಿ ಪ್ರಮಾಣ ಅಗತ್ಯವಿರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಸೆ.19ರಿಂದ 23ರವರೆಗೆ ಮೂತ್ರಜನಕಾಂಗ ತಪಾಸಣಾ ಶಿಬಿರ

ಮೈಸೂರು,ಸೆ.16–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಸೆ.19ರಿಂದ 23ರವರೆಗೆ ಮೂತ್ರಜನಕಾಂಗ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಮೂತ್ರಜನ ಕಾಂಗ ತಜ್ಞ ವೈದ್ಯ ಡಾ.ಯು.ಎನ್.ಮಂಜುನಾಥ್ ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ.

ಶಿಬಿರದಲ್ಲಿ ಮೂತ್ರ ವಿಸರ್ಜಿಸುವಾಗ ನೋವು, ಮೂತ್ರದಲ್ಲಿ ರಕ್ತ, ಮೂತ್ರಜನಕಾಂಗದ ಸಮಸ್ಯೆ, ಮೂತ್ರಜನಕಾಂಗದಲ್ಲಿ ಕಲ್ಲು, ಸೋಂಕು, ಪ್ರಾಸ್ಟೇಟ್ ಸಂಬಂಧಿತ ಸಮಸ್ಯೆಗಳಿರುವವರು ಹಾಗೂ ಲೈಂಗಿಕ ಅಸ್ವಸ್ಥತೆಗಳು ಇರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ವೈದ್ಯರು ಸೂಚಿಸುವ ಪರೀಕ್ಷೆಗಳಿಗೆ ಶೇ 20% ರಿಯಾಯಿತಿ ಇದೆ. ಹೆಚ್ಚಿನ ಮಾಹಿತಿಗಾಗಿ 0821–2533600, 99863 99862 ಸಂಪರ್ಕಿಸಬಹುದಾಗಿದೆ.

ಯುವಜನರಿಗೆ ಕಾವ್ಯ ಕಮ್ಮಟ ಕಾರ್ಯಾಗಾರ

ಮೈಸೂರು,ಸೆ.16–ಮೈಸೂರಿನ ಅಭಿರುಚಿ ಬಳಗ, ಎನ್.ವ್ಹಿ. ರಮೇಶ್ ಕಲಾಬಳಗ, ಆಸಕ್ತಿ ಪ್ರಕಾಶನ ಹಾಗೂ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಮೈಸೂರು ವಿಭಾಗದ ವತಿಯಿಂದ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಶನಿವಾರ–ಭಾನುವಾರಗಳಂದು ಆಸಕ್ತ ಯುವಜನರಿಗೆ ಕಾವ್ಯ ಕಮ್ಮಟ, ನಾಟಕ ರಚನಾ ಕಮ್ಮಟ, ಅಂಕಣ ರಚನಾ ಕಮ್ಮಟ, ಪುಸ್ತಕ ರಚನೆ–ಪ್ರಕಟಣೆ, ಸಾಮೂಹಿಕ ಕವಿತೆ–ಕಥೆ–ಲೇಖನಗಳ ಪ್ರಕಟಣೆಯ ಕಾರ್ಯಾಗಾರಗಳನ್ನು ಏರ್ಪಡಿಸಲಾಗಿದೆ. ಭಾಗವಹಿಸಲು ಆಸಕ್ತಿ ಇರುವ ಮೈಸೂರು–ಮಂಡ್ಯ–ಚಾಮರಾಜನಗರ–ಹಾಸನ–ಕೊಡಗು ಜಿಲ್ಲೆಗಳ ಯುವಕ–ಯುವತಿಯರು, ಹಿರಿಯರು ತಮ್ಮ ಹೆಸರು ದಾಖಲಿಸಿಕೊಳ್ಳಬಹುದು. ವಿವರಗಳಿಗೆ ಎನ್.ವಿ.ರಮೇಶ್, ಮೊ. : 9845565238 ಸಂಪರ್ಕಿಸಬಹುದು.

ಅತಿಥಿ ಶಿಕ್ಷಕರ ಬಾಕಿ ವೇತನ ಬಿಡುಗಡೆಗೆ ಒತ್ತಾಯ

ಮೈಸೂರು, ಸೆ. 16– ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಕಳೆದ ಜೂನ್–2023, ಜುಲೈ–2023 ಆಗಸ್ಟ್–2023ರ ವೇತನ ಇದುವರೆಗೂ ಪಾವತಿಸಿರುವುದಿಲ್ಲ. ಇದನ್ನೇ ನಂಬಿ ಬದುಕುತ್ತಿರುವ ಶಿಕ್ಷಕ ವೃಂದದವರು ಆರ್ಥಿಕವಾಗಿ ತೊಂದರೆಯಲ್ಲಿರುತ್ತಾರೆ. ಅತ್ಯಂತ ಕಡಿಮೆ ಸಂಭಾವನೆಗೆ ಸಮಾಜ ಒಳಿತಿಗಾಗಿ, ವಿದ್ಯಾರ್ಥಿಗಳ ಹಿತಚಿಂತಕವಾಗಿ ಕಾರ್ಯನಿರ್ವಹಿಸುತ್ತಿರುವ ಇವರ ಸಮಸ್ಯೆ ಇಲಾಖಾ ಅಧಿಕಾರಿಗಳಿಗೆ ಅರ್ಥವಾಗುತ್ತಿಲ್ಲ. ಅಧಿಕಾರಿಗಳಿಗೆ ಸೂಚನೆ ನೀಡಿ, ಕೂಡಲೇ ಬಾಕಿ ಇರುವ ವೇತನವನ್ನು ಬಿಡುಗಡೆಗೊಳಿಸುವಂತೆ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ನಿಯಮದಡಿ ಸದರಿಯವರ ವೇತನವನ್ನು ಕೂಡಲೇ ಪರಿಷ್ಕರಣೆ ಮಾಡಿ, ಹೊಸ ವೇತನವನ್ನು ನಿಗದಿ ಗೊಳಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಗೆ ವಿಧಾನಪರಿಷತ್ ಮಾಜಿ ಸದಸ್ಯ ಧರ್ಮಸೇನಾ ಒತ್ತಾಯಿಸಿದ್ದಾರೆ.



ಧರ್ಮಸೇನಾ

ಕೆಆರ್ ಆಸ್ಪತ್ರೆ–ಮೆಡಿಕಲ್ ಕಾಲೇಜು ನಡುವೆ ಕಾರ್ಯಗತವಾಗಲಿಲ್ಲ ಸಬ್ ವೇ



ಮೈಸೂರು, ಸೆ. 16(ಆರ್‌ಕೆ)– ಸುರಕ್ಷಿತ ದೃಷ್ಟಿಯಿಂದ ಕೆಆರ್ ಆಸ್ಪತ್ರೆ ಹಾಗೂ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿಆರ್‌ಐ) ನಡುವೆ ನಿರ್ಮಿಸಲುದ್ದೇಶಿಸಿದ್ದ ಸಬ್ ವೇ ಯೋಜನೆ ಪ್ರಸ್ತಾಪ ನೆನೆಗುದಿಗೆ ಬಿದ್ದಿದೆ. ಹಾಗಾಗಿ ಸದಾ ವಾಹನ ದಟ್ಟಣೆಯಿಂದ ಕೂಡಿದ ಇರ್ವಿನ್ ರಸ್ತೆ ದಾಟಲು ಪರಿತಪಿಸುವಂತಾಗಿದೆ.

ಕಾಲೇಜಿನ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು, ಸಿಬ್ಬಂದಿ, ಶವಾಗಾರ ಸಿಬ್ಬಂದಿ ಓಡಾಡಲು, ಕೆಆರ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ ಎಂಎಲ್‌ಸಿ ರೋಗಿಗಳ ಮೃತದೇಹಗಳನ್ನು ಸ್ಟ್ರೆಚರ್‌ಗಳಲ್ಲಿ ಮರಣೋತ್ತರ ಪರೀಕ್ಷೆಗಾಗಿ ಶವಾಗಾರಕ್ಕೆ ಸಾಗಿಸಲು ಮಧ್ಯೆ ಇರುವ ಇರ್ವಿನ್ ರಸ್ತೆ ಅಡ್ಡ ಬರುತ್ತದೆ. ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್‌ನಿಂದ ರೈಲ್ವೇ ಸ್ಟೇಷನ್ ಕಡೆಗೆ ಸದಾ ವಾಹನ ದಟ್ಟಣೆ ಇರುವು ದರಿಂದ ರಸ್ತೆ ದಾಟಲು ಪರದಾಡುವಂತಾಗಿದ್ದು, ಮೃತದೇಹಗಳನ್ನೂ ಸ್ಟ್ರೆಚರ್ ಮೇಲಿರಿಸಿಕೊಂಡು ರಸ್ತೆ ಬದಿ ಕಾಯುವಂತಾಗಿದೆ.

ಇಲ್ಲಿನ ಸಮಸ್ಯೆ ಬಗ್ಗೆ ಖುದ್ದು ಅರಿತಿದ್ದ ಈ ಹಿಂದೆ ಚಾಮರಾಜ ಕ್ಷೇತ್ರದ ಶಾಸಕರಾಗಿದ್ದ ವಾಸು ಅವರು, ಕೆಆರ್ ಆಸ್ಪತ್ರೆ ಮತ್ತು ಮೈಸೂರು ಮೆಡಿಕಲ್ ಕಾಲೇಜು ನಡುವಿನ ರಸ್ತೆಗೆ ಅಡ್ಡಲಾಗಿ ಸಬ್ ವೇ (ಅಂಡರ್‌ಪಾಸ್) ಅಥವಾ ಓವರ್ ಬ್ರಿಡ್ಜ್ ನಿರ್ಮಿಸುವ ಪ್ರಸ್ತಾಪ ಮಾಡಿದ್ದರು. ಆ ಸಂಬಂಧ ಆಸ್ಪತ್ರೆ ಮೆಡಿಕಲ್ ಸೂಪರಿಂಟೆಂಡೆಂಟ್, ಕಾಲೇಜಿನ ಡೀನ್ ಹಾಗೂ ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳೊಂದಿಗೆ ಸಭೆಗಳನ್ನೂ ನಡೆಸಿದ್ದರಾದರೂ, ಬೇರೆ ಬೇರೆ ಕಾರಣಗಳಿಂದ ಯೋಜನೆಗೆ ಚಾಲನೆ ಸಿಕ್ಕಿರಲಿಲ್ಲ.

ದಿನದಿಂದ ದಿನಕ್ಕೆ ವಾಹನ ದಟ್ಟಣೆ ಹೆಚ್ಚಾಗುತ್ತಿದ್ದು, ಸಮಸ್ಯೆ ಉಲ್ಬಣವಾದ ಹಿನ್ನೆಲೆಯಲ್ಲಿ ನಂತರ ಆಯ್ಕೆಯಾದ ಶಾಸಕ ಎಲ್.ನಾಗೇಂದ್ರ ಸಹ ಆಸ್ಪತ್ರೆ ಮತ್ತು ಕಾಲೇಜು ನಡುವೆ ಸಬ್ ವೇ ಮೂಲಕ ಸಂಪರ್ಕ ಕಲ್ಪಿಸಲು ಪ್ರಯತ್ನಿಸಿದ್ದರಾದರೂ, ಕಾಮಗಾರಿಗೆ ಚಾಲನೆ ಸಿಕ್ಕಿರಲಿಲ್ಲ.

ಆ ರಸ್ತೆಯಲ್ಲಿ ಸಿಟಿ, ಕೆಎಸ್‌ಆರ್‌ಟಿಸಿ ಬಸ್‌ಗಳು, ಆಂಬುಲೆನ್ಸ್‌ಗಳು, ಆಟೋ, ಕಾರು, ದ್ವಿಚಕ್ರ ವಾಹನಗಳು ಹೆಚ್ಚಾಗಿ ಸಂಚರಿಸುವುದರಿಂದ ಕೆಆರ್, ಚೆಲುವಾಂಬ ಆಸ್ಪತ್ರೆಯ ಉತ್ತರ ದ್ವಾರದಿಂದ ಕಾಲೇಜಿಗೆ ತೆರಳುವವರಿಗೆ ಭಾರೀ ತೊಂದರೆಯಾಗುತ್ತಿದ್ದು, ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಿರುವುದರಿಂದ ಸಬ್ ವೇ ಅಗತ್ಯವಿದ್ದು, ಸಂಬಂಧಪಟ್ಟವರು ಈ ಯೋಜನೆಯನ್ನು ತುರ್ತಾಗಿ ಕೈಗೊಳ್ಳಬೇಕೆಂದು ಹಲವರು ಒತ್ತಾಯಿಸುತ್ತಿದ್ದಾರೆ.

ಮೈಸೂರು ಮೆಡಿಕಲ್ ಕಾಲೇಜು ಶವಾಗಾರದ ಬಳಿ ಅವಾಂತರ

ಮೈಸೂರು,ಸೆ.16(ಆರ್‌ಕೆ)– ಶತಮಾನೋತ್ಸವದ ಹೊಸ್ತಿಲಲ್ಲಿರುವ ಪ್ರತಿಷ್ಠಿತ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಆವರಣದಲ್ಲಿರುವ ಶವಾಗಾರದ ಬಳಿ ನೀರು ನಿಂತು ಮೃತದೇಹಗಳ ಮರಣೋತ್ತರ ಪರೀಕ್ಷೆಗಾಗಿ ಬರುವ ಸಂಬಂಧಿಕರಿಗೆ ತೀವ್ರ ತೊಂದರೆಯಾಗುತ್ತಿದೆ.



ಶವಾಗಾರದ ಎದುರು ಫೋರೆನ್ಸಿಕ್ ಮೆಡಿಸಿನ್ ವಿಭಾಗದ ಕಟ್ಟಡದ ಪಕ್ಕದಲ್ಲಿ ಉಂಟಾಗಿರುವ ಗುಂಡಿಯಲ್ಲಿ ಮಳೆ ನೀರು ನಿಂತು ಕೊಚ್ಚೆಯಾಗಿರುವುದರಿಂದ ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಯುವ ವೇಳೆ ಬರುವ ಸಂಬಂಧಿಕರು, ಪೊಲೀಸ್ ವಾಹನ ಹಾಗೂ ಆಂಬುಲೆನ್ಸ್ ನಿಲುಗಡೆಗೆ ತೊಂದರೆಯಾಗುತ್ತಿದೆ. ಮೃತದೇಹದೊಂದಿಗೆ ಬರುವ ಜನರು ನಿಂತುಕೊಳ್ಳಲು ಸ್ಥಳವಿಲ್ಲದೇ ಪರದಾಡುವಂತಾಗಿದೆ.

ನೀರು ನಿಂತಿರುವುದರಿಂದ ಸೊಳ್ಳೆಗಳು ಉತ್ಪತ್ತಿಯಾಗಿದ್ದರೂ ಕಾಲೇಜಿನ ಅಧಿಕಾರಿಗಳು ಗಮನಹರಿಸಿಲ್ಲ. ಸಾರ್ವಜನಿಕರಿಗೆ ಕುಡಿಯುವ ನೀರು, ಶೌಚಾಲಯಗಳು ಇಲ್ಲದಿರುವುದರಿಂದ ಪರದಾಡುವಂತಾಗಿದೆ.

ಅಲ್ಲದೇ ಶವಾಗಾರದ ಸುತ್ತಲೂ ಗಿಡಗಂಟಿಗಳು ಬೆಳೆದುಕೊಂಡಿದ್ದು, ಅಲ್ಲಿ ನೆಲಕ್ಕೆ ಹಾಕಿರುವ ಇಂಟರ್‌ಲಾಕಿಂಗ್ ಟೈಲ್ಸ್‌ಗಳು ಕಿತ್ತು ಬಂದಿರುವ ಕಾರಣ ವಾಹನಗಳು ಓಡಾಡುವುದು ದುಸ್ತರವಾಗಿದೆ. ಸಾವಿನಿಂದ ದುಃಖದಲ್ಲಿರುವವರಿಗೆ ಕನಿಷ್ಠ ಮೂಲ ಸೌಲಭ್ಯವನ್ನೂ ಶವಾಗಾರದ ಬಳಿ ಒದಗಿಸದ ಕಾರಣ ಜನರು ಪರಿತಪಿಸುವಂತಾಗಿದೆ.

ಒಂದು ಕಡೆ ಶವಾಗಾರದ ಒಳಗಿಂದ ಬರುವ ದುರ್ವಾಸನೆಯಾದರೆ, ಮತ್ತೊಂದೆಡೆ ಶೌಚಾಲಯವಿಲ್ಲದ ಕಾರಣ ಆವರಣದ ಕಟ್ಟಡಗಳ ಮರೆಯಲ್ಲಿ ಸಾರ್ವಜನಿಕರು ಮೂತ್ರ ವಿಸರ್ಜನೆ ಮಾಡುವುದರಿಂದ ವಾಸನೆ ಬರುತ್ತಿದ್ದು, ಅಲ್ಲಿನ ವಾತಾವರಣ ಚಿಂತಾಜನಕವಾಗಿದೆ.

ಕಾಲೇಜು ಮುಖ್ಯ ಕಟ್ಟಡ ಕಡೆಯಿಂದ ಶವಾಗಾರಕ್ಕೆ ಹೋಗುವ ರಸ್ತೆ ಹಳ್ಳಕೊಳ್ಳಗಳಿಂದ ಕೂಡಿದ್ದು, ಡಾಂಬರೀಕರಣ ಮಾಡದ ಕಾರಣ ವಾಹನಗಳಲ್ಲಿ ಓಡಾಡುವುದೇ ದುಸ್ತರವಾಗಿದೆ. ಸಂಬಂಧಿಕರ ಸಾವಿನ ಸಂಕಷ್ಟದಲ್ಲಿರುವವರಿಗೂ ಕನಿಷ್ಠ ಸೌಲಭ್ಯ ಒದಗಿಸದಿರುವುದೂ ಅಮಾನವೀಯ ಎನಿಸಿದೆ.

ಮೈಸೂರು ಮಿತ್ರ

ಭಾನುವಾರ 17 ಸೆಪ್ಟೆಂಬರ್ 2023

ಮೈತ್ರಿ ವಿಚಾರ: ವರಿಷ್ಠರ ತೀರ್ಮಾನಕ್ಕೆ ಬದ್ಧ

ಮಾಜಿ ಸಚಿವ ಸಿ.ಎಸ್. ಪುಟ್ಟರಾಜು

ಮಂಡ್ಯ, ಸೆ.16– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ವಿಚಾರವಾಗಿ ಪಕ್ಷದ ವರಿಷ್ಠರ ತೀರ್ಮಾನಕ್ಕೆ ಜಿಲ್ಲಾ ಜೆಡಿಎಸ್ ಬದ್ಧವಾಗಿ ಕಾರ್ಯ ನಿರ್ವಹಿಸಲಿದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಶನಿವಾರ ನಗರದ ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ಲೋಕಸಭಾ ಚುನಾವಣೆ ಮೈತ್ರಿ ಹಾಗೂ ಕಾವೇರಿ ನೀರಿನ ವಿಚಾರ ಮತ್ತು ಜಿಲ್ಲೆಯ ರೈತರ ರಕ್ಷಣೆ ಸೇರಿದಂತೆ ಮತ್ತಿತರ ವಿಷಯ ಚರ್ಚೆ ನಡೆಸಿ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡೂ ಪಕ್ಷಗಳ ರಾಷ್ಟ್ರೀಯ ನಾಯಕರ ಚಿಂತನೆಗೆ ಬದ್ಧರಾಗುವ ಕಾಲ ಸನ್ನಿಹಿತವಾಗಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಅಂತಹ ಪರಿಸ್ಥಿತಿಯನ್ನು ತಂದೊಡ್ಡಿದೆ ಎಂದರು.

ಪಕ್ಷದ ವರಿಷ್ಠರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಹಾಗೂ ಶಾಸಕ ಜಿ.ಟಿ.ದೇವೇಗೌಡ ನೇತೃತ್ವದ ಪಕ್ಷದ ಕೋರ್ ಕಮಿಟಿ ಕೈಗೊಳ್ಳುವ ತೀರ್ಮಾನಕ್ಕೆ ಬದ್ಧರಾಗುವುದಾಗಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ ಎಂದರು.



ಕಾವೇರಿ ವಿಚಾರದಲ್ಲಿ ಮಂಡ್ಯ ಜಿಲ್ಲೆ ರೈತರನ್ನು ರಕ್ಷಿಸುವ ಹೊಣೆಗಾರಿಕೆ ನಮ್ಮದಾಗಿದ್ದು, ತಾಲೂಕು ಮಟ್ಟದಲ್ಲಿ ಸಂಘಟನೆ ಮಾಡಿ ಕೃಷಿ ಹಾಗೂ ಕುಡಿಯುವ ನೀರು ಪಡೆಯಲು ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು.

ಚುನಾವಣಾ ಮೈತ್ರಿ ವಿಚಾರವಾಗಿ ಆಸಕ್ತಿ ತೋರುವ ಮಾಜಿ ಪ್ರಧಾನಿ ದೇವೇಗೌಡರು ಕಾವೇರಿ ವಿಚಾರದಲ್ಲಿ ನಿರಾಸಕ್ತಿ ತೋರುತ್ತಿದ್ದಾರೆ ಎಂಬ ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿಕೆ ಸರಿಯಲ್ಲ. ಕಾವೇರಿ ವಿಚಾರವಾಗಿ ರಾಜ್ಯದ ಹಿತ ಕಾಯುವುದು ದೇವೇಗೌಡರ ಆದ್ಯ ಕರ್ತವ್ಯ. ಈ ವಿಚಾರದಲ್ಲಿ ಗೌಡರ ಮುಂದೆ ನಾನು ಮತ್ತು ಕೃಷಿ ಸಚಿವರು ಗೌಣ ಎಂಬುದನ್ನು ಅವರು ಮನಗಾಣಲಿ ಎಂದು ತಿರುಗೇಟು ನೀಡಿದರು.

ಮುಂಬರುವ ಲೋಕಸಭಾ ಚುನಾವಣೆಗೆ ನಾನು ಆಕಾಂಕ್ಷಿ ಅಲ್ಲ. ನಮ್ಮ ಪಕ್ಷದಲ್ಲಿ ಹಲವರು ಸಮರ್ಥರಿದ್ದಾರೆ. ಪಕ್ಷ ಸೂಚಿಸುವ ಅಭ್ಯರ್ಥಿ ಪರ ಕೆಲಸ ಮಾಡುವುದಷ್ಟೆ ನನ್ನ ಕೆಲಸ ಎಂದರು.

> ಎರಡು ಪಕ್ಷಗಳು ಮೈತ್ರಿ ಮಾಡಿಕೊಳ್ಳುವುದು ಅನಿವಾರ್ಯವೇ ಹೊರತು ಅನ್ಯ ಮಾರ್ಗವಿಲ್ಲ ಎಂಬ ಕೃಷಿ ಸಚಿವರ ಹೇಳಿಕೆ ಹಾಸ್ಯಾಸ್ಪದ. 2018ರಲ್ಲಿ ಜೆಡಿಎಸ್ ಜಿಲ್ಲೆಯ 7 ಕ್ಷೇತ್ರಗಳಲ್ಲಿ ಜಯಗಳಿಸಿದ್ದಾಗ ಇದೇ ಚಲುವರಾಯಸ್ವಾಮಿ ಅವರನ್ನು ನಾನು ಡೆಡ್ ಹಾರ್ಸ್ ಎಂದು ಮೂದಲಿಸಿದ್ದೆ. ಆದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಮ್ಮೆಲ್ಲರನ್ನು ಜಿಲ್ಲೆಯ ಜನ ಸೋಲಿಸಿ ಡೆಡ್ ಹಾರ್ಸ್ ಮಾಡಿದ್ದಾರೆ. ಸೂಕ್ತ ಸಂದರ್ಭದಲ್ಲಿ ತೀರ್ಮಾನ ಕೈಗೊಳ್ಳುವ ಚಾಣಕ್ಮ ಜಿಲ್ಲೆಯ ಮತದಾರರಿಗಿದೆ.
> –ಸಿ.ಎಸ್.ಪುಟ್ಟರಾಜು, ಮಾಜಿ ಸಚಿವ.

ಸುದ್ದಿಗೋಷ್ಠಿಯಲ್ಲಿ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಕೆ.ಸುರೇಶ್ ಗೌಡ, ಡಾ.ಅನ್ನದಾನಿ, ಎನ್.ಅಪ್ಪಾಜಿಗೌಡ, ಕೆ.ಟಿ.ಶ್ರೀಕಂಠೇಗೌಡ, ಜಿ.ಬಿ.ಶಿವಕುಮಾರ್, ಪಕ್ಷದ ಜಿಲ್ಲಾಧ್ಯಕ್ಷ ಡಿ.ರಮೇಶ್, ಮುಖಂಡ ಬಿ.ಆರ್.ರಾಮಚಂದ್ರ ಸೇರಿದಂತೆ ತಾಲೂಕು ಹಾಗೂ ವಿವಿಧ ಘಟಕಗಳ ಅಧ್ಯಕ್ಷರು ಉಪಸ್ಥಿತರಿದ್ದರು.

ಮೈತ್ರಿಗೆ ಚಲುವರಾಯಸ್ವಾಮಿ ಕಾರಣ: ಸುರೇಶ್‌ಗೌಡ

ಮಂಡ್ಯ, ಸೆ.16– ಪ್ರಸ್ತುತ ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಅನಿವಾರ್ಯವಾಗಿದ್ದು, ಇಂತಹ ಪರಿಸ್ಥಿತಿಗೆ ಕಾಂಗ್ರೆಸ್ ಹಾಗೂ ಸಚಿವ ಚಲುವರಾಯಸ್ವಾಮಿ ಕಾರಣ ಎಂದು ಮಾಜಿ ಶಾಸಕ ಕೆ.ಸುರೇಶ್‌ಗೌಡ ಆರೋಪಿಸಿದರು.

ಶನಿವಾರ ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರದಲ್ಲಿದ್ದ ವೇಳೆ ಸರ್ಕಾರ ಕೆಡವಲು ಚಲುವರಾಯಸ್ವಾಮಿ ಯಾರೊಂದಿಗೆಲ್ಲ ಮಾತನಾಡಿದರು ಎಂಬ ಸಂಗತಿ ತಿಳಿದಿದೆ. ಸತ್ಯ ಏನೆಂಬುದು ಆತನ ಎದೆಯೊಳಗೆ ಇದೆ. ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಬೀಳಲು ಚಲುವರಾಯಸ್ವಾಮಿ ನಡೆಸಿದ ರಾಜಕೀಯ ವ್ಯಭಿಚಾರವೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯುಪಿಎ ಸರ್ಕಾರ ರಚಿಸಲು ದೇವೇಗೌಡರು ಎಷ್ಟೆಲ್ಲಾ ಸಹಕಾರ ನೀಡಿದ್ದರು ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಇಂದು ಇಂಡಿಯಾ ಒಕ್ಕೂಟದಲ್ಲಿ ಜೆಡಿಎಸ್ ಇಲ್ಲ. ಆದ್ದರಿಂದ ಅನಿವಾರ್ಯವಾಗಿ ಬಿಜೆಪಿ ಜೊತೆಗೆ ಹೋಗಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

135 ಸ್ಥಾನ ಗೆದ್ದಿರುವ ಕಾಂಗ್ರೆಸ್ ಪಕ್ಷದಲ್ಲಿ ಲೋಕಸಭಾ ಚುನಾವಣೆಗೆ ಸೂಕ್ತ ಅಭ್ಯರ್ಥಿಗಳಿಲ್ಲವೇ? ಅವರೇಕೆ ಅನ್ಯ ಪಕ್ಷಗಳ ನಾಯಕರನ್ನು ಸೆಳೆಯುತ್ತಿದ್ದಾರೆ? ನುಡಿದಂತೆ ನಡೆದಿದ್ದೇವೆ ಎನ್ನುವ ಸರ್ಕಾರ 135 ಸ್ಥಾನ ಗೆದ್ದಿದ್ದರೂ ಕೂಡ, ಅನ್ಯ ಪಕ್ಷದವರ ಮನೆ ಬಾಗಿಲು ತಟ್ಟುವ ಸ್ಥಿತಿಗೆ ಇಳಿದಿದೆ ಎಂದು ವ್ಯಂಗ್ಯವಾಡಿದರು.

ಬಿಜೆಪಿ ಜೊತೆ ಜೆಡಿಎಸ್ ಮೈತ್ರಿಯಿಂದ ನನಗೆ ಬಹಳ ನೋವಾಗುತ್ತಿದೆ ಎಂಬ ಚಲುವರಾಯಸ್ವಾಮಿ ಮಾತಿಗೆ ತಿರುಗೇಟು ನೀಡಿದ ಅವರು, ಅವರಿಗೆ ಜನ ಆಶೀರ್ವಾದ ಮಾಡಿದ್ದಾರೆ. ಚೆನ್ನಾಗಿ ಮೇಯ್ದುಕೊಳ್ಳಲಿ. ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿಎಂ ಮಾಡುತ್ತೇವೆ ಎಂದು ಕಾಂಗ್ರೆಸ್ ಪಕ್ಷ ಹೇಳಿತ್ತು. ಆದರೆ ಅವರನ್ನು ಸಿಎಂ ಮಾಡಲಾಗಿದೆಯೇ ಎಂದು ಪ್ರಶ್ನಿಸಿದರು.

ಅನ್ಯ ಪಕ್ಷಗಳಿಂದ ಅಭ್ಯರ್ಥಿಗಳನ್ನು ಸೆಳೆಯುವ ಹೀನಾಯ ಸ್ಥಿತಿಗೆ ಕಾಂಗ್ರೆಸ್ ತಲುಪಿದೆ. ಮೋದಿ ಅವರನ್ನು ವಿಶ್ವವೇ ಹೊಗಳುತ್ತಿದೆ. ಅಂತಹದ್ದರಲ್ಲಿ ನಾವುಗಳು ಹೊಗಳುವುದರಲ್ಲಿ ತಪ್ಪೇನಿದೆ ಎಂದರು.

ಪಕ್ಷದ ತೀರ್ಮಾನಕ್ಕೆ ಬದ್ಧ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ನಾಯಕರಾದ ದೇವೇಗೌಡ ಮತ್ತು ಕುಮಾರಸ್ವಾಮಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧವಾಗಿದ್ದೇವೆ. ನಾನು ಲೋಕಸಭಾ ಚುನಾವಣೆ ಅಭ್ಯರ್ಥಿ ಅಲ್ಲ. ಆದರೆ ಪಕ್ಷ ತೀರ್ಮಾನಿಸಿದರೆ, ಅದಕ್ಕೆ ಬದ್ಧನಾಗಿ ಇರುತ್ತೇನೆ. ಅತೃಪ್ತ ಆತ್ಮಗಳು ಎಲ್ಲ ಪಕ್ಷದಲ್ಲೂ ಇರುತ್ತವೆ. ಅದರಂತೆ ಜೆಡಿಎಸ್ ಪಕ್ಷದಲ್ಲೂ ಇವೆ ಕಾಂಗ್ರೆಸ್‌ನಲ್ಲೂ ಇದ್ದಾರೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಾವೇರಿ ಹೋರಾಟ ಬೆಂಬಲಿಸಿ ದಳಪತಿಗಳಿಂದ ಹೆದ್ದಾರಿ ತಡೆ

ಮಂಡ್ಯ, ಸೆ.16– ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ಮತ್ತೆ ನೀರು ಬಿಡುಗಡೆ ಮಾಡುವಂತೆ ಆದೇಶಿಸಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸತತ 3ನೇ ದಿನ ರಸ್ತೆ ತಡೆ ನಡೆಸಿತು. ಹೋರಾಟಕ್ಕೆ ಜೆಡಿಎಸ್ ಮುಖಂಡರು ಸಾಥ್ ನೀಡಿದರು.



ನಗರದ ಸರ್ ಎಂ.ವಿ ಪ್ರತಿಮೆ ಎದುರು ಕಾವೇರಿ ಹೋರಾಟಗಾರರು, ಜಾತ್ಯಾತೀತ ಜನತಾದಳ ಮುಖಂಡರು ಹಾಗೂ ಕಾರ್ಯಕರ್ತರು ಹಾಗೂ ರೈತ ಮಹಿಳೆಯರು ಮೈಸೂರು–ಬೆಂಗಳೂರು ಹೆದ್ದಾರಿ ತಡೆದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಕೆ.ಸುರೇಶ್‌ಗೌಡ ಮಾತನಾಡಿ, ರಾಜ್ಯ ಸರ್ಕಾರ ತಮಿಳುನಾಡಿಗೆ ಯಾವುದೇ ಕಾರಣಕ್ಕೂ ನೀರು ಬಿಡಬಾರದು. ಸರ್ಕಾರದ ದುಡುಕಿನ ನಿರ್ಧಾರದಿಂದ ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಮಟ್ಟ ಕಡಿಮೆಯಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಜಿಲ್ಲೆಯ ಏಳೂ ತಾಲೂಕುಗಳು ಬರ ಪೀಡಿತ ಪ್ರದೇಶ ಎಂದು ಘೋಷಣೆಯಾಗಿದೆ. ಬೆಳೆದು ನಿಂತಿರುವ ಬೆಳೆಗಳ ರಕ್ಷಣೆ ಜೊತೆಗೆ ಕುಡಿಯಲು ನೀರಿನ ಅಗತ್ಯವಿದ್ದು, ರೈತರ ಹಿತ ಕಾಪಾಡಲು ಮುಂದಾಗಬೇಕಾಗಿದೆ ಎಂದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಸುಪ್ರೀಂ ಕೋರ್ಟ್‌ನಲ್ಲಿ ಕಾವೇರಿ ಕೊಳ್ಳದ ವಾಸ್ತವ ಪರಿಸ್ಥಿತಿ ಮನವರಿಕೆ ಮಾಡಿಕೊಡಲು ಸರ್ಕಾರ ಮುಂದಾಗಬೇಕು. ಅದನ್ನು ಬಿಟ್ಟು ಕಾನೂನು ತಜ್ಞರ ಅಭಿಪ್ರಾಯದಂತೆ ನೀರು ಬಿಡಲು ಮುಂದಾಗಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಸಿ.ಎಸ್.ಪುಟ್ಟರಾಜು, ಕೆ.ಟಿ.ಶ್ರೀಕಂಠೇಗೌಡ, ಜಿ.ಬಿ.ಶಿವಕುಮಾರ್, ರೈತ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ ಸೇರಿದಂತೆ ಇತರರಿದ್ದರು.



ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ನಡೆದ ಶ್ರೀನುಲಿಯ ಚಂದಯ್ಯ ಜಯಂತಿಯಲ್ಲಿ ಶಾಸಕ ಗಣಿಗ ರವಿಕುಮಾರ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮುಡಾ ಮಾಜಿ ಅಧ್ಯಕ್ಷ ಅಸಾದುಲ್ಲಾಖಾನ್ ಹಾಗೂ ಅಧಿಕಾರಿಗಳ ವರ್ಗ ಹಾಜರಿತ್ತು.

ಕಾವೇರಿ ನದಿಯಲ್ಲಿ ನಡೆಯುತ್ತಿದ್ದ ಅನಧಿಕೃತ ಜಲಕ್ರೀಡೆಗೆ ತಡೆ

ಸಾಹಸ ಕ್ರೀಡಾ ಸಂಸ್ಥೆ, 50 ಇಂಜಿನಿಯರಿಂಗ್ ವಿದ್ಯಾರ್ಥಿಗಳ ವಾಪಸ್ ಕಳಿಸಿದ ಪೊಲೀಸರು

ಶ್ರೀರಂಗಪಟ್ಟಣ, ಸೆ.16– ಶ್ರೀರಂಗಪಟ್ಟಣ ತಾಲೂಕು ಮಂಡ್ಯದ ಕೊಪ್ಪಲು ಗ್ರಾಮದ ಬಳಿಯ ಬೋರೇದೇವರ ದೇವಾಲಯದ ಸಮೀಪ ಕಾವೇರಿ ನದಿಯಲ್ಲಿ ಖಾಸಗಿ ಸಂಸ್ಥೆಯೊಂದು ನಡೆಸುತ್ತಿದ್ದ ಜಲಕ್ರೀಡೆಯನ್ನು ಪೊಲೀಸರ ಸಹಕಾರದೊಂದಿಗೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಸ್ಥಗಿತಗೊಳಿಸಿದ್ದಾರೆ.

ಮೈಸೂರಿನ ಅಲ್ಮನಾಕ್ ಅಡ್ವೆಂಚರ್ ಸಾಹಸ ಕ್ರೀಡಾ ಸಂಸ್ಥೆಯು ಮೈಸೂರಿನ ಇಂಜಿನಿಯರಿಂಗ್ ಕಾಲೇಜೊಂದರ 50ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಕರೆತಂದು ರಿವರ್ ರ‍್ಯಾಫ್ಟಿಂಗ್, ಕಯಾಕಿಂಗ್ ಸೇರಿದಂತೆ ಹಲವಾರು ಜಲಕ್ರೀಡೆಗಳನ್ನು ಕಳೆದ ಗುರುವಾರದಿಂದ ನಡೆಸುತ್ತಿತ್ತು. ಈ ಸ್ಥಳದಲ್ಲಿ ಜಲಕ್ರೀಡೆ ನಡೆಸಲು ಸಂಸ್ಥೆ ಯಾವುದೇ ರೀತಿಯ ಅನುಮತಿಯನ್ನು ಪಡೆದಿರಲಿಲ್ಲ.



ಜಲಕ್ರೀಡೆ ನಡೆಯುತ್ತಿರುವುದನ್ನು ಗಮನಿಸಿದ ಗ್ರಾಮಸ್ಥರು ಈ ಕುರಿತು ಕಾವೇರಿ ನೀರಾವರಿ ನಿಗಮಕ್ಕೆ ದೂರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಬನ್ನೂರು ವ್ಯಾಪ್ತಿಯ ಕಾವೇರಿ ನೀರಾವರಿ ನಿಗಮದ ಇಂಜಿನಿಯರ್‌ಗಳು, "ಅನುಮತಿ ಪಡೆಯದೇ ಜಲಕ್ರೀಡೆ ನಡೆಸುತ್ತಿರುವುದು ನಿಯಮ ಬಾಹಿರ. ಅಲ್ಲದೇ, ಪ್ರಸ್ತುತ ಯಾವುದೇ ಸಂದರ್ಭದಲ್ಲಿ ಜಲಾಶಯದಿಂದ ನದಿಗೆ ನೀರನ್ನು ಬಿಡುವ ಸಾಧ್ಯತೆ ಇರುವುದರಿಂದ ಜಲಕ್ರೀಡೆ ನಡೆಸುವುದು ಅಪಾಯಕಾರಿ" ಎಂದು ಹೇಳಿದ್ದಲ್ಲದೇ, ತಕ್ಷಣವೇ ಜಲಕ್ರೀಡೆ ಸ್ಥಗಿತಗೊಳಿಸಬೇಕೆಂದು ತಾಕೀತು ಮಾಡಿದರು. ಸಂಸ್ಥೆಯವರು ಜಲಕ್ರೀಡೆ ಸ್ಥಗಿತಕ್ಕೆ ಒಪ್ಪದೇ ಅಧಿಕಾರಿಗಳ ಜೊತೆ ವಾಗ್ವಾದಕ್ಕಿಳಿದಿದ್ದರು. ಈ ಹಿನ್ನೆಲೆಯಲ್ಲಿ ಕಾವೇರಿ ನೀರಾವರಿ ನಿಗಮದ ಕಾರ್ಯ ನಿರ್ವಾಹಕ ಇಂಜಿನಿಯರ್ ವಾಸುದೇವ್ ಅವರು ಅರಕೆರೆ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಆಗಮಿಸಿದ ಪೊಲೀಸರು ಜಲಕ್ರೀಡೆ ಸ್ಥಗಿತಗೊಳಿಸಿದ್ದಲ್ಲದೇ, ಸಂಸ್ಥೆಯ ಸಿಬ್ಬಂದಿಯಿಂದ ಮುಚ್ಚಳಿಕೆ ಬರೆಸಿಕೊಂಡು ಕಳುಹಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಕಾವೇರಿ ನೀರಾವರಿ ನಿಗಮದ ಎಇಇ ವಾಸುದೇವ್, ಅನಧಿಕೃತವಾಗಿ ಜಲಕ್ರೀಡೆ ನಡೆಯುತ್ತಿರುವ ಬಗ್ಗೆ ಸ್ಥಳೀಯರಿಂದ ದೂರು ಬಂದಿತ್ತು. ತಕ್ಷಣ ನಾವು ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸಿ ಅಡ್ವೆಂಚರ್ ಸಂಸ್ಥೆಯವರಿಂದ ಅನುಮತಿ ಪತ್ರ ಕೇಳಿದೆವು. ಆದರೆ, ಸಂಸ್ಥೆಯ ಮುಖ್ಯಸ್ಥರು ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದೇವೆ ಎಂದು ಹೇಳಿದರೆ ಹೊರತು, ಅವರ ಬಳಿ ಅನುಮತಿ ಪತ್ರ ಇರಲಿಲ್ಲ. ಹೀಗಾಗಿ ಕೂಡಲೇ ಸ್ಥಳ ಖಾಲಿ ಮಾಡಿ ಎಂದು ನಾವು ಹೇಳಿದ್ದಲ್ಲದೇ, ಸುಪ್ರೀಂಕೋರ್ಟ್ ನಿರ್ದೇಶನದಂತೆ ಯಾವ ಸಮಯದಲ್ಲಾದರೂ ಅಣೆಕಟ್ಟೆಯಿಂದ ನದಿಗೆ ನೀರು ಬಿಡುವ ಸಾಧ್ಯತೆ ಇದೆ.

ಹೀಗಾಗಿ ಜಲಕ್ರೀಡೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ಅಪಾಯವಾಗಬಹುದು ಎಂದು ಮನವರಿಕೆ ಮಾಡಿಕೊಟ್ಟರೂ ಸಂಸ್ಥೆಯವರು ಅದನ್ನು ಲೆಕ್ಕಿಸದೆ ಜಲಕ್ರೀಡೆ ಮುಂದುವರೆಸಿದ್ದರು. ಆದ್ದರಿಂದ ನಾವು ಪೊಲೀಸರಿಗೆ ದೂರು ಸಲ್ಲಿಸಿದ್ದು, ಅವರು ಕ್ರಮ ಕೈಗೊಂಡಿದ್ದಾರೆ ಎಂದರು.

ಸೆ.19ರಂದು ಜನಸಂಪರ್ಕ ಸಭೆ

ಮಂಡ್ಯ, ಸೆ.16– ಮಂಡ್ಯ ತಾಲೂಕು ವ್ಯಾಪ್ತಿಯ ಮಂಡ್ಯ, ಕೊತ್ತತ್ತಿ ಮತ್ತು ಕೆರಗೋಡು ಉಪವಿಭಾಗ ವ್ಯಾಪ್ತಿಯ ವಿದ್ಯುತ್ ಸಮಸ್ಯೆಗಳ ಕುರಿತು ಚರ್ಚಿಸಲು ವಿದ್ಯುತ್ ಗ್ರಾಹಕರ ಕುಂದು ಕೊರತೆ ವಿಚಾರಣೆಯ ಜನಸಂಪರ್ಕ ಸಭೆ ಸೆ.19ರಂದು ಬೆಳಗ್ಗೆ 11 ಗಂಟೆಗೆ ಮಂಡ್ಯ ವಿಭಾಗದ ಆವರಣದಲ್ಲಿ ನಡೆಯಲಿದೆ. ಗ್ರಾಹಕರು ಹಾಗೂ ಸಾರ್ವಜನಿಕರು ಸಭೆಯಲ್ಲಿ ಭಾಗವಹಿಸುವಂತೆ ಪ್ರಕಟಣೆ ತಿಳಿಸಿದೆ.

ಮಣ್ಣಿನ ಗಣೇಶ ಮೂರ್ತಿ ಬಳಕೆ ಕುರಿತು ಮಕ್ಕಳಿಗೆ ಜಾಗೃತಿ

ಮೈಸೂರು, ಸೆ.16–ಮೈಸೂರಿನ ಚಾಮುಂಡಿಪುರಂನಲ್ಲಿರುವ ಬಾಲ ಬೋಧಿನಿ ಶಾಲೆಯಲ್ಲಿ ಅಪೂರ್ವ ಸ್ನೇಹ ಬಳಗದ ವತಿಯಿಂದ ಶಾಲೆಯ ಪುಟಾಣಿ ಮಕ್ಕಳಿಗೆ ಉಚಿತವಾಗಿ ಮಣ್ಣಿನ ಗೌರಿ ಗಣಪ ವಿತರಿಸಿ ಜಾಗೃತಿ ಮೂಡಿಸಲಾಯಿತು.



ಪಿಒಪಿ ಗಣಪನ ಮೂರ್ತಿ ಪರಿಸರದ ಮೇಲೆ ದುಷ್ಪರಿಣಾಮ ಬೀರಲಿದ್ದು, ಸಾರ್ವಜನಿಕರು ಪರಿಸರ ಸ್ನೇಹಿ ಮಣ್ಣಿನ ಗಣಪನನ್ನು ಬಳಸುವ ಮೂಲಕ ನಗರದ ನೀರಿನ ಮೂಲಗಳನ್ನು ಉಳಿಸಿಕೊಳ್ಳಲು ಸಹಕರಿಸಬೇಕು, ಸಾರ್ವಜನಿಕರಿಗೆ ಉಚಿತವಾಗಿ ಮಣ್ಣಿನಗಣಪತಿ ಮೂರ್ತಿ ನೀಡುವ ಮೂಲಕ ಪರಿಸರ ಜಾಗೃತಿ ಮೂಡಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಕೆಲಸ ಎಂದು ಪರಿಸರ ಪ್ರೇಮಿ ಭೈರತಿ ಲಿಂಗರಾಜು ತಿಳಿಸಿದರು.

ವಿಶ್ವ ಹಿಂದೂ ಪರಿಷತ್ ವಿಭಾಗ ಸಂಯೋಜಕಿ ಸವಿತಾ ಘಾಟ್ಕೆ ಮಾತನಾಡಿ, ಗಣಪನ ಮೂರ್ತಿಯನ್ನು ನೀರಿಗೆ ಬಿಟ್ಟಾಗ ಅದರಲ್ಲಿನ ಬಣ್ಣ ಜಲಚರಗಳ ಸಾವಿಗೆ ಕಾರಣವಾಗುತ್ತದೆ. ಹೀಗಾಗಿ ಮಣ್ಣಿನ ಗಣಪ ಬಳಸುವಂತೆ ಮನವಿ ಮಾಡಿದರು.

ವಿಶ್ವ ಹಿಂದೂ ಪರಿಷತ್ ವಿಭಾಗ ಸಂಯೋಜಕಿ ಸವಿತಾ, ಉದ್ಯಮಿ ಜಯರಾಮ್, ಪರಿಸರ ಪ್ರೇಮಿ ದೂರ ರಾಜಣ್ಣ, ಅಪೂರ್ವ ಸುರೇಶ್, ಆನಂದ್, ರವಿ, ಶಾಲೆಯ ಮುಖ್ಯ ಶಿಕ್ಷಕರಾದ ಜಯಂತಿ.ಸಿ, ಶಿಕ್ಷಕರಾದ ಲತಾ ಕುಮಾರಿ, ಮೌಸಿನ್ ತಾಜ್, ಲೀಲಾವತಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ರಘುಲಾಲ್ ಕಂಪನಿ ವತಿಯಿಂದ ಒಂಟಿಕೊಪ್ಪಲಿನಲ್ಲಿ ತರಕಾರಿ, ಹಣ್ಣು, ಹೂ ಮುಂತಾದವುಗಳನ್ನು ಮಾರಾಟ ಮಾಡಲು ಅನುಕೂಲವಾಗುವಂತೆ ಬೀದಿಬದಿ ವ್ಯಾಪಾರಿಗಳಿಗೆ ಶನಿವಾರ 17 ಸುಸಜ್ಜಿತ ಗಾಡಿಗಳನ್ನು ಗೋಕುಲಂ–ಬೃಂದಾವನ ಬಡಾವಣೆ ಕಾರ್ಪೊರೇಟರ್ ಎಸ್‌ಬಿಎಂ ಮಂಜು ಸಮ್ಮುಖದಲ್ಲಿ ವಿತರಿಸಲಾಯಿತು.

ಫಾದರ್ ಹೆಸರಲ್ಲಿ ಕ್ರಯಪತ್ರ ನೀಡದಂತೆ ಕ್ರಿಶ್ಚಿಯನ್ ಸಂಘ ಮನವಿ



ಮೈಸೂರು, ಸೆ.16– ಮೈಸೂರು ಡಿವಿಜನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ಅಧ್ಯಕ್ಷ ಜೆ ಸ್ಟೀಫನ್ ಸುಜಿತ್ ಅವರ ನೇತೃತ್ವದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ದಿನೇಶ್ ಕುಮಾರ್ ಅವರನ್ನು ಭೇಟಿ ಮಾಡಿ ಕ್ರೈಸ್ತ ಸಮುದಾಯಕ್ಕೆ ಮಂಜೂರಾಗುತ್ತಿರುವ ನಿವೇಶನಗಳನ್ನು ಕೆಥಡ್ರಲ್ ಪ್ಯಾರಿಸ್ ಸೊಸೈಟಿ ಫಾದರ್ ಹೆಸರಿನಲ್ಲಿ ಕ್ರಯ ಪತ್ರವನ್ನು ನೀಡದೆ, ನೇರವಾಗಿ ಫಲಾನುಭವಿಗಳಿಗೆ ವಿತರಿಸಬೇಕೆಂದು ಮನವಿ ನೀಡಲಾಯಿತು.

ಸಾಮಾಜಿಕ ಹೋರಾಟಗಾರ ಗಂಗರಾಜು, ಮೈಸೂರ್ ಡಿವಿಜನ್ ಕ್ಯಾಥಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ಸಂಘದ ಕಾರ್ಯದರ್ಶಿ ಅಂಬ್ರುಸ್ ಚಾರ್ಜ್, ಸಹ ಕಾರ್ಯದರ್ಶಿ ಮರಿಯಾ ಫ್ರಾನ್ಸಿಸ್, ಖಜಾಂಚಿ ಜಾನ್ಸನ್ ಬೆನ್ನಿ, ಮರಿ ಜೋಸೆಫ್, ಸವರಿದಾಸ್ ಡಾಮಿನಿಕ್, ಚಿನ್ನಪ್ಪ, ಸಂತೋಷ್ ಹಾಗೂ ಸಮುದಾಯದ ಅನೇಕರು ಉಪಸ್ಥಿತರಿದ್ದರು.

ಇಂದು ಫೈಬ್ರೋಸ್ಕ್ಯಾನ್ ತಪಾಸಣಾ ಶಿಬಿರದ ಉದ್ಘಾಟನಾ ಸಮಾರಂಭ

ಮೈಸೂರು, ಸೆ.16– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ನಾಳೆ (ಸೆ.17) ಬೆಳಗ್ಗೆ 10 ಗಂಟೆಗೆ ಲಿವರ್ ಕಾಯಿಲೆಯನ್ನು ಪತ್ತೆ ಹಚ್ಚುವ ಆಧುನಿಕ ತಂತ್ರಜ್ಞಾನ ಹೊಂದಿರುವ ಫೈಬ್ರೋಸ್ಕ್ಯಾನ್ ತಪಾಸಣಾ ಶಿಬಿರದ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಮುಕ್ತಿದಾನಂದಜಿ ಮಹಾರಾಜ್ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸುಯೋಗ್ ಆಸ್ಪತ್ರೆಯ ಗ್ಯಾಸ್ಟ್ರಿಕ್ ಸರ್ಜನ್ ಡಾ. ಶರತ್‌ಕುಮಾರ್ ಭಾಗವಹಿಸಲಿದ್ದಾರೆ.

ಮದ್ಯಪಾನಿಗಳು ಹಾಗೂ ಸಕ್ಕರೆ ಕಾಯಿಲೆ ಇರುವವರು ಈಲಿ (ಲಿವರ್) ಕಾಯಿಲೆಯನ್ನು ಪ್ರಾಥಮಿಕ ಹಂತದಲ್ಲಿಯೇ ಗುರುತಿಸಬಹುದಾದ ಈ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದಾಗಿದೆ.



ಶುಕ್ರವಾರದಂದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಮೈಸೂರು ಗ್ರಾಮಾಂತರ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವತಿಯಿಂದ ಮುಖಂಡರಾದ ಕೆ.ಮರಿಗೌಡರ ನೇತೃತ್ವದಲ್ಲಿ ಸಂವಿಧಾನದ ಪೀಠಿಕೆಯನ್ನು ಓದುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಬ್ಲಾಕ್ ಅಧ್ಯಕ್ಷರಾದ ಜೆ.ಸತೀಶ್ ಕುಮಾರ್, ಸಾಮಾಜಿಕ ಜಾಲತಾಣದ ಅಧ್ಯಕ್ಷರಾದ ಹೇಮಂತ್ ಕುಮಾರ್, 58ನೇ ವಾರ್ಡಿನ ರವಿ, ಧನಗಳ್ಳಿ ಬಸವರಾಜು, ಕೆಂಪರಾಜು, ಮಾಧು, ಶ್ರೀಕಾಂತ್, ಕೇರ್ಗಳ್ಳಿ ಬಸವೇಗೌಡರು, ಹುಚ್ಚಪ್ಪ, ಮಹದೇವಸ್ವಾಮಿ, ಮಹದೇವ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

ನಾಗರಹಾವಿನ ಮೇಲೆ ಡೀಸೆಲ್ ಎರಚಿದವನಿಗೆ ಮೈ ಉರಿ..!

ಮೂಲ್ಕಿ ಸೆ16– ನಾಗರಹಾವಿಗೆ ಡೀಸೆಲ್ ಎರಚಿದಾತ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾದ ಘಟನೆ ಕಿನ್ನಿಗೋಳಿಯಲ್ಲಿ ನಡೆದಿದೆ. ಬಹುಮಹಡಿ ಕಟ್ಟಡದ ಸಮೀಪ ಕಳೆದ ವಾರ ನಾಗರಹಾವೊಂದು ಕಂಡು ಬಂದಿದ್ದು, ಇದನ್ನು ಕಂಡ ಕಟ್ಟಡದ ಕಾವಲುಗಾರ ನಾಗರಹಾವಿನ ಮೇಲೆ ಡೀಸೆಲ್ ಎರಚಿದ. ಬಳಿಕ ಮೈ ಉರಿಯಿಂದ ನಾಗರಹಾವು ಒದ್ದಾಡತೊಡಗಿದಾಗ, ಸ್ಥಳೀಯರು ಇದನ್ನು ಕಂಡು ಉರಗ ರಕ್ಷಕ ಯತೀಶ್ ಕಟೀಲು ಅವರಿಗೆ ತಿಳಿಸಿದರು.

ಯತೀಶ್ ಕಟೀಲು ಅವರು ಸ್ಥಳಕ್ಕೆ ಆಗಮಿಸಿ ಶ್ಯಾಂಪು ಮೂಲಕ ಅದನ್ನು ತೊಳೆದು ಸಹಜ ಸ್ಥಿತಿಗೆ ಬಂದ ನಂತರ ಕಾಡಿಗೆ ಬಿಟ್ಟಿದ್ದಾರೆ, ಒಂದು ವಾರ ಕಳೆಯುವಷ್ಟರಲ್ಲಿ ಡೀಸೆಲ್ ಎರಚಿದ ಕಾರ್ಮಿಕ ಕೂಡ ನಾಗರಹಾವಿನಂತೆ ಮೈ ಉರಿಯಿಂದ ಬಳಲಲು ಪ್ರಾರಂಭಿಸಿದ್ದು, ಆತನ ಸಂಬಂಧಿಕರು ಕಾವಲುಗಾರನ ಊರು ಉತ್ತರ ಕರ್ನಾಟಕಕ್ಕೆ ಕರೆದೊಯ್ದಿದ್ದು, ಇದೀಗ ಅಸ್ಪತ್ರೆಯಲ್ಲಿ ದಾಖಲಾಗಿದ್ದಾನೆ ಎಂದು ಉರಗ ರಕ್ಷಕ ಯತೀಶ್ ಕಟೀಲು ತಿಳಿಸಿದ್ದಾರೆ.

ಶಾಂತಿ ಸೌಹಾರ್ದತೆಯಿಂದ ಗೌರಿ–ಗಣೇಶ, ಈದ್ ಮಿಲಾದ್ ಆಚರಿಸಲು ರಫತ್‌ಖಾನ್ ಮನವಿ

ಮೈಸೂರು, ಸೆ.16– ಹಿಂದೂ–ಮುಸಲ್ಮಾನರು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸುವ ಗೌರಿ–ಗಣೇಶ ಮತ್ತು ಈದ್‌ಮಿಲಾದ್ ಹಬ್ಬಗಳು ಒಂದೇ ಮಾಸದಲ್ಲಿ ಬಂದಿರುವುದರಿಂದ ಎಲ್ಲರೂ ಶಾಂತಿ ಸೌಹಾರ್ದತೆಯಿಂದ ತಮ್ಮ ತಮ್ಮ ಹಬ್ಬಗಳನ್ನು ಆಚರಣೆ ಮಾಡಬೇಕೆಂದು ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್‌ಖಾನ್ ಕರೆ ನೀಡಿದ್ದಾರೆ.



ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಗೌರಿ ಗಣೇಶ ಮತ್ತು ಈದ್‌ಮಿಲಾದ್ ಹಬ್ಬಗಳು ಒಂದೇ ಮಾಸದಲ್ಲಿ ಬರುವುದರ ಮೂಲಕ ಎರಡೂ ಸಮುದಾಯಗಳನ್ನು ಒಗ್ಗೂಡಿಸುವ ದೃಷ್ಟಿಯಿಂದ ಪ್ರಕೃತಿಯೇ ನಮಗೆ ಇಂತಹ ಸುವರ್ಣ ಅವಕಾಶ ನೀಡಿದೆ. ಇದನ್ನು ನಾವು ಸದ್ಬಳಕೆ ಮಾಡಿಕೊಂಡು ಜಗತ್ತಿಗೆ ಸೌಹಾರ್ದತೆಯ ಉತ್ತಮ ಸಂದೇಶ ನೀಡಬೇಕಿದೆ. ಈ ಅವಕಾಶವನ್ನು ನಾವು ಅತ್ಯಂತ ಉಪಯುಕ್ತವಾಗಿ ಬಳಸಿಕೊಂಡು ಪರಸ್ಪರ ಧರ್ಮಗಳ ಆಚರಣೆಗಳನ್ನು ಗೌರವಿಸೋಣ. ಯಾವುದೇ ಕಾರಣಕ್ಕೂ ಅಶಾಂತಿ ಸೃಷ್ಟಿಗೆ ಅವಕಾಶ ನೀಡಬಾರದು ಎಂದು ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಈ ನಿಟ್ಟಿನಲ್ಲಿ ಪೊಲೀಸರೂ ಸಹ ನಿಯಮಾನುಸಾರ ಸೂಕ್ತ ಕ್ರಮಕ್ಕೆ ಮುಂದಾಗಬೇಕು. ಕೆಲವು ಕಿಡಿಗೇಡಿಗಳು ಶಾಂತಿ ಕದಡುವ ದೃಷ್ಟಿಯಿಂದ ಪ್ರಚೋದನಕಾರಿ ಹೇಳಿಕೆ ನೀಡುವುದು, ಅಸಭ್ಯವಾಗಿ ವರ್ತಿಸುವುದನ್ನು ಮಾಡುತ್ತಾರೆ. ಪೊಲೀಸರು ಇದಕ್ಕೆ ಆಸ್ಪದ ನೀಡಬಾರದು. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ವದಂತಿಗಳನ್ನು ಹರಿಬಿಟ್ಟರೆ ಅಂತಹವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಅವರು ಒತ್ತಾಯಿಸಿದರು.

ನಗರ ಮತ್ತು ಜಿಲ್ಲಾದ್ಯಂತ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಸಾಧ್ಯವಾದಷ್ಟು ಶಾಂತಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಗೆ ತಿಳಿವಳಿಕೆ ನೀಡುವುದು. ಪರಸ್ಪರ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ ಶಾಂತಿಯುತವಾಗಿ ಆಚರಣೆಗಳನ್ನು ನಡೆಸುವಂತೆ ಸಲಹೆ ನೀಡಬೇಕೆಂದು ಕೋರಿದ್ದಾರೆ.

ಪಾಕಿಸ್ತಾನದಲ್ಲಿ ಪೆಟ್ರೋಲ್–ಡೀಸೆಲ್ ದಾಖಲೆ ಮಟ್ಟಕ್ಕೆ ಏರಿಕೆ!

ಇಸ್ಲಾಮಾಬಾದ್, ಸೆ.16– ಪಾಕಿಸ್ತಾನದ ಉಸ್ತುವಾರಿ ಸರ್ಕಾರ ಮತ್ತೊಮ್ಮೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಏರಿಸಿದೆ. ಈ ಹೆಚ್ಚಳದೊಂದಿಗೆ ಬೆಲೆಗಳು ಹೊಸ ದಾಖಲೆಯ ಮಟ್ಟವನ್ನು ತಲುಪಿವೆ.

ತೀವ್ರ ನಗದು ಕೊರತೆ ಎದುರಿಸುತ್ತಿರುವ ನೆರೆಯ ರಾಷ್ಟ್ರ ಪಾಕಿಸ್ತಾನದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಲೀಟರ್‌ಗೆ ಸುಮಾರು 330 ರೂ.ಗೆ ಏರಿದೆ. ಇಲ್ಲಿನ ಹಣದುಬ್ಬರ ದರ ಈಗಾಗಲೇ ಎರಡಂಕಿಗೆ ತಲುಪಿದೆ. ನಿಯೋಜಿತ ಪ್ರಧಾನಿ ಅನ್ವಾರುಲ್ ಹಕ್ ಕಾಕರ್ ಅವರ ಒಪ್ಪಿಗೆ ಪಡೆದ ನಂತರ, ಹಣಕಾಸು ಸಚಿವಾಲಯ ಶುಕ್ರವಾರ ರಾತ್ರಿ ಪೆಟ್ರೋಲ್ ಬೆಲೆಯನ್ನು 26.02 ರೂಪಾಯಿ ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ 17.34 ರೂಪಾಯಿ ಹೆಚ್ಚಿಸಿ ಆದೇಶ ಹೊರಡಿಸಿದೆ. ಇದರ ನಂತರ, ಪೆಟ್ರೋಲ್ ಮತ್ತು 'ಹೈ–ಸ್ಪೀಡ್' ಡೀಸೆಲ್ (ಎಚ್‌ಎಸ್‌ಡಿ) ಬೆಲೆಗಳು ಲೀಟರ್‌ಗೆ 330 ರೂ.ಗಿಂತ ಹೆಚ್ಚಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಲೀಟರ್‌ಗೆ 330 ರೂ.ಗೆ ತಲುಪಿದೆ.

ಆಗಸ್ಟ್‌ನಲ್ಲಿ ಹಣದುಬ್ಬರವು ಶೇ.27.4ಕ್ಕಿಂತ ಹೆಚ್ಚು ಏರಿಕೆಯಾದ ನಂತರ ಇಂಧನ ಬೆಲೆಯಲ್ಲಿ ಹೆಚ್ಚಳವಾಗಿದೆ. ಈ ಹಿಂದೆ ಸೆಪ್ಟೆಂಬರ್ 1ರಂದು ಸಹ ಉಸ್ತುವಾರಿ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ 14 ರೂ. ಏರಿಸಿತ್ತು.



ಬೋಗಾದಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಕೆ.ಹೆಮ್ಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು 4 ಪ್ರಥಮ ಸ್ಥಾನ, 2 ದ್ವಿತೀಯ ಮತ್ತು 3 ತೃತೀಯ ಸ್ಥಾನ ಪಡೆದರು. ಮುಖ್ಯಶಿಕ್ಷಕಿ ಸುಮಂಗಲ ಶಿಕ್ಷಕರುಗಳಾದ ವಚನ ಕುಮಾರಸ್ವಾಮಿ, ತಾರಾ, ಕಲ್ಪನಾಬಾಯಿ ಮತ್ತು ನಾಗಮಣಿ ಉಪಸ್ಥಿತರಿದ್ದರು.

ಸೆಲಬರೇಟಿಂಗ್ ದ ಆರ್ಟ್ಸ್ ಕೃತಿ ಬಿಡುಗಡೆ



ಮೈಸೂರು, ಸೆ.16(ಎಸ್‌ಪಿಎನ್)– ಬೆಂಗಳೂರಿನ ಇಂಟರ್ ನ್ಯಾಷನಲ್ ಮ್ಯೂಸಿಕ್ ಅಂಡ್ ಆರ್ಟ್ಸ್ ಸೊಸೈಟಿ ಸ್ಥಾಪನೆಯಾಗಿ 40 ವರ್ಷ ಪೂರೈಕೆ ಹಾಗೂ ಸೊಸೈಟಿ ಸಂಸ್ಥಾಪಕಿ ರಾಣಿ ವಿಜಯಲಕ್ಷ್ಮೀ ಅಮ್ಮಣ್ಣಿ ದೇವಿ ಅವರ ಜನ್ಮ ದಿನಚರಣೆ ಪ್ರಯುಕ್ತ 'ಸೆಲಬರೇಟಿಂಗ್ ದ ಆರ್ಟ್ಸ್' ಪುಸ್ತಕವನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಶನಿವಾರ ಬಿಡುಗಡೆಗೊಳಿಸಿದರು.

ಮೈಸೂರು ಜಗನ್ಮೋಹನ ಅರಮನೆಯಲ್ಲಿ ರಾಜವಂಶಸ್ಥ ಶ್ರೀ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿ, ಮಾತನಾಡಿದ ಅವರು, ರಾಣಿ ವಿಜಯಲಕ್ಷ್ಮೀ ದೇವಿ ಅವರು, ಕಂಠೀರವ ನರಸಿಂಹರಾಜ ಒಡೆಯರ್ ಅವರ ಹಿರಿಯ ಮಗಳು ಹಾಗೂ ಜಯ ಚಾಮರಾಜ ಒಡೆಯರ್ ಅವರ ಸಹೋದರಿ. ಇವರು ತಮ್ಮ ಜೀವಿತಾವಧಿಯಲ್ಲಿ ವಿವಿಧ ಕಲೆ ಕಲಿಕೆಗೆ ಆದ್ಯತೆ ನೀಡಿದ್ದರು.

ವಿಜಯಾಲಕ್ಷ್ಮೀದೇವಿ ಅವರು, ಕಲೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಇವರು, ವಿವಿಧ ಮ್ಯೂಸಿಕ್ ಸಿಸ್ಟಂಗಳನ್ನು ನುಡಿಸುವುದನ್ನು ಕಲಿತರು. ಮೊದಲಿಗೆ ಗುಡ್ ಶೆಫರ್ಡ್ ಕಾನ್ವೆಂಟ್‌ನ ಸನ್ಯಾಸಿನಿಯರಿಂದ ಪಿಯಾನೋ ನುಡಿಸುವುದನ್ನು ಕಲಿತರು. ಅಲ್ಲದೆ ಖ್ಯಾತ ವೀಣಾ ವಾದಕಿ ವೀಣಾ ಅವರಿಂದ ವೀಣಾವಾದನವನ್ನು ಕಲಿತಿರುವ ಬಗ್ಗೆ ಈ ಪುಸ್ತಕದಲ್ಲಿ ಉಲ್ಲೇಖವಾಗಿದೆ ಎಂದರು.

ವಿಜಯಲಕ್ಷ್ಮೀದೇವಿ ಅವರು, 1947ರಲ್ಲಿ ಭಾರತೀಯ ವಿದೇಶಾಂಗ ಸೇವೆಗೆ ಸೇರಿದ ತಮ್ಮ ಪತಿಯೊಂದಿಗೆ ನ್ಯೂಯಾರ್ಕ್‌ಗೆ ತೆರಳಿದರು. ಅಲ್ಲಿನ ಜೂಲಿಯಾರ್ಡ್ ಸ್ಕೂಲ್ ಆಫ್ ಮ್ಯೂಸಿಕ್‌ನಲ್ಲಿ ಅಧ್ಯಯನ ನಡೆಸಿ, ಕಲೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಪ್ರಸಂಗವನ್ನು ವಿವರಿಸಿದರು. ನಂತರ ವಿದೇಶದಿಂದ ಭಾರತಕ್ಕೆ ಹಿಂತಿರುಗಿ ಬಂದಾಗ ಬೆಂಗಳೂರಿನಲ್ಲಿ ನೆಲೆಸಿ ಇಂಟರ್ ನ್ಯಾಷನಲ್ ಮ್ಯೂಸಿಕ್ ಮತ್ತು ಆರ್ಟ್ಸ್ ಸೊಸೈಟಿಯನ್ನು ಸ್ಥಾಪಿಸಿ, ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿ, ಹಲವು ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಿದ್ದ ಕೀರ್ತಿ ವಿಜಯಲಕ್ಷ್ಮೀದೇವಿ ಅವರಿಗೆ ಸಲ್ಲುತ್ತದೆ. ಸೊಸೈಟಿ ಸ್ಥಾಪನೆ ಸಂದರ್ಭದಲ್ಲಿ ಹಿರಿಯ ಕಲಾವಿದರಾದ ರುಕ್ಮಿಣಿ ದೇವಿ ಅರುಂಡೇಲ್, ಮಾಜಿ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಮತ್ತು ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪೋಷಕರಾಗಿ ಸೊಸೈಟಿಯ ಘನತೆ ಹೆಚ್ಚಿಸಿದ್ದರು.

ವೇದಿಕೆ ಕಾರ್ಯಕ್ರಮದ ನಂತರ ಅರಮನೆ ಪೊಲೀಸ್ ಬ್ಯಾಂಡ್ ಸದಸ್ಯರಿಂದ ಕಾಯೋ ಶ್ರೀ ಗೌರಿ ಸೇರಿದಂತೆ ಶಾಸ್ತ್ರೀಯ ಸಂಗೀತವನ್ನು ನುಡಿಸಿ, ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ವೇದಿಕೆಯಲ್ಲಿ ಇಂಟರ್ ನ್ಯಾಷನಲ್ ಮ್ಯೂಸಿಕ್ ಅಂಡ್ ಆರ್ಟ್ಸ್ ಸೊಸೈಟಿಯ ಸಲಹಾ ಸಮಿತಿ ಸದಸ್ಯರಾದ ಊರ್ಮಿಳಾ ದೇವಿ, ಇಂದಿರಾ ಬ್ರೂನ್ನರ್ ಚಂದ್ರಶೇಖರ್, ಪ್ರತೀತಿ ಪುಂಜಾ ಬಲ್ಲಾಳ್ ಉಪಸ್ಥಿತರಿದ್ದರು.

ದೇಶದಲ್ಲಿ ಕಾನೂನು ಅರಿವಿನ ವ್ಯಾಪಕ ಚಳುವಳಿಯಾಗಬೇಕು

● ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ● ಶಾಸಕರೂ ಆದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣರಿಗೆ ಅಭಿನಂದನೆ

ಮೈಸೂರು,ಸೆ.16(ಪಿಎಂ)– ಕಾನೂನು ಅರಿವು ಪ್ರತಿಯೊಬ್ಬ ಪ್ರಜೆಗೆ ಅತ್ಯಂತ ಮುಖ್ಯ. ಹಾಗಾಗಿ ದೇಶದಲ್ಲಿಂದು ಇದರ ಅರಿವು ಅತ್ಯಂತ ಅಗತ್ಯವಾಗಿದ್ದು, ಕಾಂಗ್ರೆಸ್ ಕಾನೂನು ಘಟಕ ಕಾನೂನು ಅರಿವು ಮೂಡಿಸುವ ಚಳುವಳಿ ಮಾಡಬೇಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾನೂನು ಘಟಕದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ವಿರಾಜಪೇಟೆ ಕ್ಷೇತ್ರದ ಶಾಸಕರೂ ಆದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ಕೆಪಿಸಿಸಿ ಕಾನೂನು, ಮಾನವ ಹಕ್ಕುಗಳ ಮಾಹಿತಿ ಹಕ್ಕು ವಿಭಾಗದ ಅಧ್ಯಕ್ಷ ಎ.ಎಸ್.ಪೊನ್ನಣ್ಣ ಅವರಿಗೆ ಅಭಿನಂದನಾ ಸಮಾರಂಭ ಹಾಗೂ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ತಿಮ್ಮಯ್ಯ ಸೇರಿದಂತೆ ಇನ್ನಿತರ ವಕೀಲರ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಸಂವಿಧಾನ ಪೀಠಿಕೆಯ ಫಲಕಗಳನ್ನು ಪ್ರದರ್ಶಿಸುವ ಮೂಲಕ ಉದ್ಘಾಟಿಸಿ, ಮಾತನಾಡಿದರು.

ಕಾನೂನಿನ ಅರಿವು ನಮಗೆ ಇಲ್ಲವಾದರೆ ಕತ್ತಲೆಯ ಸಮಾಜದಲ್ಲಿ ಬದುಕಬೇಕಾಗುತ್ತದೆ. ಕಾನೂನಿನ ಅರಿವು ಸಮಾಜದ ಆರೋಗ್ಯಕ್ಕೆ ಬಹಳ ಮುಖ್ಯ. ವಕೀಲರು ತಾವು ವಹಿಸಿಕೊಂಡ ಪ್ರಕರಣಗಳ ಪರವಾಗಿ ವಾದ ಮಾಡುವುದು ಅವರ ವೃತ್ತಿ ನೈತಿಕತೆ. ಆದರೆ ಸಂವಿಧಾನದ ಉಲ್ಲಂಘನೆಯಾದಾಗ ವಕೀಲರ ಕಾನೂನು ಜ್ಞಾನ ಪ್ರಜ್ವಲಿಸಬೇಕು. ಇದರಿಂದ ವಕೀಲರ ವ್ಯಕ್ತಿತ್ವ ಉನ್ನತ ಮಟ್ಟಕ್ಕೇರಲಿದೆ. ವಕೀಲರು ಎಂದರೆ ಬೌದ್ಧಿಕ ತಂಡ. ನಮಗೆ ಕಾನೂನಿನ ಅನೇಕ ವಿಷಯಗಳು ಗೊತ್ತಿಲ್ಲ ಅದನ್ನು ಗೊತ್ತುಪಡಿಸುವ ವಕೀಲರಿಗೆ ವಿಶೇಷ ಸ್ಥಾನವಿದೆ ಎಂದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರೂ ಆದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾನೂನು ಘಟಕದ ನೂತನ ಅಧ್ಯಕ್ಷ ತಿಮ್ಮಯ್ಯ ಅವರನ್ನು ಸನ್ಮಾನಿಸಲಾಯಿತು.

ನಮ್ಮ ಸರ್ಕಾರಕ್ಕೆ ಎ.ಎಸ್.ಪೊನ್ನಣ್ಣನವರನ್ನು ಕಾನೂನು ಸಲಹೆಗಾರರನ್ನಾಗಿ ನೇಮಕ ಮಾಡಿದ್ದು, ಸರ್ಕಾರದ ನೀತಿ–ನಿರ್ಧಾರಗಳು, ಕಾನೂನಾತ್ಮಕ ನಿಲುವುಗಳು ಕಾನೂನು ವ್ಯಾಪ್ತಿ ಮತ್ತು ಸಂವಿಧಾನದ ಚೌಕಟ್ಟಿನಲ್ಲಿ ಇದೆಯೇ ಎಂಬುದರ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಡುವ ಮಹತ್ವ ಜವಾಬ್ದಾರಿಯನ್ನು ಅವರು ಹೊಂದಿದ್ದಾರೆ ಎಂದು ಹೇಳಿದರು.

ಸಂವಿಧಾನದ ಬಗ್ಗೆ ತಿಳಿಸುವುದು ವಕೀಲರ ಜವಾಬ್ದಾರಿ ಮತ್ತು ಕರ್ತವ್ಯ. ರಾಜ್ಯ ವಕೀಲರ ಸಮಾವೇಶದಲ್ಲಿ 'ವಕೀಲರ ರಕ್ಷಣೆಗೆ ಕಾಯ್ದೆ ಜಾರಿಗೊಳಿಸವಬೇಕೆಂದು ಸರ್ಕಾರಕ್ಕೆ ಬೇಡಿಕೆಯಿಡಲಾಯಿತು. ವಕೀಲರ ಪರಿಸ್ಥಿತಿಯೇ ಹೀಗಾದರೆ ಅಸ್ಪೃಶ್ಯತೆ ನೋವು ಅನುಭವಿಸಿರುವ ಸಮುದಾಯಗಳು, ಮಹಿಳೆಯರು, ಅಲ್ಪಸಂಖ್ಯಾತರ ಪರಿಸ್ಥಿತಿ ಏನು ಎಂದು ಆತಂಕ ವ್ಯಕ್ತಪಡಿಸಿದರು.

ಎನ್‌ಇಪಿ ವಿರುದ್ಧ ಕಿಡಿ: ಗಣತಂತ್ರ ಅಂದರೆ ಜನರ ರಾಜ್ಯ. ಕೇಂದ್ರ ಸರ್ಕಾರವು ಎಲ್ಲಾ ರಾಜ್ಯ ಸರ್ಕಾರಗಳ ಒಕ್ಕೂಟವಾಗಿದ್ದು, ರಾಜ್ಯಗಳಿಗೆ ಸ್ವಾಯತತ್ತೆ ಇದೆ. ಜನತೆಗೆ ಇದನ್ನು ಅರ್ಥೈಸುವಲ್ಲಿ ವಿಫಲರಾಗಿದ್ದೇವೆ. ಇಂದಿರಾ ಗಾಂಧಿಯವರು 1964ರಲ್ಲಿ ಮೊದಲ ಶಿಕ್ಷಣ ನೀತಿ ಜಾರಿಗೆ ತಂದರು. ಇದರಿಂದ ಸಾಕ್ಷರತೆಯ ಪ್ರಮಾಣ ಹೆಚ್ಚಾಯಿತು. ರಾಜೀವ್‌ಗಾಂಧಿಯವರು 1984ರಲ್ಲಿ ಜಾರಿಗೆ ತಂದ ಶಿಕ್ಷಣ ನೀತಿಯಿಂದ ಈ ಪ್ರಮಾಣ ಶೇ.75ರಷ್ಟಕ್ಕೆ ಏರಿಕೆ ಕಂಡಿತು. ಆದರೆ ಈಗ ಜಾರಿಗೊಂಡಿರುವ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಇಡೀ ಶಿಕ್ಷಣ ವ್ಯವಸ್ಥೆಯನ್ನು ಮನುವಾದದತ್ತ ಕೊಂಡೊಯ್ಯಲಿದೆ. ಲಾರ್ಡ್ ಮೇಕಾಲೆ ಎಲ್ಲರಿಗೂ ಶಿಕ್ಷಣ ಕೊಡಲು ಬಂದಾಗ, 'ಗೋ ಬ್ಯಾಕ್ ಮೇಕಾಲೆ' ಅಂದವರು ಇದನ್ನು ಮಾಡುತ್ತಿದ್ದಾರೆ ಎಂದು ದೂರಿದರು.

ಯಾವುದೇ ಕಾನೂನು ಮಾಡುವಾಗ ಜನಸಮುದಾಯಗಳ ಅಭಿಪ್ರಾಯ ಪಡೆದು, ಸಂಸತ್ ಎಂಬ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಚರ್ಚೆಯಾಗಬೇಕು. ಆದರೆ ಈಗ ಅದಾಗುತ್ತಿಲ್ಲ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಸೆ.15ರಂದು ಆಯೋಜಿಸಿದ್ದ ಭಾರತ ಸಂವಿಧಾನ ಪೀಠಿಕೆಯ ಜಾಗತಿಕ ವಾಚನ ಕಾರ್ಯಕ್ರಮವು ದೇಶದ ಎರಡನೇ ಸ್ವಾತಂತ್ರ್ಯ ಸಂಗ್ರಾಮ ಮುನ್ನುಡಿ ಇದ್ದಂತೆ ಎಂದರು. ಇದಕ್ಕೂ ಮುನ್ನ ಶಾಸಕರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು, ಕೆಪಿಸಿಸಿ ಕಾನೂನು ವಿಭಾಗದ ಅಧ್ಯಕ್ಷರಾದ ಹಿನ್ನೆಲೆಯಲ್ಲಿ ಎ.ಎಸ್.ಪೊನ್ನಣ್ಣ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಭಾರತ ಸಂವಿಧಾನ ಪೀಠಿಕೆಯ ಜಾಗತಿಕ ವಾಚನ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾನೂನು ಘಟಕದ ನೂತನ ಅಧ್ಯಕ್ಷ ತಿಮ್ಮಯ್ಯ ಹಾಗೂ 9 ವರ್ಷಗಳಿಂದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಕೆಗಾಗಿ ಡಾ.ಬಿ.ಜೆ.ವಿಜಯ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಕಾನೂನು ಘಟಕದ ನೂತನ ರಾಜ್ಯ ಪದಾಧಿಕಾರಿಗಳಾಗಿ ಸುರೇಶ್‌ಪಾಳ್ಯ, ಎ.ಆರ್.ಕಾಂತರಾಜ್, ಹೆಚ್.ಎಸ್.ಪುಟ್ಟರಸ (ಪ್ರೇಮ್), ಕೆ.ಗಂಗಾಧರ್, ಟಿ.ಮಂಜುನಾಥ್ ಅಧಿಕಾರ ಸ್ವೀಕರಿಸಿದರು. ಶಾಸಕ ಡಿ.ರವಿಶಂಕರ್, ಎಂಎಲ್‌ಸಿಗಳಾದ ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಮಾಜಿ ಎಂಎಲ್‌ಸಿ ಧರ್ಮಸೇನಾ, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ವಕೀಲರಾದ ಸಿ.ಎಂ.ಜಗದೀಶ್, ಎಂ.ಮಹದೇವಸ್ವಾಮಿ, ಸಿ.ಬಸವರಾಜು, ರಾಮಕೃಷ್ಣ, ಮಂಜುಳಾ ಮಾನಸ, ತಿಮ್ಮಚಾರಿ, ಪ್ರೊ.ಶಿವಕುಮಾರ್ ಮತ್ತಿತರರು ಹಾಜರಿದ್ದರು.

▶ ಸಂವಿಧಾನ ಪೀಠಿಕೆ ಓದುವ ಜೊತೆಗೆ ಸರಿಯಾಗಿ ಅರ್ಥೈಸಿಕೊಳ್ಳಬೇಕು. ಸೆ.15ರಂದು 2 ಕೋಟಿಗೂ ಅಧಿಕ ಜನ ಸಂವಿಧಾನ ಪೀಠಿಕೆ ವಾಚಿಸಿರುವುದು ವಿಶ್ವ ದಾಖಲೆಯಾಗಿದೆ. ಈ ಕಾರ್ಯಕ್ರಮದ ರೂವಾರಿ ಡಾ.ಹೆಚ್.ಸಿ.ಮಹದೇವಪ್ಪರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಕಾಂಗ್ರೆಸ್ ಪಕ್ಷ ಸಂಘಟನೆಗೆ ನಮ್ಮ ವಕೀಲರ ಮೇಲೆಯೂ ದೊಡ್ಡ ಜವಾಬ್ದಾರಿ ಇದೆ. –ಎ.ಎಸ್.ಪೊನ್ನಣ್ಣ

ಸಂಸತ್ ವಿಶೇಷ ಅಧಿವೇಶನ ಹಿನ್ನೆಲೆ; ಇಂದು ಸಂಜೆ ಸರ್ವಪಕ್ಷ ಸಭೆ

ನವದೆಹಲಿ: ಸೋಮವಾರದಿಂದ ಐದು ದಿನಗಳ ಕಾಲ ಕೇಂದ್ರ ಸರ್ಕಾರ ಕರೆದಿರುವ ಸಂಸತ್ ವಿಶೇಷ ಅಧಿವೇಶನ ತೀವ್ರ ಕುತೂಹಲ ಕೆರಳಿಸಿರುವಂತೆಯೇ, ಎಲ್ಲಾ ಪಕ್ಷಗಳಿಂದ ಅಭಿಪ್ರಾಯ, ಸಲಹೆಗಳನ್ನು ಪಡೆಯಲು ಭಾನುವಾರ ಸಂಜೆ ಸರ್ವ ಪಕ್ಷ ನಾಯಕರೊಂದಿಗೆ ಸಭೆಯನ್ನು ಆಯೋಜಿಸಲಾಗಿದೆ.

'ಸಂವಿಧಾನ ಸಭೆ'ಯಿಂದ ಆರಂಭಿಸಿ ಸಂಸತ್ತಿನ 75 ವರ್ಷಗಳ ಪಯಣ ಕುರಿತ ವಿಶೇಷ ಚರ್ಚೆಯೇ ಸರ್ಕಾರ ಪಟ್ಟಿ ಮಾಡಲಾದ ಪ್ರಮುಖ ಅಜೆಂಡಾವಾದರೂ ಸಾಮಾನ್ಯವಾಗಿ ಅಧಿವೇಶನ ಇಲ್ಲದೆ ಬೇರೆ ಸಂದರ್ಭದಲ್ಲಿ ನಡೆಯುತ್ತಿರುವ ವಿಶೇಷ ಅಧಿವೇಶನ ಅಚ್ಚರಿಗೆ ಕಾರಣವಾಗಿದೆ.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ ನೇಮಕದ ಮಸೂದೆ ಮೇಲಿನ ಚರ್ಚೆಯನ್ನು ಸರ್ಕಾರ ಕಾರ್ಯಸೂಚಿಯಲ್ಲಿ ಸೇರಿಸಿದೆ. ಕಳೆದ ಮುಂಗಾರು ಅಧಿವೇಶನದಲ್ಲಿ ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಲಾಗಿತ್ತು. ಪಟ್ಟಿ ಮಾಡಲಾದ ಕಾರ್ಯಸೂಚಿಯ ಭಾಗವಾಗಿರದ ಕೆಲವು ಹೊಸ ಶಾಸನಗಳು ಅಥವಾ ಇತರ ವಿಷಯಗಳನ್ನು ಸಂಸತ್ತಿನಲ್ಲಿ ಮಂಡಿಸುವ ವಿಶೇಷ ಅಧಿಕಾರವನ್ನು ಸರ್ಕಾರ ಹೊಂದಿದೆ.

ಯಾವುದೇ ಸಂಭಾವ್ಯ ಹೊಸ ಶಾಸನದ ಬಗ್ಗೆ ಅಧಿಕೃತ ಹೇಳಿಕೆ ಹೊರಬೀಳದಿದ್ದರೂ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಂತಹ ಚುನಾಯಿತ ಶಾಸಕಾಂಗಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆ ಕುರಿತು ಕೆಲವು ಚರ್ಚೆಗಳು ನಡೆದಿವೆ. ಮೇ 28ರಂದು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದ ಹೊಸ ಕಟ್ಟಡಕ್ಕೆ ಸಂಸತ್ತು ಸ್ಥಳಾಂತರಗೊಳ್ಳುವ ಸಾಧ್ಯತೆಯು ಹೆಚ್ಚಾಗಿದ್ದು, ಸಂಸತ್ ವಿಶೇಷ ಅಧಿವೇಶನ ಕುರಿತ ನಿರೀಕ್ಷೆಯನ್ನು ಹೆಚ್ಚಿಸಿದೆ.

ಸಂಸತ್ತಿನ ವಿವಿಧ ಇಲಾಖೆಯ ಸಿಬ್ಬಂದಿಗೆ ಸಿಬ್ಬಂದಿಗೆ ಹೊಸ ಡ್ರೆಸ್ ಕೋಡ್‌ಗೆ ಸರ್ಕಾರ ಈಗಾಗಲೇ ಗ್ರೀನ್ ಸಿಗ್ನಲ್ ನೀಡಿರುವಂತೆಯೇ, ಸಂಸತ್ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಳ್ಳುವ ಸಾಧ್ಯತೆಯೂ ಹೆಚ್ಚಾಗಿದೆ.

ಜಿ–20 ಶೃಂಗಸಭೆಯನ್ನು ಭಾರತ ಯಶಸ್ವಿಯಾಗಿ ಆಯೋಜಿಸಿದ್ದ ಬಗ್ಗೆಯೂ ಚರ್ಚೆಯೂ ನಡೆಯುವ ಸಾಧ್ಯತೆಯಿದೆ. ಆದರೆ, ಸಂಸತ್ ಸಿಬ್ಬಂದಿಯ ಹೊಸ ಡ್ರೆಸ್ ಕೋಡ್‌ನಲ್ಲಿ ಕಮಲ ಚಿಹ್ನೆ ಇರುವುದು ರಾಜಕೀಯ ವಿವಾದಕ್ಕೆ ಕಾರಣವಾಗಿದೆ. ಇದು ಬಿಜೆಪಿಯ ತೀರಾ ಸಣ್ಣತನದ ವರ್ತನೆಯಾಗಿದೆ ಎಂದು ಕಾಂಗ್ರೆಸ್ ಕಿಡಿಕಾರಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ಮೋದಿ, ಅಪ್ಪು ಜತೆ ಗಣಪ!



■ ಮಣಿಕಂಠ ತ್ರಿಶಂಕರ್

ಪ್ರತಿ ವರ್ಷವೂ ವಿಶೇಷ ಥೀಮ್‌ನಲ್ಲಿ ಗಣೇಶ ಮೂರ್ತಿಗಳನ್ನು ತಯಾರಿಸುವುದರಲ್ಲಿ ಮೈಸೂರಿನ ಕುಂಬಾರಗೇರಿ ರೇವಣ್ಣ ಅವರು ಎತ್ತಿದ ಕೈ. ಈ ಬಾರಿಯೂ ಅಂತದ್ದೇ ಪ್ರಯತ್ನ ಮಾಡಿದ್ದು ಎಲ್ಲರ ಗಮನ ಸೆಳೆದಿದ್ದಾರೆ. ಕಳೆದ 3 ವರ್ಷ ಕೊರೊನಾ ಇದ್ದ ಕಾರಣ ಮೈಸೂರಿನ ಅಶೋಕ ರಸ್ತೆಯ ಕುಂಬಾರಗೇರಿ ನಿವಾಸಿ ರೇವಣ್ಣ ಅವರು ಗಣೇಶ ಮೂರ್ತಿಗಳಲ್ಲಿ ಯಾವುದೇ ವಿಶೇಷಗಳನ್ನು ಮಾಡಿರಲಿಲ್ಲ. ಆದರೆ ಈ ವರ್ಷ ಹಲವು ವಿಶೇಷತೆಗಳನ್ನು ಮುಂದಿಟ್ಟಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಪುನೀತ್ ರಾಜಕುಮಾರ್, ಬಸವರಾಜ ಬೊಮ್ಮಾಯಿ ಅವರ ಪ್ರತಿರೂಪಗಳು ಗಮನ ಸೆಳೆಯುತ್ತಿವೆ.

ವಿಶೇಷ ಕಲಾಕೃತಿಗಳು: ವಿಶೇಷಗಳನ್ನು ಸೃಷ್ಟಿಸುವ ಇವರು ಈ ವರ್ಷ ಮೈಸೂರಿಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆಗಮಿಸಿ ಮೈಸೂರು ಅರಮನೆಯ ಮುಂಭಾಗದಲ್ಲಿ ಯೋಗಾಸನ ಮಾಡಿದ ಪ್ರಧಾನಿ ನರೇಂದ್ರ ಮೋದಿಯವರನ್ನು ಮನದಲ್ಲಿಟ್ಟುಕೊಂಡು ಹೊಸ ಪರಿಕಲ್ಪನೆಯೊಂದಿಗೆ ಗಣಪತಿ ಜೊತೆಗಿನ ಮೂರ್ತಿಗಳನ್ನು ತಯಾರಿಸಿದ್ದಾರೆ.

ಕನ್ನಡಿಗರ ಮನೆ ಮಗನಾಗಿ ಚಿರಸ್ಥಾಯಿಯಾದ ಪುನೀತ್ ರಾಜಕುಮಾರ್ ಅವರ ನೆನಪಿನಲ್ಲಿ ಬಾಲ್ಯದ ನೆನಪನ್ನು ಮೂರ್ತಿಯ ಮೂಲಕ ಪ್ರದರ್ಶಿಸಿದ್ದು, ಪುನೀತ್ ಅವರ ಭಾವಚಿತ್ರವನ್ನು ಗಣಪತಿ ಕೈಯ್ಯಲ್ಲಿ ಹಿಡಿದಿರುವ ಮೂರ್ತಿ, ಬೈಕ್‌ನಲ್ಲಿ ಸವಾರಿ ಮಾಡುತ್ತಿರುವ ಕೃತಿ ಮತ್ತು ಅವರು ನಡೆದು ಬಂದ ಹಾದಿಯ ಮೂರ್ತಿಯೂ ಇಲ್ಲಿ ಮೈತಾಳಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತಿನಲ್ಲಿ ಉದ್ಘಾಟನೆ ಮಾಡಿದ ರಾಷ್ಟ್ರ ಲಾಂಛನದ ಪ್ರತಿಮೆಯ ಕಲಾ ಕೃತಿ ಕೂಡ ಮಾಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೂರ್ತಿಗಳನ್ನು ಸಹ ರಚಿಸಿದ್ದಾರೆ. ಗೌರಿ–ಗಣೇಶ ಹಬ್ಬದ ಪ್ರಯುಕ್ತ ರೇವಣ್ಣ ಅವರು ನಮ್ಮ ದೇಶದ ಪ್ರಥಮ ಪ್ರಜೆ, ಮೊದಲ ಆದಿವಾಸಿ ಮಹಿಳೆ ಹಾಗೂ ಎರಡನೇ ಮಹಿಳಾ ರಾಷ್ಟ್ರಪತಿಯಾಗಿ ಆಯ್ಕೆಯಾದ ದ್ರೌಪದಿ ಮುರ್ಮು ಅವರ ಪ್ರತಿರೂಪ ರೂಪಿಸಿದ್ದಾರೆ.

ಪ್ರತಿ ವರ್ಷವೂ ವಿಶೇಷ: 25 ವರ್ಷಗಳಿಂದಲೂ ಕಾಲಮಾನಕ್ಕೆ ತಕ್ಕಂತೆ ಗಣಪತಿಯನ್ನು ತಯಾರಿಸಿಕೊಂಡು ಬರುತ್ತಿದ್ದು, ಕಾರ್ಗಿಲ್ ಗಣಪತಿ, ವೀರಪ್ಪನ್ ಡಾ.ರಾಜ್‌ಕುಮಾರ್ ಅವರನ್ನು ಅಪಹರಿಸಿದ್ದ ಸಂದರ್ಭದಲ್ಲಿ ಡಾ.ರಾಜ್‌ರನ್ನು ಕಾಡಿನಿಂದ ನಾಡಿಗೆ ಕರೆದುಕೊಂಡು ಬರುವ ಗಣಪತಿ ಸೇರಿದಂತೆ ವಿಶೇಷ ಗಣಪನ ತಯಾರಿಸಿ ಕೊಂಡು ಬರುತ್ತಿದ್ದಾರೆ. ಈ ವಿಶೇಷ ಕಲಾಕೃತಿಗಳನ್ನು ಮಾರಾಟ ಮಾಡುವುದಕ್ಕಲ್ಲ, ಪ್ರದರ್ಶನಕ್ಕೆ ಮಾತ್ರ ಮೀಸಲು.

ಸನಾತನ ಧರ್ಮದ ಆಚರಣೆಗಳು ಶಾಶ್ವತ

ಆ ಬಗ್ಗೆ ಮುಕ್ತವಾಗಿ ಮಾತಾಡಲು ಅವಕಾಶವಿದೆಯೇ ಹೊರತು ದ್ವೇಷ ಭಾಷಣಕ್ಕಲ್ಲ; ಮದ್ರಾಸ್ ಹೈಕೋರ್ಟ್

ಚೆನ್ನೈ, ಸೆ.16– ಸನಾತನ ಧರ್ಮ ಕುರಿತಂತೆ ತಮಿಳುನಾಡು ಸಚಿವ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ವಿವಾದಾತ್ಮಕ ಹೇಳಿಕೆ ದೇಶಾದ್ಯಂತ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದ್ದು ಇದರ ಮಧ್ಯೆ ಮದ್ರಾಸ್ ಹೈಕೋರ್ಟ್ ಹಿಂದೂ ಜೀವನ ಪದ್ಧತಿ ಪಾಲಿಸುವವರಿಗೆ ಸನಾತನ ಧರ್ಮ ಎಂಬುದು ಚಿರಂತನ ಕರ್ತವ್ಯಗಳಾಗಿದ್ದು, ದೇಶ, ಪೋಷಕರು, ಗುರುಗಳ ಬಗೆಗಿನ ಕರ್ತವ್ಯಗಳ ಒಟ್ಟು ಮೊತ್ತವಾಗಿದೆ. ಅಂತಹ ಕರ್ತವ್ಯಗಳನ್ನು ಏಕೆ ನಾಶಪಡಿಸಬೇಕು ಎಂದು ಪ್ರಶ್ನಿಸಿದೆ.

ತಮಗೆ ಸನಾತನ ಧರ್ಮದ ಸುತ್ತ ನಡೆಯುತ್ತಿರುವ ಚರ್ಚೆಗಳ ಬಗ್ಗೆ ಅರಿವಿದ್ದು ಅದರ ಬಗ್ಗೆ ಚಿಂತಿಸದೇ ಇರಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ಎನ್.ಶೇಷಸಾಯಿ ತಿಳಿಸಿದ್ದಾರೆ.

ಸನಾತನ ಧರ್ಮ ಜೀವನ ವಿಧಾನವಾಗಬೇಕೆಂಬ ಆಶಯ ಹೊಂದಿದ್ದರೂ ಕೇವಲ ಜಾತಿ ಮತ್ತು ಅಸ್ಪೃಶ್ಯತೆ ಪ್ರಚಾರ ಮಾಡುವುದಕ್ಕಾಗಿ ಅದು ಇದೆ ಎಂಬ ಕಲ್ಪನೆ ಹರಡಿಕೊಂಡಿತು. ಸನಾತನ ಧರ್ಮದ ತತ್ವದಲ್ಲಿ ಅಸ್ಪೃಶ್ಯತೆಗೆ ಅವಕಾಶ ಇದ್ದರೆ ಅದನ್ನು ಸಹಿಸಲಾಗದು. ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತೆಯನ್ನು ನಿಷೇಧಿಸಲಾಗಿದೆ ಎಂದು ಘೋಷಿಸಿರುವುದರಿಂದ ಅಸ್ಪೃಶ್ಯತೆ ಆಚರಣೆಗೆ ಅವಕಾಶವಿಲ್ಲ ಎಂದು ನ್ಯಾಯಾಲಯ ಹೇಳಿದೆ.

ತಮಿಳುನಾಡು ಮಾಜಿ ಮುಖ್ಯಮಂತ್ರಿ ಮತ್ತು ಡಿಎಂಕೆ ಸಂಸ್ಥಾಪಕ ಸಿ.ಎನ್.ಅಣ್ಣಾದೊರೈ ಅವರ ಸ್ಮರಣಾರ್ಥ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಸನಾತನಕ್ಕೆ ವಿರೋಧ' ಎಂಬ ವಿಚಾರವಾಗಿ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯ ಹಂಚಿಕೊಳ್ಳುವಂತೆ ಸ್ಥಳೀಯ ಸರ್ಕಾರಿ ಕಲಾ ಕಾಲೇಜು ಹೊರಡಿಸಿದ ಸುತ್ತೋಲೆ ಪ್ರಶ್ನಿಸಿ ಇಳಂಗೋವನ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್ ಈ ವಿಚಾರಗಳನ್ನು ಹಂಚಿಕೊಂಡಿತು. ಕಾಲೇಜು ಈಗಾಗಲೇ ಸುತ್ತೋಲೆ ಹಿಂಪಡೆದಿದೆ ಎಂಬ ವಿಚಾರ ಗಮನಿಸಿದ ನ್ಯಾಯಾಲಯ ಮನವಿಯನ್ನು ವಿಲೇವಾರಿ ಮಾಡಿದೆ.

ಚೈತ್ರಾ ಕುಂದಾಪುರ ಮೂರ್ಛೆ ರೋಗದಿಂದ ಬಳಲುತ್ತಿದ್ದಾರೆ: ಪೊಲೀಸರು



ಬೆಂಗಳೂರು, ಸೆ.16– ಚೈತ್ರಾ ಕುಂದಾಪುರ ಅವರು ಮೂರ್ಛೆ ರೋಗದಿಂದ ಬಳಲುತ್ತಿದ್ದಾರೆಂದು ಪೊಲೀಸರು ಹೇಳಿದ್ದಾರೆ. ಬಿಜೆಪಿಯಿಂದ ಟಿಕೆಟ್ ಕೊಡಿಸುವುದಾಗಿ ಹೇಳಿ ಉದ್ಯಮಿಯೊಬ್ಬರಿಗೆ ವಂಚಿಸಿದ ಆರೋಪದ ಮೇಲೆ ಚೈತ್ರಾ ಕುಂದಾಪುರ ಅವರು ಸಿಸಿಬಿ ಪೊಲೀಸರ ವಶದಲ್ಲಿದ್ದಾರೆ. ನಿನ್ನೆಯಷ್ಟೇ ವಿಚಾರಣೆ ವೇಳೆ ಚೈತ್ರಾ ಅವರ ಆರೋಗ್ಯದಲ್ಲಿ ಏರುಪೇರು ಕಂಡು ಬಂದಿತ್ತು. ನಂತರ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚೈತ್ರಾ ಅಪಸ್ಮಾರ (ಮೂರ್ಛೆ ರೋಗ)ದಿಂದ ಬಳಲುತ್ತಿದ್ದು, ಆರೋಗ್ಯದಲ್ಲಿ ಏರುಪೇರು ಕಂಡುಬಂದ ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ಪೊಲೀಸರು ಹೇಳಿದ್ದಾರೆ.

ಹಿರಿಯ ಕಲಾವಿದರ ಸಾಧನೆ ಯುವ ಕಲಾವಿದರಿಗೆ ಪರಿಚಯಿಸಬೇಕು

ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಸಲಹೆ



ಮೈಸೂರು, ಸೆ. 16(ಎಸ್‌ಪಿಎನ್)– ಸಾಂಸ್ಕೃತಿಕ ಚಟುವಟಿಕೆಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾವಣೆಗೊಳ್ಳಬೇಕಾದರೆ ಹಿರಿಯ ಕಲಾವಿದರ ಸಾಧನೆಯನ್ನು ಯುವ ಕಲಾವಿದರಿಗೆ ಪರಿಚಯಿಸುವ ಕೆಲಸವಾಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ. ತಿಮ್ಮಯ್ಯ ಸಲಹೆ ನೀಡಿದರು.

ಮೈಸೂರು ಆದಿ ಚುಂಚನಗಿರಿ ರಸ್ತೆಯಲ್ಲಿರುವ ಗಾನಭಾರತೀ ಸಂಸ್ಥೆ ವತಿಯಿಂದ ಶ್ರೀ ಕೃಷ್ಣಜಯಂತಿ ಅಂಗವಾಗಿ ಕಲಾವಿದರು ಹಾಗೂ ಕಲಾ ಪೋಷಕರನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂದಿನ ವೇದಿಕೆಯಲ್ಲಿ ಹಿರಿಯ ಕಲಾವಿದರನ್ನು ಸನ್ಮಾನಿಸುವ ಮೂಲಕ ಅವರ ಸಾಧನೆಯನ್ನು ಕಿರಿಯ ಕಲಾವಿದರಿಗೆ ಪರಿಚಯಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಗಾನಭಾರತೀ ಸಂಸ್ಥೆ ಕಳೆದ ಹಲವು ವರ್ಷಗಳಿಂದ ಸಂಗೀತ, ಸಾಹಿತ್ಯ, ನೃತ್ಯ ಸೇರಿದಂತೆ ಇತರೆ ಕಲೆಗಳ ಉಳಿವಿಗಾಗಿ ಶ್ರಮಿಸುತ್ತಿದೆ. ಇದರಿಂದ ಸಾಂಸ್ಕೃತಿಕ ನಗರಿ ಮೈಸೂರು ಶೀರ್ಷಿಕೆಗೆ ಈ ಸಂಸ್ಥೆಯ ಕೊಡುಗೆಯೂ ಸೇರಿಕೊಂಡಿದೆ ಎಂದರಲ್ಲದೆ, ಗಾನಭಾರತೀ ಸಭಾಂಗಣ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಬಿಡುಗಡೆಗೆ ಸಹಕರಿಸುತ್ತೇನೆ ಎಂದರು.

ಸನ್ಮಾನ: ಹಿರಿಯ ಕಲಾವಿದರಾದ ವಿದ್ವಾನ್ ವೈ.ಎಂ.ಪುಟ್ಟಣ್ಣಯ್ಯ, ವಿದ್ವಾನ್ ಎಂ.ಎಸ್.ಜಯರಾಂ, ಕಲಾಪೋಷಕರಾದ ಮುಳಿಯ ರಾಘವಯ್ಯ, ಎಂ.ಎಸ್.ನಾರಾಯಣ ಮೂರ್ತಿ, ನಾಟ್ಯಾಚಾರ್ಯ ಉಳ್ಳಾಲ ಮೋಹನ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ವಿದ್ವಾನ್ ವೈ.ಎಂ.ಪುಟ್ಟಣ್ಣಯ್ಯ ನೇತೃತ್ವದಲ್ಲಿ ರಂಗ ಗೀತಾಂಜಲಿ ತಂಡದ ಕಲಾವಿದರಿಂದ ರಂಗಗೀತೆಗಳನ್ನು ಪ್ರಸ್ತುತಪಡಿಸಿದರು. ಅಲ್ಲದೆ ಶ್ರೀ ಕೃಷ್ಣಜಯಂತಿ ಅಂಗವಾಗಿ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ವೇದಿಕೆಯಲ್ಲಿ ಡಾ.ಸಿ.ಜಿ.ನರಸಿಂಹನ್, ಡಾ. ರಮಾ ವಿ.ಬೆಣ್ಣೂರು, ಕಾರ್ಯದರ್ಶಿ ಕೃಪಾಫಡ್ಕೆ, ಎಸ್.ರಾಮಪ್ರಸಾದ್, ಮೀರಜಾ ಅಚ್ಚುತಾರಾವ್, ಆರ್.ತೇಜಸ್ವಿನಿ ಸೇರಿದಂತೆ ಇತರರಿದ್ದರು.

ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಪರಿಸರ ಸ್ನೇಹಿ ಮಣ್ಣಿನ ಗಣಪತಿ ತಯಾರಿಕೆ ಕಾರ್ಯಾಗಾರ

ಮೈಸೂರು, ಸೆ.16(ಎಸ್‌ಪಿಎನ್)– ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಸಾಮೂಹಿಕವಾಗಿ ಪರಿಸರ ಸ್ನೇಹಿ ಮಣ್ಣಿನ ಗಣಪತಿಯನ್ನು ತಯಾರಿಕೆ ಕಾರ್ಯಾಗಾರಕ್ಕೆ ಶನಿವಾರ ಚಾಲನೆ ನೀಡಲಾಯಿತು.


ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾ ಆವರಣದಲ್ಲಿ ಮೈಸೂರು ಧಾರ್ಮಿಕ ಪ್ರತಿಷ್ಠಾನ ಮತ್ತು ಮೈಸೂರು ಕಲಾ ಪ್ರತಿಷ್ಠಾನ ಸಹಯೋಗದೊಂದಿಗೆ ಆಯೋಜಿಸಿದ್ದ ಮಣ್ಣಿನ ಪರಿಸರ ಸ್ನೇಹಿ ಗಣಪತಿ ಮೂರ್ತಿ ತಯಾರಿಕೆ ಕಾರ್ಯಾಗಾರಕ್ಕೆ ಪ್ರತಿಷ್ಠಾನದ ಮಂಜುನಾಥ್ ಚಾಲನೆ ನೀಡಿದರು.

ನಂತರ ಮಾತನಾಡಿ ಅವರು, ಪಿಓಪಿ ಗಣಪತಿಗಳನ್ನು ಕೂರಿಸಿ, ಪೂಜೆ ಸಲ್ಲಿಸುವುದು ಸರಿಯಲ್ಲ. ಅದಕ್ಕಾಗಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಬಣ್ಣರಹಿತ ಗಣಪತಿಗಳನ್ನು ತಮ್ಮತಮ್ಮ ಮನೆಗಳಲ್ಲಿ ಅಥವಾ ಬಡಾವಣೆಗಳಲ್ಲಿ ಸ್ಥಾಪಿಸುವಂತೆ ಜಾಗೃತಿ ಮೂಡಿಸುವ ಸಲುವಾಗಿ ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಮೈಸೂರು ಧಾರ್ಮಿಕ ಪ್ರತಿಷ್ಠಾನದ ವತಿಯಿಂದ ಮೈಸೂರಿನ ವಿವಿಧ ಬಡಾವಣೆಯ 50 ಸ್ಥಳಗಳಲ್ಲಿ ಪರಿಸರ ಸ್ನೇಹಿ ಗಣಪತಿಯನ್ನು ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಲು ತೀರ್ಮಾನಿಸಲಾಗಿದ್ದು, ಇದರ ಪೂರ್ವಭಾವಿಯಾಗಿ ವಿವಿಧ ಶಾಲಾ–ಕಾಲೇಜಿನ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಈ ಕಾರ್ಯಾಗಾರದ ಮೂಲಕ ಪರಿಸರ ಸ್ನೇಹಿ ಗಣಪತಿ ಬಗ್ಗೆ ಜಾಗೃತಿ ಮೂಡಿಸುವುದು ನಮ್ಮ ಪ್ರತಿಷ್ಠಾನದ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ಮಾಧವಾ ಕೃಪಾ ಪಕ್ಕದ ರಸ್ತೆಯಲ್ಲಿ ಸುಮಾರು 6 ಅಡಿ ಉದ್ದದ ಗಣಪತಿ ಮೂರ್ತಿಯನ್ನು ಸೋಮವಾರ ಪ್ರತಿಷ್ಠಾಪಿಸಲು ತೀರ್ಮಾನಿಸಲಾಗಿದ್ದು, ಈ ಗಣಪತಿ ಮೂರ್ತಿ ತಯಾರಿಕೆಗೆ 21 ತೀರ್ಥ ಸ್ಥಳಗಳ ಮಣ್ಣು, ಸಪ್ತನದಿಗಳ ನೀರನ್ನು ಹಾಕಿ ಮೂರ್ತಿ ತಯಾರಿಕೆಗೆ ಚಾಲನೆ ನೀಡಿರುವುದು ವಿಶೇಷವಾಗಿದೆ ಎಂದರು.



ಮೈಸೂರಿನಲ್ಲಿ ಅದ್ಧೂರಿ ಗಣೇಶೋತ್ಸವವನ್ನು ಆಚರಿಸುವುದು ಮೈಸೂರು ಧಾರ್ಮಿಕ ಪ್ರತಿಷ್ಠಾನದ ಉದ್ದೇಶವಾಗಿದ್ದು, ಈ ಕಾರ್ಯಕ್ಕೆ ಮೈಸೂರಿನ ಹಿಂದೂಗಳು ಹೆಚ್ಚಿನ ರೀತಿಯಲ್ಲಿ ಸಹಕಾರ ನೀಡಿ, ಗೌರಿ–ಗಣೇಶ ಹಬ್ಬದ ಆಚರಣೆ ಮಾಡುವಂತೆ ಮನವಿ ಮಾಡಿದರಲ್ಲದೆ, ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕವಾಗಿ ಗೌರಿ–ಗಣೇಶ ಮೂರ್ತಿ ಇಟ್ಟು ಪೂಜೆ ಸಲ್ಲಿಸುವುದಕ್ಕೆ ಕೆಲವರು ಅಪ್ರಚಾರ ಮಾಡುತ್ತಿದ್ದು, ಇದಕ್ಕೆ ಆಸ್ಪದ ನೀಡದಂತೆ ಜಾಗೃತಿ ವಹಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಈ ವೇಳೆ ಮೈಸೂರು ಧಾರ್ಮಿಕ ಪ್ರತಿಷ್ಠಾನದ ಪದಾಧಿಕಾರಿಗಳಾದ ಚರಣ್, ಚೇತನ್, ದರ್ಶನ್ ರಾಜ್ ಸೇರಿದಂತೆ ಇತರರಿದ್ದರು.

'ಪೊಮ್ಮಾಲೆ ಕೊಡಗ್' ಕೊಡವ ಚಿತ್ರದ ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪಗೆ 'ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ'



ಮಡಿಕೇರಿ, ಸೆ.16– 'ಪೊಮ್ಮಾಲೆ ಕೊಡಗ್' ಕೊಡವ ಸಿನಿಮಾದ ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಅವರಿಗೆ 'ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ' ಲಭಿಸಿದೆ. ಅ.8ರಂದು ಮಹಾರಾಷ್ಟ್ರದ ಔರಂಗಬಾದ್ ಶಿಲೋಡಿನಲ್ಲಿ ನಡೆಯುವ ಐಡಿಯಲ್ ಅಂತರರಾಷ್ಟ್ರೀಯ ಸಿನಿಮೋತ್ಸವದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಕಾಶ್ ಕಾರ್ಯಪ್ಪ ಪ್ರಶಸ್ತಿ ಪಡೆಯಲಿದ್ದಾರೆ.

2022ರಲ್ಲಿ ಸ್ಟೈಕ್ ಎಂಟರ್‌ಟೈನ್‌ಮೆಂಟ್ ಬ್ಯಾನರ್ ಅಡಿ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ನಿರ್ಮಾಣದಲ್ಲಿ ಹಲವು ಯಶಸ್ವಿ ಕೊಡವ ಮತ್ತು ಕನ್ನಡ ಸಿನಿಮಾಗಳು ತೆರೆಗೆ ಬಂದಿವೆ. ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಪಡೆದು ಖ್ಯಾತಿ ಗಳಿಸಿರುವ ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಅವರು 'ಪೊಮ್ಮಾಲೆ ಕೊಡಗ್' ಕೊಡವ ಚಿತ್ರವನ್ನು ನಿರ್ದೇಶಿಸಿ ಹೆಸರು ಗಳಿಸಿದ್ದಾರೆ. ಗೋವಾ ಅಂತಾರಾಷ್ಟ್ರೀಯ ಸಿನಿಮೋತ್ಸವದ ಎನ್‌ಎಫ್‌ಡಿಸಿ ಫಿಲಂ ಬಜಾರ್‌ನಲ್ಲಿ ಪ್ರಥಮ ಬಾರಿಗೆ ಪ್ರದರ್ಶನ ಕಂಡ ಮೊದಲ ಕೊಡವ ಸಿನಿಮಾ ಎಂಬ ಹೆಗ್ಗಳಿಕೆಗೆ ಈ ಚಿತ್ರ ಪಾತ್ರವಾಗಿದೆ.

ಅಲ್ಲದೇ ಕೊಲ್ಕತ್ತ ಅಂತಾರಾಷ್ಟ್ರೀಯ ಫಿಲಂ ಫೆಸ್ಟಿವಲ್‌ನಲ್ಲಿ ಏಷ್ಯನ್ ವಿಭಾಗದ ಸ್ಪರ್ಧೆಗೆ ಆಯ್ಕೆಯಾದ ಮೊದಲ ಕೊಡವ ಸಿನಿಮಾ ಇದ್ದಾಗಿದ್ದು, ಬಿಎಸ್‌ಈಎಫ್‌ಎಫ್ ಬಯೋಸ್ಕೋಪ್ ಅಂತಾರಾಷ್ಟ್ರೀಯ, ಓಎಲ್‌ಐಎಫ್‌ಎಫ್ ಒನ್ ಲೀಫ್ ಅಂತಾರಾಷ್ಟ್ರೀಯ, ಟಿಐಎಫ್‌ಎಫ್– ತಮಿಳುನಾಡ್ ಅಂತಾರಾಷ್ಟ್ರೀಯ, ಆರ್‌ಐಎಫ್‌ಎಫ್–ರೇಡಿಯಂಟ್ ಅಂತರಾಷ್ಟ್ರೀಯ ಸಿನಿಮೋತ್ಸವಗಳಲ್ಲಿ ಬೆಸ್ಟ್ ಸಿನಿಮೋಟೋಗ್ರಾಫಿ, ಬೆಸ್ಟ್ ಆಕ್ಟ್ರೆಸ್, ಬೆಸ್ಟ್ ಸೋಶಿಯಲ್ ಫಿಲಂ, ಬೆಸ್ಟ್ ಕಾನ್ಸೆಪ್ಟ್, ಬೆಸ್ಟ್ ಸ್ಕ್ರೀನ್ ಪ್ಲೇ ಹೀಗೆ ಹಲವು ವಿಭಾಗದಲ್ಲಿ 13 ಪ್ರಶಸ್ತಿಗಳನ್ನು ಪಡೆದು ಇದೀಗ 3ನೇ ಐಡಿಯಲ್ ಅಂತರರಾಷ್ಟ್ರೀಯ ಸಿನಿಮೋತ್ಸವಕ್ಕೆ ಆಯ್ಕೆಯಾಗಿದೆ.

ಕೊಟ್ಟುಕತ್ತೀರ ಪ್ರಕಾಶ್ ಹಾಗೂ ಯಶೋಧ ದಂಪತಿ ನಿರ್ಮಿಸಿ, ನಿರ್ದೇಶಿಸಿದ ನಾಲ್ಕು ಕೊಡವ ಚಿತ್ರಗಳು ವಿವಿಧ ರಾಜ್ಯಗಳಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಿಗೆ ಆಯ್ಕೆಯಾಗಿ ಅನೇಕ ಪ್ರಶಸ್ತಿಗಳನ್ನು ಬಾಚಿಕೊಂಡಿವೆ.

ನಾಳೆ ಶ್ರೀ ಹೊನ್ನಮ್ಮ ತಾಯಿಗೆ ಬಾಗಿನ ಅರ್ಪಣೆ

ಮಡಿಕೇರಿ, ಸೆ.16– ಶ್ರೀ ಸಿದ್ದೇಶ್ವರ ಮತ್ತು ಶ್ರೀ ಬಸವೇಶ್ವರ ಹಾಗೂ ಸೋಮವಾರಪೇಟೆ ತಾಲೂಕು ದೊಡ್ಡಮಳ್ತೆ ಗ್ರಾಮದ ಸ್ವರ್ಣಗೌರಿ ಹೊನ್ನಮ್ಮ ಟ್ರಸ್ಟ್ ವತಿಯಿಂದ ಇತಿಹಾಸ ಪ್ರಸಿದ್ಧ ಶ್ರೀಕ್ಷೇತ್ರ ಹೊನ್ನಮ್ಮನ ಕೆರೆಗೆ ಶ್ರೀಸ್ವರ್ಣಗೌರಿ ಮಹೋತ್ಸವದ ಅಂಗವಾಗಿ ಶ್ರೀ ಹೊನ್ನಮ್ಮ ತಾಯಿಗೆ ಬಾಗಿನ ಅರ್ಪಣೆ ಕಾರ್ಯಕ್ರಮವು ಸೆ.18 ರಂದು ಬೆಳಗ್ಗೆ 9 ಗಂಟೆಗೆ ನಡೆಯಲಿದೆ.

ದೇವಾಲಯ ಸಮಿತಿಯ ಅಧ್ಯಕ್ಷ ಡಿ.ಬಿ. ವೀರೇಶ, ಉಪಾಧ್ಯಕ್ಷ ಡಿ.ಎಂ.ಪ್ರಸನ್ನ, ಕಾರ್ಯದರ್ಶಿ ಎಂ.ಜೆ.ಕಿರಣ್ ಕುಮಾರ್, ಸದಸ್ಯರಾದ ಎಂ.ಬಿ.ವಸಂತಕುಮಾರ, ಕೆ.ಕೆ.ರವಿ, ಡಿ.ಬಿ. ಮಧು, ಡಿ.ಯು.ಹರ್ಷಿತ್, ಡಿ.ಬಿ.ಶಶಿಧರ, ಡಿ.ಕೆ.ಲೋಕೇಶ್, ಡಿ.ಕೆ.ಶಾಂತಪ್ಪ, ಡಿ.ಎಚ್. ರತನ್, ಎಂ.ಎಲ್.ಆಕಾಶ್, ಡಿ.ಬಿ.ರಾಜು, ಕೆ.ಬಿ. ಪುಷ್ಪಾಧರ, ಪ್ರಧಾನ ಅರ್ಚಕ ವೀರಯ್ಯ ಹಿರೇಮಠ್, ಇತರರು ಪಾಲ್ಗೊಳ್ಳಲಿದ್ದಾರೆ.

ಬೀಟೆ ಮರ ಸಾಗಿಸುತ್ತಿದ್ದ ಇಬ್ಬರ ಬಂಧನ

ವಿರಾಜಪೇಟೆ ಬಳಿ 35 ಲಕ್ಷ ರೂ. ಮೌಲ್ಯದ ಬೀಟೆ ಮರ, ಗೂಡ್ಸ್ ವಾಹನ ವಶ, ಮೂವರು ಆರೋಪಿಗಳು ಪರಾರಿ



ವಿರಾಜಪೇಟೆ,ಸೆ.16(ಎಂಟಿವೈ,ಮಂಜು)– ಅಕ್ರಮವಾಗಿ ಬೀಟೆ ಮರದ ನಾಟ ಸಾಗಿಸುತ್ತಿದ್ದ ಗೂಡ್ಸ್ ವಾಹನವೊಂದನ್ನು ವಶಪಡಿಸಿಕೊಂಡಿರುವ ಅರಣ್ಯಾಧಿಕಾರಿಗಳ ತಂಡ ಇಬ್ಬರನ್ನು ಬಂಧಿಸಿ, 35 ಲಕ್ಷ ರೂ. ಮೌಲ್ಯದ ಬೀಟೆ ಮರದ ನಾಟ ಹಾಗೂ ಗೂಡ್ಸ್ ವಾಹನವನ್ನು ವಶಪಡಿಸಿಕೊಂಡಿದೆ.


ಕೊಡಗು ಜಿಲ್ಲೆಯ ವಿರಾಜಪೇಟೆ ಅರಣ್ಯ ವಿಭಾಗದ ವಿರಾಜಪೇಟೆ ವಲಯ ವ್ಯಾಪ್ತಿಯ ಕೊಳತ್ತೋಡು ಬೈಗೋಡು ಗ್ರಾಮದ ಸಮೀಪ ಗೋಣಿಕೊಪ್ಪ–ವಿರಾಜಪೇಟೆ ಮುಖ್ಯ ರಸ್ತೆಯಲ್ಲಿ ಅಕ್ರಮವಾಗಿ ಬೀಟೆ ಮರದ ನಾಟ ಸಾಗಿಸುತ್ತಿರುವ ಖಚಿತ ಮಾಹಿತಿ ಪಡೆದು ಕಾರ್ಯಾಚರಣೆ ನಡೆಸಿದ ಅರಣ್ಯಾಧಿಕಾರಿಗಳ ತಂಡ ಐಷರ್ ವಾಹನ (ಕೆಎ.12–ಬಿ.9875) ತಡೆದು ಪರಿಶೀಲಿಸಿದಾಗ ಬೀಟೆ ಮರದ ನಾಟ ಸಾಗಿಸುತ್ತಿದ್ದು ಬೆಳಕಿಗೆ ಬಂದಿದೆ.

ಕೂಡಲೇ ವಾಹನದ ಮಾಲೀಕ ಹಾಗೂ ಚಾಲಕನಾದ ವಿರಾಜಪೇಟೆಯ ಜೈನರ ಬೀದಿ ನಿವಾಸಿ ಪ್ರದೀಪ್.ಕೆ.ಆರ್ ಹಾಗೂ ವಾಹನದಲ್ಲಿದ್ದ ಇನ್ನೋರ್ವ ಆರೋಪಿ ಬಿಟ್ಟಂಗಲ ನಿವಾಸಿ ಅರ್ಜುನ್.ಪಿ.ಎಸ್. ನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಪೊನ್ನಂಪೇಟೆಯ ಟಿ.ಶೆಟ್ಟಿಗೇರಿ ಗ್ರಾಮದಿಂದ ಬೀಟೆ ಮರದ 50 ನಾಟಗಳನ್ನು ಅಕ್ರಮವಾಗಿ ಸಾಗಿಸುತ್ತಿರುವುದು ತಿಳಿದು ಬಂದಿದೆ.

ಕೂಡಲೇ ಇಬ್ಬರು ಆರೋಪಿಗಳನ್ನು ಬಂಧಿಸಿ, 35 ಲಕ್ಷ ರೂ. ಮೌಲ್ಯದ 50 ಬೀಟೆ ನಾಟ ಮತ್ತು ಗೂಡ್ಸ್ ವಾಹನವನ್ನು ವಶಕ್ಕೆ ಪಡೆದರು. ಈ ಪ್ರಕರಣದಲ್ಲಿ ಇನ್ನು ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರನ್ನು ಮಡಿಕೇರಿ ರಾಣಿಪೇಟ್ ನಿವಾಸಿ ಸಲೀಂ, ನೆಹರುನಗರದ ನಿವಾಸಿ ಅಬ್ದುಲ್ ಜಬ್ಬಾರ್ ಯು.ವೈ. ಮತ್ತು ವಿರಾಜಪೇಟೆ ಸಿಲ್ವನಗರದ ನಿವಾಸಿ ಫಾರೂಕ್ ಎಂದು ಗುರುತಿಸಲಾಗಿದೆ. ಈ ಎಲ್ಲಾ ಆರೋಪಿಗಳ ವಿರುದ್ಧ ಅರಣ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ವಿರಾಜಪೇಟೆ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಶರಣಬಸಪ್ಪ ಬಿ.ಎಂ. ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೊಚ್ಚೆರ.ಎ.ನೆಹರೂ ಮಾರ್ಗದರ್ಶನದಲ್ಲಿ ವಿರಾಜಪೇಟೆ ವಲಯದ ಆರ್‌ಎಫ್‌ಓ ಕಳ್ಳಿರ. ಎಂ.ದೇವಯ್ಯ ನೇತೃತ್ವ ವಹಿಸಿದ್ದ ಕಾರ್ಯಾಚರಣೆ ವಿರಾಜಪೇಟೆ ವಲಯದ ಉಪವಲಯ ಅರಣ್ಯಾಧಿಕಾರಿ ದೇಯಂಡ ಸುಜಿತ್ ಸೋಮಯ್ಯ, ಆನಂದಕೆಆರ್., ಅನಿಲ್. ಸಿ.ಟಿ., ಮಾದಂಡ ಮೋನಿಷಾ, ಸಚಿನ್ ನಿಂಬಾಳ್ಕರ್, ಅರಣ್ಯ ರಕ್ಷಕರುಗಳಾದ ಅರುಣ್.ಸಿ, ಚಂದ್ರಶೇಖರ ಅಮರಗೋಳ, ಮಾಲತೇಶ್ ಬಡಿಗೇರ, ವಾಹನ ಚಾಲಕರಾದ ಅಶೋಕ್, ಪ್ರಕಾಶ, ಮಧು,ಅಚ್ಚಯ್ಯ ಹಾಗೂ ವಿರಾಜಪೇಟೆ ಅರಣ್ಯ ವಲಯದ ಆರ್.ಆರ್.ಟಿ ಸಿಬ್ಬಂದಿಗಳಾದ ವಿಕಾಸ್, ಲತೇಶ, ಅನಿಲ್, ಸುರೇಶ, ಮಹೇಶ್, ಮೊಣ್ಣಪ್ಪ, ಹರ್ಷಿತ್, ನಾಚಪ್ಪ, ವಿನೋದ್, ವಿನುಕುಮಾರ್ ಪಾಲ್ಗೊಂಡಿದ್ದರು.

ಒಂದೇ ದಿನದಲ್ಲಿ ಕಾರು ಕಳ್ಳನನ್ನು ಬಂಧಿಸಿದ ಪೊಲೀಸರು



ಆರೋಪಿ ಚಂದನ್

ಮಡಿಕೇರಿ, ಸೆ.16– ಶನಿವಾರಸಂತೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಾರು ಕಳವು ಪ್ರಕರಣವನ್ನು ಒಂದೇ ದಿನದಲ್ಲಿ ಭೇದಿಸುವಲ್ಲಿ ಶನಿವಾರಸಂತೆ ಪೊಲೀಸರು ಯಶಸ್ವಿಯಾಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರಪೇಟೆ ತಾಲೂಕಿನ ದೊಡ್ಡಮಳ್ತೆ ಗ್ರಾಮ ನಿವಾಸಿ ಚಂದನ್(28) ಎಂಬಾತನನ್ನು ಬಂಧಿಸಲಾಗಿದೆ.

ಶನಿವಾರಸಂತೆ ನಿಡ್ತ ಗ್ರಾಮ ನಿವಾಸಿ ಎನ್.ಪಿ.ಶಿವರಾಜ್ ಎಂಬವರು ಶನಿವಾರಸಂತೆ ಪಟ್ಟಣದ ಮಹಿಳಾ ಸಮಾಜ ಮುಂಭಾಗ ನಿಲ್ಲಿಸಿದ್ದ ಈಕೋ ಕಾರನ್ನು ಯಾರೋ ಕಳವು ಮಾಡಿರುವುದಾಗಿ ಸೆ.14ರಂದು ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ ಸೆ.15ರಂದು ದೊಡ್ಡಮಳ್ತೆ ಗ್ರಾಮ ನಿವಾಸಿ ಚಂದನ್ ಎಂಬಾತನನ್ನು ಬಂಧಿಸಿ ಕಳವು ಮಾಡಲಾದ ಕಾರನ್ನು ವಶಕ್ಕೆ ಪಡೆದಿದ್ದಾರೆ.

ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ, ಶನಿವಾರಸಂತೆ ಪೊಲೀಸ್ ಠಾಣೆಯ ಠಾಣಾಧಿಕಾರಿ ಮಂಜುನಾಥ್ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನಲ್ಲಿ ಅನಾರೋಗ್ಯದಿಂದ ಕೊಡಗಿನ ಯೋಧ ಸಾವು

ಸಕಲ ಸೇನಾ ಗೌರವಗಳೊಂದಿಗೆ ಅಂತ್ಯಕ್ರಿಯೆ



ಮಡಿಕೇರಿ, ಸೆ.16– ಭಾಗಮಂಡಲ ಸಮೀಪದ ಅಯ್ಯಂಗೇರಿ ಗ್ರಾಮದ ಉದಿಯಂಡ ಕಾಳಪ್ಪ ಹಾಗೂ ದಮಯಂತಿ ಅವರ ಪುತ್ರ, ಭಾರತೀಯ ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಯೋಧ ಯು.ಕೆ. ಜಿತನ್(33) ಅನಾರೋಗ್ಯದಿಂದ ಶುಕ್ರವಾರ ನಿಧನ ಹೊಂದಿದ್ದಾರೆ.

ಬೆಂಗಳೂರಿನ ಕಮಾಂಡೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಇಂದು ಬೆಳಗ್ಗೆ ಮೃತಪಟ್ಟರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಭಾರತೀಯ ಸೇನೆಯಲ್ಲಿ ಕಳೆದ 13 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಜಿತನ್ 2 ವರ್ಷಗಳ ಹಿಂದೆಯಷ್ಟೇ ವಿವಾಹವಾಗಿದ್ದರು.

ಪ್ರಸ್ತುತ ಬೆಂಗಳೂರಿನ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ (ಎಂಇಜಿ) ಸೆಂಟರ್‌ನಲ್ಲಿ ನಾಯಕ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಎಂ.ಇ.ಜಿ. ಸೆಂಟರ್‌ನ ಯೋಧರ ತಂಡ ಜಿತನ್ ಅವರ ಮೃತದೇಹವನ್ನು ಅವರ ಸ್ವಗ್ರಾಮಕ್ಕೆ ತಂದಿದ್ದು, ಸಾರ್ವಜನಿಕರು ಮತ್ತು ಕುಟುಂಬಸ್ಥರ ದರ್ಶನಕ್ಕೆ ಇಡಲಾಗಿದೆ. ಮೃತ ಯೋಧ ಜಿತನ್ ಅವರ ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದಲ್ಲಿ ಸಕಲ ಸೇನಾ ಗೌರವಗಳೊಂದಿಗೆ ನಡೆಯಿತು.

ಮೃತರು ಪತ್ನಿ ಹಾಗೂ ತಂದೆ, ತಾಯಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಪಿಎಂ ಸ್ವನಿಧಿ ಯೋಜನೆ ಸಂಚಾಲಕ ರಾಮದಾಸ್‌ಗೆ ಕರ್ನಾಟಕ ಪತ್ರಿಕಾ ವಿತರಕರ ಸಂಘದಿಂದ ಸನ್ಮಾನ

ಪತ್ರಿಕಾ ವಿತರಕರನ್ನು ಪಿಎಂ ಸ್ವನಿಧಿ ಯೋಜನೆಗೆ ಸೇರಿಸಿದ್ದಕ್ಕೆ ಗೌರವ ಸಮರ್ಪಣೆ



ಮಡಿಕೇರಿ, ಸೆ.16– ಪಿಎಂ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕ ಎಸ್.ಎ.ರಾಮದಾಸ್ ಅವರನ್ನು ಅಖಿಲ ಕರ್ನಾಟಕ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ ಸನ್ಮಾನಿಸಿ ಗೌರವಿಸಿತು. ಪತ್ರಿಕಾ ವಿತರಕರನ್ನು ಪಿಎಂ ಸ್ವನಿಧಿ ಯೋಜನೆ ವ್ಯಾಪ್ತಿಗೆ ಸೇರಿಸಲು ಸಹಕರಿಸಿದ ಹಿನ್ನೆಲೆ ಸಂಘದ ಪದಾಧಿಕಾರಿಗಳು ಕೃತಜ್ಞತೆ ಸಲ್ಲಿಸಿದರು.

ರಾಮದಾಸ್ ಅವರನ್ನು ಬೆಂಗಳೂರಿನಲ್ಲಿ ಭೇಟಿಯಾದ ಸಂದರ್ಭ ಸಂಘದ ರಾಜ್ಯಾಧ್ಯಕ್ಷ ಶಂಕರ್ ಕುದುರೆಮೋತಿ, ಕೊಡಗು ಜಿಲ್ಲಾಧ್ಯಕ್ಷ ಟಿ.ಜಿ.ಸತೀಶ್, ನಿರ್ದೇಶಕ ಕೆ.ಎನ್.ಶಿವಪ್ರಸಾದ್, ವಿವಿಧ ಜಿಲ್ಲೆಗಳ ಪದಾಧಿಕಾರಿಗಳಾದ ಕೃಷ್ಣ ಬೆಂಗಳೂರು, ಸತೀಶ್ ಶಿವಮೊಗ್ಗ, ಕೃಷ್ಣ ದಾವಣಗೆರೆ, ಸಂತೋಷ್ ಹಾಸನ, ಸುನಿಲ್ ಹಾಸನ ಮತ್ತಿತರರು ಹಾಜರಿದ್ದರು.

ಪಿಎಂ ಸ್ವನಿಧಿ ಯೋಜನೆ ವ್ಯಾಪ್ತಿಗೆ ಪತ್ರಿಕಾ ವಿತರಕರನ್ನು ಸೇರ್ಪಡೆ ಮಾಡಿದ್ದು, ಈ ವರ್ಗದವರು ಸೇರಿದಂತೆ ಬೀದಿಬದಿ ವ್ಯಾಪಾರಿಗಳು ಒಳಗೊಂಡ ಅಸಂಘಟಿತ ಕ್ಷೇತ್ರದಲ್ಲಿರುವವರಿಗೆ ಕಿರು ಸಾಲಸೌಲಭ್ಯ ಕಲ್ಪಿಸಲು ಸೆ.16 ರಿಂದ ಅ.15ರವರೆಗೆ ಮಾಸಾಚರಣೆ ಕೈಗೊಳ್ಳಲಾಗಿದೆ ಎಂದು ಟಿ.ಜಿ.ಸತೀಶ್ ತಿಳಿಸಿದರು.

ಪಿಎಂ ಸ್ವನಿಧಿ ಹಾಗೂ ಸ್ವನಿಧಿ ಸಮೃದ್ಧಿ ಯೋಜನೆಗಳಡಿ ಎಲ್ಲಾ ಎಂಟು ಸಾಮಾಜಿಕ ಭದ್ರತಾ ಯೋಜನೆಗಳನ್ನು ಕಲ್ಪಿಸಲು ಡಿಜಿಟಲ್ ವಹಿವಾಟನಲ್ಲಿ ತೊಡಗಿಸಿಕೊಳ್ಳಲು ಉತ್ತೇಜಿಸಲಾಗುತ್ತಿದೆ. ಪ್ರತೀ ಬ್ಯಾಂಕಿನ ಶಾಖಾ ಮಟ್ಟದಲ್ಲಿ ಸಾಲ ಮೇಳ ಆಯೋಜಿಸುವುದು, ಅರ್ಹ ಫಲಾನುಭವಿಗಳಿಗೆ ಗುರುತಿನಚೀಟಿ ಹಾಗೂ ಮಾರಾಟ ಸದಸ್ಯರಿಗೆ ಪ್ರಮಾಣಪತ್ರ ವಿತರಿಸುವುದು ಸೇರಿದಂತೆ ವಿವಿಧ ಪ್ರಕ್ರಿಯೆಗಳು ನಡೆಯಲಿದೆ. ರಿಯಾಯಿತಿ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುತ್ತದೆ. ಪಿಎಂ ಸುರಕ್ಷಾ ಭೀಮಾ ಯೋಜನೆಯಡಿ ಅಪಘಾತದಿಂದ ಆಗುವ ಮರಣಕ್ಕೆ ರೂ.2ಲಕ್ಷ ಮತ್ತು ಅಂಗವಿಕಲತೆಗೆ ರೂ.1ಲಕ್ಷ ದೊರೆಯಲಿದೆ. ಜೀವನ ಜ್ಯೋತಿ ಯೋಜನೆಯಡಿ ಸಾಧಾರಣ ಸಾವಿಗೆ ಯಾವುದೇ ವೈದ್ಯಕೀಯ ದಾಖಲೆ ಇಲ್ಲದೆ ರೂ.2ಲಕ್ಷ ಸಿಗಲಿದೆ. ಇನ್ನೂ ಕೆಲವು ಸೌಲಭ್ಯಗಳಿದ್ದು, ಪಿಎಂ ಸ್ವನಿಧಿ ಯೋಜನೆಯಡಿ ಪತ್ರಿಕಾ ವಿತರಕರಿಗೆ ಹೆಚ್ಚು ಅನುಕೂಲವಾಗಿದೆ ಎಂದು ಸತೀಶ್ ಹರ್ಷ ವ್ಯಕ್ತಪಡಿಸಿದರು.

ಇಂದು ವಿಶ್ವಕರ್ಮ ಜಯಂತಿ ಆಚರಣೆ

ಮಡಿಕೇರಿ,ಸೆ.16– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಾಗೂ ಕೊಡಗು ಜಿಲ್ಲಾ ವಿಶ್ವಕರ್ಮ ಒಕ್ಕೂಟ ಸಹಕಾರದಲ್ಲಿ ಸೆ.17 ರಂದು ಮಧ್ಯಾಹ್ನ 3 ಗಂಟೆಗೆ ಮಹದೇವಪೇಟೆಯ ಚೌಡೇಶ್ವರಿ ದೇವಾಲಯ ಸಭಾಂಗಣದಲ್ಲಿ ವಿಶ್ವಕರ್ಮ ಜಯಂತಿ ಆಚರಣೆ ನಡೆಯಲಿದೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಗಾಂಜಾ ಮಾರುತ್ತಿದ್ದ ಮಹಿಳೆ ಬಂಧನ



ಮಡಿಕೇರಿ, ಸೆ.16– ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಅಸ್ಸಾಂ ಮೂಲದ ಮಹಿಳಾ ಆರೋಪಿಯನ್ನು ನಾಪೋಕ್ಲು ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂ ಮೂಲದ ಪ್ರಸ್ತುತ ನಾಪೋಕ್ಲುವಿನಲ್ಲಿ ವಾಸವಿದ್ದ ದಿಲ್ಷಾನ್ ಬೇಗಂ(44) ಎಂಬಾಕೆಯೇ ಬಂಧಿತ ಮಹಿಳಾ ಆರೋಪಿಯಾಗಿದ್ದು, ಆಕೆಯ ಬಳಿಯಿದ್ದ 2 ಕೆ.ಜಿ. 260 ಗ್ರಾಂ ಗಾಂಜಾವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ನಾಪೋಕ್ಲುವಿನ ಚಾಮುಂಡಿ ಪೆಟ್ರೋಲ್ ಪಂಪ್ ಸಮೀಪದ ಬಸ್ ನಿಲ್ದಾಣದ ಬಳಿ ಮಹಿಳೆಯೊಬ್ಬಳು ನಿಷೇಧಿತ ಮಾದಕ ವಸ್ತುವನ್ನು ಮಾರಾಟ ಮಾಡುತ್ತಿರುವ ಬಗ್ಗೆ ನಾಪೋಕ್ಲು ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಅದರಂತೆ ದಾಳಿ ನಡೆಸಿದ ಸಂದರ್ಭ ಮಹಿಳೆ ಗಾಂಜಾ ಸಹಿತ ಪೊಲೀಸರಿಗೆ ಸೆರೆ ಸಿಕ್ಕಿದ್ದಾಳೆ. ಸ್ಥಳದಲ್ಲೇ ಆಕೆಯನ್ನು ಬಂಧಿಸಿದ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ ಮಾರ್ಗದರ್ಶನದಲ್ಲಿ ಮಡಿಕೇರಿ ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಚಾ.ನಗರ ದಸರಾ: ಅಧಿಕಾರಿಗಳೊಂದಿಗೆ ಡಿಸಿ ಸಭೆ

ಪೂರ್ವಸಿದ್ಧತೆ ಕೈಗೊಳ್ಳುವಂತೆ ಸೂಚನೆ



ಚಾಮರಾಜನಗರ, ಸೆ.16– ವಿಶ್ವ ವಿಖ್ಯಾತ ಮೈಸೂರು ದಸರಾ ಭಾಗವಾಗಿ ಚಾಮರಾಜನಗರದಲ್ಲೂ ದಸರಾ ಆಚರಿಸುವ ಸಂಬಂಧ ಪೂರ್ವ ಸಿದ್ಧತೆ ಕೈಗೊಳ್ಳುವ ಕುರಿತು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಚಾಮರಾಜನಗರ ದಸರಾ ಆಚರಣೆ ಸಂಬಂಧ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೈಸೂರು ದಸರಾ ಭಾಗವಾಗಿ ಚಾಮರಾಜನಗರ ಜಿಲ್ಲೆಯಲ್ಲೂ ಈ ಹಿಂದಿನಿಂದ ದಸರಾ ನಡೆಸಲಾಗುತ್ತಿದೆ. ಈಗಾಗಲೇ ಮೈಸೂರು ದಸರಾ ಸಂಬಂಧ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಚಾಮರಾಜನಗರ ದಸರಾ ಆಚರಣೆಗೂ ಸೂಚಿಸಲಾಗಿದೆ. ಹೀಗಾಗಿ ಅಧಿಕಾರಿಗಳು ದಸರಾ ಪೂರ್ವ ಸಿದ್ಧತಾ ಕಾರ್ಯಗಳನ್ನು ಆರಂಭಿಸಬೇಕೆಂದು ತಿಳಿಸಿದರು.

ಅಕ್ಟೋಬರ್‌ನಲ್ಲಿ 4 ದಿನಗಳ ಕಾಲ ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ದಸರಾ ಮಹೋತ್ಸವ ಆಚರಿಸಲಾಗುತ್ತದೆ. ತಾಲೂಕು ಕೇಂದ್ರಗಳಲ್ಲಿಯೂ ಗ್ರಾಮೀಣ ದಸರಾ ಏರ್ಪಾಡು ಮಾಡಲಾಗುತ್ತದೆ. ಕಲಾ ತಂಡಗಳನ್ನು ಆಹ್ವಾನಿಸಿ ಸಾಂಸ್ಕೃತಿಕ ಕಾರ್ಯಕ್ರಮ, ಪರಂಪರೆ, ಸಂಸ್ಕೃತಿ ಬಿಂಬಿಸುವ ಹೊಸತನದ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಯುವ ಜನರಿಗೆ ಪ್ರತ್ಯೇಕ ಕಾರ್ಯಕ್ರಮ ಆಯೋಜಿಸಬೇಕು ಎಂದರು.

ದಸರಾ ಪ್ರಮುಖ ಆಕರ್ಷಣೆ ದೀಪಾಲಂಕಾರ ಚೆನ್ನಾಗಿ ಆಗಬೇಕು. ಉತ್ತಮ ವೇದಿಕೆ ನಿರ್ಮಾಣವಾಗಬೇಕು. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದಂತೆ ಈ ಹಿಂದೆ ನಡೆಸಿಕೊಂಡು ಬರಲಾಗುತ್ತಿರುವ ವೈವಿಧ್ಯಮಯ ಕಾರ್ಯಕ್ರಮಗಳು ಆಯೋಜನೆಯಾಗಬೇಕು. ಇದಕ್ಕಾಗಿ ಸಾಂಸ್ಕೃತಿಕ ಸಮಿತಿ ಜವಾಬ್ದಾರಿ ಹೆಚ್ಚಿದೆ ಎಂದರು.

ಆಹಾರ ಮೇಳ, ಸಿರಿಧಾನ್ಯ ಮೇಳದಂತಹ ಕಾರ್ಯಕ್ರಮಗಳನ್ನು ನಡೆಸಬಹುದಾಗಿದೆ. ಸಾಂಪ್ರದಾಯಿಕ ಪೂಜಾ ಕೈಂಕರ್ಯಗಳು ನೆರವೇರಬೇಕು. ಕಲಾ ತಂಡಗಳ ಮೆರವಣಿಗೆಯನ್ನು ಆಕರ್ಷಕಗೊಳಿಸಬೇಕು. ಹೆಚ್ಚು ಜನರನ್ನು ಸೆಳೆಯುವ ವಿಭಿನ್ನ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ದಸರಾ ಆಚರಣೆಗೆ ಅಧಿಕಾರಿಗಳು ಮುಂದಾಗಬೇಕು ಎಂದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉದೇಶ್ ಮಾತನಾಡಿ, ದಸರಾ ಸಂದರ್ಭ ವಾಹನ ನಿಲುಗಡೆಗೂ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ನಿರ್ದಿಷ್ಟ ಸ್ಥಳಗಳಲ್ಲಿ ವಾಹನ ನಿಲುಗಡೆ ಮಾಡಬೇಕು. ಸುಗಮ ಸಂಚಾರಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಎಲ್ಲರೂ ಸಹಕರಿಸಬೇಕು ಎಂದರು.

ಎಡಿಸಿ ಗೀತಾ ಹುಡೇದ, ಎಸಿ ಮಹೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ತಹಶೀಲ್ದಾರರು, ತಾಪಂ ಇಓಗಳು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

ಸವಿತಾ ಸಮಾಜದ ಸ್ಮಶಾನ ಉಳಿಸಲು ಡಿಸಿಗೆ ಮನವಿ



ಚಾಮರಾಜನಗರ, ಸೆ.16– ನಗರದಲ್ಲಿರುವ ಸವಿತಾ ಸಮಾಜದ ಸ್ಮಶಾನ ಉಳಿಸಿಕೊಡುವಂತೆ ಸಮುದಾಯದ ಮುಖಂಡರು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿದ ಸಮುದಾಯದ ಮುಖಂಡರು, ನಾವು ಶತಮಾನಗಳಿಂದಲೂ ನಗರದ ಹೊರವಲಯದ ಸರ್ವೆ ನಂ.619ರ ಭೂಮಿಯಲ್ಲಿ ಸಮುದಾಯದ ಯಾರೇ ಮೃತಪಟ್ಟರೂ ಅವರ ಶವಸಂಸ್ಕಾರ ಮಾಡಿಕೊಂಡು ಬರುತ್ತಿದ್ದೇವೆ. ಆದರೆ, ಇತ್ತೀಚೆಗೆ ಅನ್ಯ ಕೋಮಿನ ಜನರು ಈ ಜಾಗ ನಮಗೆ ಸೇರಿದ್ದು, ಹೀಗಾಗಿ ಮುಂದಿನ ದಿನಗಳಲ್ಲಿ ಈ ಜಾಗದಲ್ಲಿ ಶವ ಸಂಸ್ಕಾರ ಮಾಡದಂತೆ ನಮಗೆ ತಿಳಿಸಿದ್ದಾರೆ. ಇದರಿಂದ ನಮಗೆ ದಿಕ್ಕೇ ತೋಚದಂತಾಗಿದೆ ಎಂದು ಅಳಲು ತೋಡಿಕೊಂಡರು.

ಈಗಾಗಲೇ ಅವರು ನಮ್ಮ ಪೂರ್ವಿಕರ ಸಮಾಧಿಗಳನ್ನು ನಾಶಪಡಿಸಿ, ಸ್ಮಶಾನದ ಜಾಗವನ್ನು ಸಮತಟ್ಟು ಮಾಡಿದ್ದಾರೆ. ಇದರಿಂದ ನಮ್ಮ ಪೂರ್ವಿಕರ ಗುರುತು ಇಲ್ಲವಾಗಿದೆ ಎಂದು ದೂರಿದರು.

ಮುಂದಿನ ದಿನಗಳಲ್ಲಿ ಈ ಜಾಗದಲ್ಲಿ ಸುತ್ತುಗೋಡೆ ನಿರ್ಮಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಒಂದು ವೇಳೆ ಅಲ್ಲಿ ಸುತ್ತುಗೋಡೆ ನಿರ್ಮಾಣ ಮಾಡಿ ಸವಿತಾ ಸಮಾಜದವರು ಸೇರಿದಂತೆ ಇನ್ನಿತರ ಸಮುದಾಯದವರಿಗೆ ಶವಸಂಸ್ಕಾರಕ್ಕೆ ಅಲ್ಲಿ ಅವಕಾಶ ನೀಡದಿದ್ದರೇ ನಾವೆಲ್ಲ ಏನು ಮಾಡಬೇಕೆಂಬುದು ತಿಳಿಯದಾಗಿದೆ. ಹೀಗಾಗಿ, ಕೂಡಲೇ ಜಿಲ್ಲಾಡಳಿತ ಮಧ್ಯ ಪ್ರವೇಶಿಸಿ ಸವಿತಾ ಸಮಾಜದ ಸಮುದಾಯಕ್ಕೆ ನ್ಯಾಯ ಕಲ್ಪಿಸಬೇಕು. ಶತಮಾನಗಳಿಂದಲೂ ಶವ ಸಂಸ್ಕಾರ ಮಾಡಿಕೊಂಡು ಬರುತ್ತಿರುವ ಸ್ಥಳದಲ್ಲಿಯೇ ಮುಂದೆಯೂ ಶವ ಸಂಸ್ಕಾರ ಮಾಡಲು ಅವಕಾಶ ಮಾಡಿಕೊಡಬೇಕು. ಇದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಜಿಲ್ಲಾಡಳಿತ ನಮಗೆ ನೀಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಸವಿತಾ ಸಮಾಜದ ಜಿಲ್ಲಾಧ್ಯಕ್ಷ ವೆಂಕಟರಾಜು, ಗೌರವಾಧ್ಯಕ್ಷ ಮುದ್ದುಮಾದು, ಉಪಾಧ್ಯಕ್ಷ ರಂಗಸ್ವಾಮಿ, ತಾಲೂಕು ಅಧ್ಯಕ್ಷ ಬಸವಣ್ಣ, ಮುಖಂಡರಾದ ನಂಜದೇವರು, ನಿಂಗರಾಜು, ಚಂದ್ರಶೇಖರ್, ನಿಂಗಪ್ಪ, ಮಹದೇವ, ನಾಗೇಂದ್ರ, ನಾಗ, ಮಾದೇಶ, ಕುಮಾರ್, ನಂಜುಂಡಸ್ವಾಮಿ ಸೇರಿದಂತೆ ಸಮುದಾಯದ ಯುವಕರು ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ: ಉತ್ತಮ ಫಲಿತಾಂಶಕ್ಕೆ ಕಾಳಜಿ ವಹಿಸಿ



ಚಾಮರಾಜನಗರ, ಸೆ.16– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶಕ್ಕಾಗಿ ಶಿಕ್ಷಕರು ವಿಶೇಷ ಕಾಳಜಿ ವಹಿಸಿ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕು ಎಂದು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಗುಣಾತ್ಮಕ ಕಲಿಕೆ ಹಾಗೂ ಫಲಿತಾಂಶ ಸುಧಾರಣೆ ಸಂಬಂಧ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಮಾಲೋಚನಾ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆದು ಮುಂಬರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಉತ್ತಮ ಸಾಧನೆ ಮಾಡುವಂತಾಗಬೇಕು. ಇದಕ್ಕೆ ಪೂರಕವಾಗಿ ಶಿಕ್ಷಕರು ವಿದ್ಯಾರ್ಥಿಗಳ ಅಗತ್ಯತೆ ಮನಗಂಡು ಮಾರ್ಗದರ್ಶನ ನೀಡಬೇಕು ಎಂದರು.

ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಶಿಕ್ಷಕರು ಮುತುವರ್ಜಿ ವಹಿಸಬೇಕು. ವಿಶೇಷವಾಗಿ ಗಿರಿಜನ ಮಕ್ಕಳು, ನಿಧಾನ ಗತಿ ಕಲಿಕಾರ್ಥಿಗಳು ಹಾಗೂ ಶಾಲೆಗೆ ಗೈರು ಹಾಜರಾಗುವ ವಿದ್ಯಾರ್ಥಿಗಳು ಮುಖ್ಯವಾಹಿನಿಗೆ ಬರಲು ಆದ್ಯತೆ ನೀಡಬೇಕು. ಜಿಲ್ಲೆಯಲ್ಲಿ ಶಿಕ್ಷಣ, ಆರೋಗ್ಯ ಮತ್ತು ಮೂಲಸೌಕರ್ಯವನ್ನು ಆದ್ಯತೆ ಕ್ಷೇತ್ರಗಳೆಂದು ಪರಿಗಣಿಸಲಾಗಿದ್ದು, ಶಾಲೆಯ ಅಗತ್ಯತೆಗಳಿಗೆ ಸಂಬಂಧಿಸಿದ ಕ್ರಿಯಾಯೋಜನೆ ಸಿದ್ಧಪಡಿಸಿ, ಸಲ್ಲಿಸಬೇಕು ಎಂದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ಮಾತನಾಡಿ, ಶಿಕ್ಷಕರನ್ನು ಒಳಗೊಂಡಂತೆ ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳು ಕ್ರಿಯಾಯೋಜನೆ ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಜಿಲ್ಲೆಯ ಫಲಿತಾಂಶವು ರಾಜ್ಯದಲ್ಲಿ ಮೊದಲ 5ನೇ ಸ್ಥಾನದೊಳಗೆ ಬರುವಂತೆ ಕಾರ್ಯಪ್ರವೃತ್ತರಾಗಬೇಕು ಎಂದರು.

ಇದೇ ವೇಳೆ 2022ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಪಡೆದ 60 ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಡಯಟ್ ಪ್ರಭಾರ ಪ್ರಾಂಶುಪಾಲ ಯು. ಆರ್.ಲಿಂಗರಾಜೇ ಅರಸ್, ಶಿಕ್ಷಣಾಧಿಕಾರಿ ಮಲ್ಲಿಕಾರ್ಜುನ, ಇತರರಿದ್ದರು.

ಸೆ.27, ಸಾಮೂಹಿಕ ವಿವಾಹ: ಮ.ಬೆಟ್ಟಕ್ಕೆ ಸಿಎಂ ಭೇಟಿ

ಲೋಪದೋಷವಾಗದಂತೆ ಎಚ್ಚರ ವಹಿಸಿ: ಸರಸ್ವತಿ



ಹನೂರು, ಸೆ.16– ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸುತ್ತಿದ್ದು, ಯಾವುದೇ ಲೋಪದೋಷವಾಗದಂತೆ ಎಚ್ಚರಿಕೆ ವಹಿಸುವಂತೆ ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಸರಸ್ವತಿ ತಿಳಿಸಿದರು.

ತಾಲೂಕಿನ ಮಲೆ ಮಹದೇಶ್ವರಬೆಟ್ಟದ ನಾಗಮಲೆ ಭವನದಲ್ಲಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸೆ.27 ರಂದು ಮಲೆ ಮಹದೇಶ್ವರ ಬೆಟ್ಟದ ರಂಗಮಂದಿರದಲ್ಲಿ ಆಯೋಜಿಸಿರುವ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಪ್ರಾಧಿಕಾರದ ಅಧ್ಯಕ್ಷರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸುತ್ತಿರುವುದು ಸಂತಸದ ವಿಚಾರ. ಹಲವು ವರ್ಷಗಳಿಂದ ಸಾಮೂಹಿಕ ವಿವಾಹ ನಡೆಯುತ್ತಿದ್ದರೂ, ಇದೇ ಮೊಟ್ಟ ಮೊದಲ ಬಾರಿಗೆ ಸಾಮೂಹಿಕ ವಿವಾಹದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸುತ್ತಿರುವುದು ವಿಶೇಷ. ಹಾಗಾಗಿ ಕಾರ್ಯಕ್ರಮದಲ್ಲಿ ಯಾವುದೇ ಲೋಪದೋಷ ಆಗದಂತೆ ನಿಮಗೆ ನೀಡಿರುವ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಕಾರ್ಯಕ್ರಮ ಯಶಸ್ವಿಗೆ ಸಹಕರಿಸಬೇಕು ಎಂದರು.

ಮುಖ್ಯಮಂತ್ರಿಗಳು ಪೂಜೆಗೆ ಆಗಮಿಸಿದಾಗ ವೀರಗಾಸೆ, ಡೊಳ್ಳು ಕುಣಿತ ಪೂರ್ಣಕುಂಭ ಮೇಳದೊಂದಿಗೆ ಅದ್ಧೂರಿ ಸ್ವಾಗತ ಕೋರಬೇಕು. ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ಶಿಷ್ಟಾಚಾರ ಪಾಲನೆ ಮಾಡಬೇಕು. ಮುಖ್ಯಮಂತ್ರಿಗಳು ಕ್ಷೇತ್ರಕ್ಕೆ ಬರುವುದರಿಂದ ಭಕ್ತಾದಿಗಳು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಹಾಗಾಗಿ ಪೊಲೀಸ್ ಇಲಾಖೆ ವತಿಯಿಂದ ಸೂಕ್ತ ಬಂದೋಬಸ್ತ್ ಕಲ್ಪಿಸಲು ಪತ್ರ ಬರೆಯುವುದಾಗಿ ತಿಳಿಸಿದರು.

ವಿಶೇಷ ಸಿಹಿ ಭೋಜನ: ಸಾಮೂಹಿಕ ವಿವಾಹದಲ್ಲಿ ವಧು–ವರರ ಸಂಬಂಧಿಕರು, ನೆಂಟರು, ಶ್ರೀಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ಸಿಹಿ ಊಟ ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕು. ಎಷ್ಟೇ ಭಕ್ತರು ಬಂದರೂ ಸಿಹಿ ಊಟ ನೀಡಲು ನಮ್ಮ ಸಿಬ್ಬಂದಿ ಕಾರ್ಯಪ್ರವೃತ್ತರಾಗಬೇಕು ಎಂದರು.

ಸಂಪೂರ್ಣ ಪ್ಲಾಸ್ಟಿಕ್ ನಿಷೇಧಿಸಿ: ಶ್ರೀ ಮಲೆ ಮಹದೇಶ್ವರ ಬೆಟ್ಟವನ್ನು ಈಗಾಗಲೇ ಪ್ಲಾಸ್ಟಿಕ್ ಮುಕ್ತ ಪ್ರದೇಶವನ್ನಾಗಿ ಘೋಷಣೆ ಮಾಡಲಾಗಿದೆ. ಆದರೂ ಪ್ಲಾಸ್ಟಿಕ್ ಬಳಕೆ ಕಂಡುಬರುತ್ತಿದೆ. ಆದ್ದರಿಂದ ಪಿಡಿಓ ಹಾಗೂ ನಮ್ಮ ಅಧಿಕಾರಿಗಳ ಸಹಕಾರ ಪಡೆದು ಸಂಪೂರ್ಣ ಪ್ಲಾಸ್ಟಿಕ್ ನಿಷೇಧ ಮಾಡಬೇಕು. ಟೆಂಡರ್ ಪಡೆದಿರುವ ಮಳಿಗೆದಾರರು ಲಾಡು ಮಾರಾಟ ಮಾಡದಂತೆ ಈಗಾಗಲೇ ಸೂಚಿಸಿದ್ದೇನೆ. ಆದರೂ ಲಾಡು ಮಾರಾಟ ಮಾಡುತ್ತಿದ್ದಾರೆ. ಇಂಥವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಂಡು ಟೆಂಡರ್ ರದ್ದು ಮಾಡುವುದಾಗಿ ಎಚ್ಚರಿಕೆ ನೀಡಿದರು.

ರಸ್ತೆ ಬದಿ ವ್ಯಾಪಾರ ಮಾಡುವವರು ಎಲ್ಲೆಂದರಲ್ಲಿ ವ್ಯಾಪಾರ ಮಾಡಬಾರದು. ನೀವು ಮನವಿ ನೀಡಿದರೆ ನಿಗದಿತ ಸ್ಥಳ ಗುರುತಿಸಿ ಕೊಡುತ್ತೇವೆ. ಅಲ್ಲಿಯೇ ವ್ಯಾಪಾರ ಮಾಡಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದರು.

ಸಭೆಯಲ್ಲಿ ಪ್ರಾಧಿಕಾರದ ಉಪ ಕಾರ್ಯದರ್ಶಿ ಚಂದ್ರಶೇಖರ್, ಲೆಕ್ಕಾಧೀಕ್ಷಕ ನಾಗೇಶ್, ಸಿಬ್ಬಂದಿಗಳಾದ ಮಹದೇವಸ್ವಾಮಿ, ನಾಗರಾಜು, ಜನಾರ್ಧನ್, ಎಂ.ಸ್ವಾಮಿ, ಕೆ.ಮಹದೇವಸ್ವಾಮಿ, ಪಿಡಿಓ ಕಿರಣ್ ಸೇರಿದಂತೆ ಇನ್ನಿತರರಿದ್ದರು.

ಕುಂದು ಕೊರತೆ ಸಭೆ

ಚಾಮರಾಜನಗರ, ಸೆ.16– ಜಿಲ್ಲಾ ಮಟ್ಟದ ವಿಕಲಚೇತನರ ಕುಂದು ಕೊರತೆ ಸಭೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸೆ.20 ರಂದು ಮಧ್ಯಾಹ್ನ 2.30ಕ್ಕೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆಡಿಪಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.


ಜಿಲ್ಲೆಯ ವಿಶೇಷಚೇತನರು ಸಭೆಯ ಸದುಪಯೋಗ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಚೇರಿ (ದೂ:08226–223688, 224688) ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಗುಂಡ್ಲುಪೇಟೆ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

ಚಾಮರಾಜನಗರ, ಸೆ.16– ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಗುಂಡ್ಲುಪೇಟೆ ತಾಲೂಕು ಮಟ್ಟದ ದಸರಾ ಕ್ರೀಡಾಕೂಟವನ್ನು ಸೆ.19 ರಂದು ಬೆಳಗ್ಗೆ 10 ಗಂಟೆಗೆ ಗುಂಡ್ಲುಪೇಟೆಯ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ಕಾರ್ಯಕ್ರಮ ಉದ್ಘಾಟಿಸುವರು. ಪುರಸಭಾ ಸದಸ್ಯ ಜಿ.ಎಸ್.ಕಿರಣ್, ತಹಸೀಲ್ದಾರ್ ಟಿ.ರಮೇಶ್ ಬಾಬು, ತಾಪಂ ಇಓ ರಾಮಲಿಂಗಯ್ಯ, ಬಿಇಓ ರಾಜಶೇಖರ್, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಮಲ್ಲನಾಯಕ ಭಾಗವಹಿಸುವರು.

ನಂಜುಂಡಪ್ಪ ನಿಧನ



ಚಾಮರಾಜನಗರ, ಸೆ.16– ನಗರದ ರಾಮಸಮುದ್ರ ಹಳ್ಳದ ಬೀದಿ ನಿವಾಸಿ ನಂಜುಂಡಪ್ಪ(77) ಶುಕ್ರವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸಂಜೆ ರಾಮಸಮುದ್ರದ ಹರಳುಕೋಟೆ ರಸ್ತೆಯಲ್ಲಿರುವ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಜೆಡಿಎಸ್ ಸೇರ್ಪಡೆ

ಕಾಂಗ್ರೆಸ್ ಮಣಿಸಲು ಕೊನೆಗೂ ಒಂದಾಗಿವೆ. ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಇಂಡಿಯಾ ಒಕ್ಕೂಟವು ಮೇಲುಗೈ ಸಾಧಿಸುತ್ತಿರುವ ಸಂದರ್ಭದಲ್ಲೇ ದೇವೇಗೌಡರು ಎನ್‌ಡಿಎ ಕೂಟದ ಜತೆ ಕೈ ಜೋಡಿಸುತ್ತಿರುವುದು ಬಿಜೆಪಿ ನಾಯಕರಿಗೆ ಒಂದಷ್ಟು ಬಲ ತಂದಂತಿದೆ. ಕಳೆದ ಎರಡು ದಿನಗಳ ಹಿಂದೆ ದೆಹಲಿಯಲ್ಲಿ ನಡೆದ ಬಿಜೆಪಿಯ ಸಂಸದೀಯ ಮಂಡಳಿ ಸಭೆಯಲ್ಲಿ ಜೆಡಿಎಸ್ ಒಕ್ಕೂಟಕ್ಕೆ ಸೇರುತ್ತಿರುವ ಬಗ್ಗೆ ಬಹಳ ಚರ್ಚೆ ನಡೆದಿದೆ. ದೇವೇಗೌಡರ ಬಗ್ಗೆ ಅತ್ಯಂತ ಗೌರವ ಇಟ್ಟುಕೊಂಡಿರುವ ಪ್ರಧಾನಿ ಅವರು, ತಾವೇ ಅಂದಿನ ಸಮಾರಂಭದಲ್ಲಿದ್ದು, ಮೈತ್ರಿಯ ಉದ್ದೇಶಗಳನ್ನು ಬಹಿರಂಗಪಡಿಸುವುದಾಗಿ ಸಭೆಯಲ್ಲಿ ತಿಳಿಸಿದ್ದಾರೆ. ಅಷ್ಟೇ ಅಲ್ಲ, ಈ ಸಮಾರಂಭ ಇಡೀ ರಾಷ್ಟ್ರದಲ್ಲಿ ಇಂಡಿಯಾ ವಿರುದ್ಧ ಅಲ್ಲೋಲ ಕಲ್ಲೋಲ ಸೃಷ್ಟಿಸುವಂತಿರಬೇಕು. ನಾವು ಕೋಮುವಾದಿಯಲ್ಲ ಎಂಬ ಕಾರಣಕ್ಕೆ ರೈತ ನಾಯಕರಾದ ಗೌಡರು ನಮ್ಮೊಂದಿಗೆ ಕೈ ಜೋಡಿಸುತ್ತಿದ್ದಾರೆ ಎಂಬುದನ್ನು ಬಿಂಬಿಸೋಣ ಎಂದು ಹೇಳಿದ್ದಾರೆ.

ಗೌಡರು ಕೂಡ ಇಂಡಿಯಾಗೂ ಮೊದಲು ಇದ್ದ ಯುಪಿಎ ಒಕ್ಕೂಟದಿಂದ ಹೊರಬಂದು ಎನ್‌ಡಿಎ ಕೈಸೇರುತ್ತಿರುವುದಕ್ಕೆ ಕಾರಣವೇನು ಎಂಬುದನ್ನು ಬಹಿರಂಗಪಡಿಸಲಿದ್ದಾರೆ. ಅಷ್ಟೇ ಅಲ್ಲ, ಮೋದಿ ಅವರು ಪ್ರಧಾನಿಯಾಗಿ ಹತ್ತು ವರ್ಷಗಳ ಕಾಲ ಭ್ರಷ್ಟಾಚಾರ ಮುಕ್ತ ಆಡಳಿತ ಮತ್ತು ವಿಶ್ವದಲ್ಲಿ ರಾಷ್ಟ್ರ ತಲೆ ಎತ್ತುವಂತೆ ಮಾಡಿರುವುದು. ಅಲ್ಲದೆ, ಗಮನಾರ್ಹ ವಿವಿಧ ಅಭಿವೃದ್ಧಿ ಕಾರ್ಯಗಳು ರಾಷ್ಟ್ರದ ಹಿತಕ್ಕೆ ಪೂರಕವಾಗಿರುವುದರ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಲಿದ್ದಾರೆ.

ಈ ಹಿಂದೆ ಬಿಜೆಪಿಯನ್ನು ಎಷ್ಟೇ ವಿರೋಧ ಮಾಡಿದ್ದರೂ ಮೋದಿ ಅವರ ಬಗ್ಗೆ ಎಂದೂ ಅಪಸ್ವರ ಎತ್ತಿರಲಿಲ್ಲ. ಅವರೂ ಕೂಡ ಗೌಡರ ಬಗ್ಗೆ ಅಷ್ಟೇ ಅಭಿಮಾನಪೂರ್ವಕ ವಿಶ್ವಾಸವನ್ನು ಹೊಂದಿದ್ದಾರೆ. ಕುಮಾರಸ್ವಾಮಿ ಅವರು, ಬಿಜೆಪಿ ಜತೆ ಈ ಹಿಂದೆಯೇ ಕೈ ಜೋಡಿಸಲು ಹತ್ತು ಹಲವು ಬಾರಿ ಪ್ರಯತ್ನ ನಡೆಸಿದ್ದರೂ ತಮ್ಮ ಕುಟುಂಬದವರ ವಿರೋಧದಿಂದ ಸಾಧ್ಯವಾಗಿರಲಿಲ್ಲ. ಕಳೆದ ಚುನಾವಣೆಯಲ್ಲಿ ಅಲ್ಪಸಂಖ್ಯಾತರು ಸಾರಾಸಗಟಾಗಿ ದೂರ ಸರಿದ ನಂತರ ಬಿಜೆಪಿ ಜತೆ ಕೈ ಜೋಡಿಸುವ ಗಟ್ಟಿ ಮನಸ್ಸು ಮಾಡಿ ಮಾತುಕತೆ ನಡೆಸಿದ್ದರು. ಇದಾದ ನಂತರ ದೇವೇಗೌಡರು, ಪುತ್ರನ ರಾಜಕೀಯ ಚಾಣಾಕ್ಷ ನೀತಿಗೆ ತಲೆದೂಗಿದ್ದಲ್ಲದೆ, ತಾವೇ ಖುದ್ದಾಗಿ ದೆಹಲಿಗೆ ತೆರಳಿ ಬಿಜೆಪಿ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಿ ವೇದಿಕೆ ಸಿದ್ಧಪಡಿಸಿ ಹಿಂದಿರುಗಿದ್ದರು. ಗೌಡರು ಹಸಿರು ನಿಶಾನೆ ತೋರಿದ ನಂತರವಷ್ಟೇ ಬಿಜೆಪಿ ಮತ್ತು ಮೋದಿ ಅವರು ಮೈತ್ರಿಯ ಸಮಾರಂಭವನ್ನು ಇಂಡಿಯಾ ಕೂಟಕ್ಕೆ ಒಂದು ಅಸ್ತ್ರವಾಗಿ ಪ್ರಯೋಗಿಸಲು ವೇದಿಕೆ ಅಣಿಗೊಳಿಸಿದ್ದಾರೆ.

ಕದ್ದು ಮುಚ್ಚಿ ಕಾವೇರಿ ನೀರು

ಕೇಬಿಳಿಸಿ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ ಕುಡಿಯುವ ನೀರಿಗೆ ತೀವ್ರ ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಪ್ರತಾಪ್ ಸಿಂಹ ಎಚ್ಚರಿಸಿದರು.

ಪ್ರಧಾನ ಮಧ್ಯಸ್ಥಿಕೆ ಸಾಧ್ಯವೇ ಇಲ್ಲ: ಕಾವೇರಿ ವಿಚಾರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಧ್ಯಸ್ಥಿಕೆ ಸಾಧ್ಯವೇ ಇಲ್ಲ. ಕೇಂದ್ರ ಸರ್ಕಾರಕ್ಕೂ ಕಾವೇರಿ ವಿವಾದಕ್ಕೂ ಸಂಬಂಧವೇ ಇಲ್ಲ. ಕಾವೇರಿ ವಿವಾದವನ್ನು ಬಗೆಹರಿಸುವ ಅಧಿಕಾರ ಕಾವೇರಿ ನೀರು ನಿಯಂತ್ರಣ ಸಮಿತಿ(ಸಿಎಂಆರ್‌ಸಿ) ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ)ಕ್ಕೆ ಇದೆ. ಇದರಿಂದ ಪ್ರಧಾನಮಂತ್ರಿ ಮಧ್ಯಸ್ಥಿಕೆ ಸಾಧ್ಯವೇ ಇಲ್ಲ. ಕಾಂಗ್ರೆಸ್ ಪಕ್ಷದ ಮನಮೋಹನ್ ಸಿಂಗ್ ಪ್ರಧಾನಮಂತ್ರಿ ಆಗಿದ್ದರೂ ಕಾವೇರಿ ವಿವಾದದಲ್ಲಿ ಮಧ್ಯಸ್ಥಿಕೆ ವಹಿಸಲು ಆಗುವುದಿಲ್ಲ. ರಾಜಕೀಯದ ಬಗ್ಗೆ ಸಣ್ಣ ಪ್ರಜ್ಞೆ ಇದ್ದ ಯಾರೂ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಿ ಎಂದು ಹೇಳುವುದಿಲ್ಲ ಎಂದು ಗೇಲಿ ಮಾಡಿದರು.

ಈಗ ಕಾವೇರಿ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಆದೇಶ ನೀಡಿದೆ. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಆಕ್ಷೇಪಣಾ ಅರ್ಜಿ ಸಲ್ಲಿಸಬೇಕು. ಕಾವೇರಿ ಜಲಾನಯನ ಪ್ರದೇಶ ಹಾಗೂ ಅಣೆಕಟ್ಟುಗಳ ವಾಸ್ತವ ಸ್ಥಿತಿ ಕುಡಿಯುವ ನೀರಿನ ಅವಶ್ಯಕತೆ ಬಗ್ಗೆ ಸುಪ್ರೀಂಕೋರ್ಟ್ ನಲ್ಲಿ ಸಮರ್ಥ ವಾದ ಮಾಡಬೇಕು. ಅದು ಬಿಟ್ಟು ಎಲ್ಲದಕ್ಕೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಧ್ಯ ಪ್ರವೇಶಿಸಲಿ ಎಂದು ಎಳೆದು ತರುವುದಲ್ಲ ಎಂದು ಪ್ರತಾಪ್ ಸಿಂಹ ಕಾಂಗ್ರೆಸ್ ನಾಯಕರಿಗೆ ತಿರುಗೇಟು ನೀಡಿದರು.

ಇಂಡಿಯಾ ಮೈತ್ರಿ ಕೂಟದಲ್ಲಿರುವ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಬೆಂಗಳೂರಿಗೆ ಬಂದಾಗ ಸಿದ್ದರಾಮಯ್ಯ ಅದ್ದೂರಿ ಸ್ವಾಗತ ಕೋರಿದರು. ಮುಂಬೈನಲ್ಲಿ ಕೂಡ ಜೊತೆಯಾಗಿದ್ದರು. ಹೀಗಿರುವಾಗ ಸಿದ್ದರಾಮಯ್ಯ ಅವರು ಸ್ಟಾಲಿನ್‌ಗೆ ಫೋನ್ ಮಾಡಿ ಕಿರಿಕ್ ಮಾಡಬೇಡಪ್ಪಾ ಎಂದು ಹೇಳಬಹುದಲ್ಲ. ಈ ಮೂಲಕ ಸಿದ್ದರಾಮಯ್ಯ ಸ್ಟಾಲಿನ್ ಜೊತೆ ಮಾತನಾಡಿದರೆ ಸಮಸ್ಯೆ ಬಗೆಹರಿಯಬಹುದಲ್ಲವೆ? ಎಂದು ಪ್ರಶ್ನಿಸಿದರು. ಈ ಕೆಲಸವನ್ನು ಮಾಡುವುದನ್ನು ಬಿಟ್ಟು ಸಿದ್ದರಾಮಯ್ಯ ಅವರು ಎಲ್ಲಾ ವಿಚಾರಕ್ಕೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಎಳೆದು ತರುವುದಲ್ಲ ಎಂದು ಪ್ರತಾಪ್ ಸಿಂಹ ಸಲಹೆ ನೀಡಿದರು.

ಅಮಾಯಕ ದನಗಾಹಿ ಬಲಿ

ಕಾರ್ಖಾನೆ ಬಳಿ ರಸ್ತೆ ಬದಿ ಕುಳಿತಿದ್ದರು. ಸಂಜೆ 4.30ರ ಸುಮಾರಿನಲ್ಲಿ ನಂಬರ್ ಪ್ಲೇಟ್ ಇಲ್ಲದ ಬೈಕ್‌ನಲ್ಲಿ ತನ್ನ ಸ್ನೇಹಿತನನ್ನು ಕೂರಿಸಿಕೊಂಡು ಸೈಯ್ಯದ್ ಐವಾನ್, ವ್ಹೀಲಿಂಗ್ ಮಾಡುತ್ತಿದ್ದ. ನಿಯಂತ್ರಣ ತಪ್ಪಿದ ಬೈಕ್ ರಸ್ತೆ ಬದಿ ಕುಳಿತಿದ್ದ ಗುರುಸ್ವಾಮಿ ಮತ್ತು ಗೋವಿಂದರಾಜು ಅವರ ಮೇಲೆ ಹರಿದಿದೆ. ಸಾರ್ವಜನಿಕರು ತೀವ್ರವಾಗಿ ಗಾಯಗೊಂಡಿದ್ದ ಇಬ್ಬರೂ ದನಗಾಹಿಗಳು ಹಾಗೂ ಸಣ್ಣಪುಟ್ಟ ಗಾಯಗಳಾಗಿದ್ದ ಸೈಯ್ಯದ್ ಐವಾನ್‌ನನ್ನು ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದಾರೆ. ಮಾರ್ಗಮಧ್ಯೆ ಗುರುಸ್ವಾಮಿ ಸಾವನ್ನಪ್ಪಿದರೆ, ಗೋವಿಂದರಾಜುವಿಗೆ ನಂಜನಗೂಡು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆಆರ್ ಆಸ್ಪತ್ರೆಗೆ ರವಾನಿಸಲಾಗಿದೆ. ಸೈಯ್ಯದ್ ಐವಾನ್ ಬಂಧಿಸಿದ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 304ರಡಿ (ಉದ್ದೇಶಪೂರ್ವಕವಲ್ಲದ ಕೊಲೆ) ಪ್ರಕರಣ ದಾಖಲಿಸಿಕೊಂಡು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಇದೇ ಸೈಯ್ಯದ್ ಐವಾನ್ ಕಳೆದ ತಿಂಗಳು ಮೈಸೂರು ನಗರದಲ್ಲಿ ಸ್ಕೂಟರ್ ಮೂಲಕ ವ್ಹೀಲಿಂಗ್ ಮಾಡಿದ ದೃಶ್ಯವನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿರುವುದನ್ನು ಗಮನಿಸಿದ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ಈತನನ್ನು ಬಂಧಿಸಿ ಪ್ರಕರಣ ದಾಖಲಿಸಿದ್ದರು. ಜಾಮೀನಿನ ಮೇಲೆ ಹೊರ ಬಂದ ನಂತರವೂ ತನ್ನ ಚಾಳಿ ಬಿಡದ ಈತ ದನಗಾಹಿಯೊಬ್ಬನ ಸಾವಿಗೆ ಕಾರಣವಾಗಿದ್ದಾನೆ.

ಭಾರತ–ಶ್ರೀಲಂಕಾ ಸೆಣಸಾಟ

ಗೆಲ್ಲಲು ಎದುರು ನೋಡುತ್ತಿದ್ದರೆ, ಶ್ರೀಲಂಕಾ 6ನೇ ಬಾರಿ ಪ್ರಶಸ್ತಿ ಗೆಲ್ಲಲು ತಂತ್ರಗಾರಿಕೆ ನಡೆಸಿದೆ. ಇನ್ನು ಲಂಕಾ ವಿರುದ್ಧದ ಫೈನಲ್ ಪಂದ್ಯಕ್ಕೆ ಬಾಂಗ್ಲಾದೇಶ ವಿರುದ್ಧದ ಪಂದ್ಯಕ್ಕೆ ವಿಶ್ರಾಂತಿ ಪಡೆದಿದ್ದ ವಿರಾಟ್ ಕೊಹ್ಲಿ, ಹಾರ್ದಿಕ್ ಪಾಂಡ್ಯ, ಜಸ್‌ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್ ಹಾಗೂ ಕುಲ್ದೀಪ್ ಯಾದವ್ ತಂಡಕ್ಕೆ ಮರಳಲಿದ್ದಾರೆ.

ಟೂರ್ನಿಯಲ್ಲಿ ನಾಯಕ ರೋಹಿತ್ ಶರ್ಮಾ, ಶುಭ್‌ಮನ್ ಗಿಲ್, ಕೊಹ್ಲಿ, ಕೆ.ಎಲ್.ರಾಹುಲ್, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ ಸೇರಿದಂತೆ ಭಾರತದ ಬ್ಯಾಟ್ಸ್‌ಮನ್‌ಗಳು ಉತ್ತಮ ಲಯದಲ್ಲಿದ್ದರೆ, ಬೂಮ್ರಾ, ಸಿರಾಜ್, ರವೀಂದ್ರ ಜಡೇಜಾ, ಕುಲದೀಪ್ ಯಾದವ್ ಒಳಗೊಂಡ ಬೌಲಿಂಗ್ ಪಡೆ ಸಹ ಭರ್ಜರಿ ಪ್ರದರ್ಶನ ನೀಡುತ್ತಿದೆ. ಮತ್ತೊಂದೆಡೆ ಪಾಕಿಸ್ತಾನ ಬಗ್ಗುಬಡಿದು ಫೈನಲ್ ಪ್ರವೇಶಿಸಿರುವ ಶ್ರೀಲಂಕಾ ಫೈನಲ್ ಪಂದ್ಯದಲ್ಲಿ ಭಾರತವನ್ನು ಸೋಲಿಸಿ ಮತ್ತೊಮ್ಮೆ ಚಾಂಪಿಯನ್ ಆಗುವತ್ತ ಮುಖ ಮಾಡಿದೆ. ತಂಡದ ಪರ ಪಥುಮ ನಿಸಾಂಕ, ದಿಮುತ್ ಕರುಣಾರತ್ನೆ, ಕುಶಾಲ್ ಮೆಂಡಿಸ್, ಸದೀರ ಸಮರವಿಕ್ರಮ, ಚರಿತಾ ಅಸಲಂಕ ಲಂಕಾ ಪರ ಭರ್ಜರಿ ಆಟವಾಡುತ್ತಿದ್ದು, ದುನಿತ್ ವೆಲ್ಲಾಳಗೆ, ಕಸೂನ್ ರಜಿತ. ಮತೀಶ ಪತಿರಣ ಬೌಲಿಂಗ್ ವಿಭಾಗದ ಪ್ರಮುಖ ಅಸ್ತ್ರವಾಗಿದ್ದು, ಇನ್ನು ಗಾಯಗೊಂಡಿರುವ ಸ್ಪಿನ್ನರ್ ಮಹೇಶ್ ತೀಕ್ಷಣ ಫೈನಲ್ ಪಂದ್ಯದಿಂದ ಹೊರಬಿದ್ದಿದ್ದಾರೆ.

ಭಾರತ ಸಂಭಾವ್ಯ ಆಟಗಾರರು: ರೋಹಿತ್ ಶರ್ಮಾ(ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಕೆಎಲ್ ರಾಹುಲ್(ವಿ.ಕೀ), ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್/ಶಾರ್ದೂಲ್ ಠಾಕೂರ್/ವಾಷಿಂಗ್ಟನ್ ಸುಂದರ್, ಕುಲ್‌ದೀಪ್ ಯಾದವ್, ಜಸ್‌ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್.

ಶ್ರೀಲಂಕಾ ಸಂಭಾವ್ಯ ಆಟಗಾರರು: ಪಥುಮ ನಿಸಾಂಕ, ದಿಮುತ್ ಕರುಣಾರತ್ನೆ, ಕುಶಾಲ್ ಮೆಂಡಿಸ್ (ವಿ.ಕೀ), ಸದೀರ ಸಮರವಿಕ್ರಮ, ಚರಿತಾ ಅಸಲಂಕ, ಧನಂಜಯ ಡಿ ಸಿಲ್ವಾ, ದಸೂನ್ ಶಾನಕ (ನಾಯಕ), ದುನಿತ್ ವೆಲ್ಲಾಳಗೆ, ಸಹನ್ ಅರಚ್ಚಿಗೆ, ಕಸೂನ್ ರಜಿತ. ಮತೀಶ ಪತಿರಣ

ಮಳೆಯಿಂದ ಪಂದ್ಯ ರದ್ದಾದರೆ ವಿನ್ನರ್ ನಿರ್ಧಾರ ಹೇಗೆ?

ಭಾರತ ಹಾಗೂ ಶ್ರೀಲಂಕಾ ನಡುವಣ ಫೈನಲ್ ಪಂದ್ಯಕ್ಕೆ ಮೀಸಲು ದಿನವನ್ನು ನಿಗದಿಪಡಿಸಲಾಗಿದೆ. ಸೆ.17ರಂದು ಭಾನುವಾರ ಫೈನಲ್ ಪಂದ್ಯದಲ್ಲಿ ಫಲಿತಾಂಶ ಮೂಡಿಬಂದಿಲ್ಲವಾದರೆ, ಮೀಸಲು ದಿನವಾದ ಸೋಮವಾರ ಪಂದ್ಯವನ್ನು ಮುಂದುವರಿಸಲಾಗುತ್ತದೆ. ಒಂದು ವೇಳೆ ಮೀಸಲು ದಿನವೂ ಮಳೆ ಅಡ್ಡಿಪಡಿಸಿ ಪಂದ್ಯದಲ್ಲಿ ಫಲಿತಾಂಶ ಬಂದಿಲ್ಲವಾದರೆ, ಆಗ ಎರಡೂ ತಂಡಗಳನ್ನು ಜಂಟಿ ಚಾಂಪಿಯನ್ಸ್ ಎಂದು ಘೋಷಿಸಲಾಗುತ್ತದೆ.


ಸೆ.19ರಿಂದ ಮೈಸೂರಲ್ಲಿ ರಾಷ್ಟ್ರೀಯ ಮಕ್ಕಳ ರಂಗೋತ್ಸವ

●ರಂಗಾಯಣ ಮಾಜಿ ನಿರ್ದೇಶಕ ಪ್ರಸನ್ನ, ಉಪ ನಿರ್ದೇಶಕಿ ನಿರ್ಮಲ ಮಠಪತಿ ಪೋಸ್ಟರ್ ಬಿಡುಗಡೆ ●ವಿದ್ಯಾರ್ಥಿಗಳಲ್ಲಿ ರಂಗಭೂಮಿಯತ್ತ ಆಸಕ್ತಿ ಮೂಡಿಸುವ ಪ್ರಯತ್ನ

ಮೈಸೂರು, ಸೆ.16(ಜಿಎ)–ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಹಾಗೂ ರಂಗಾಯಣದ ಸಂಯುಕ್ತಾಶ್ರಯದಲ್ಲಿ ಇದೇ ಸೆ. 19 ರಿಂದ 24ರವರೆಗೆ ನಗರದ ವಿವಿಧೆಡೆ ರಾಷ್ಟ್ರೀಯ ಮಕ್ಕಳ ರಂಗೋತ್ಸವ ಆಯೋಜಿಸಲಾಗಿದ್ದು, ಈ ನಿಟ್ಟಿನಲ್ಲಿ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಂಗಾಯಣದ ಮಾಜಿ ನಿರ್ದೇಶಕ ಪ್ರಸನ್ನ ಹಾಗೂ ರಂಗಾಯಣದ ಉಪ ನಿರ್ದೇಶಕಿ ನಿರ್ಮಲ ಮಠಪತಿ ಅವರು ಭಿತ್ತಿಪತ್ರ ಬಿಡುಗಡೆಗೊಳಿಸಿದರು.

ಈ ವೇಳೆ ಪ್ರಸನ್ನ ಮಾತನಾಡಿ, ಈ ಮಕ್ಕಳ ರಂಗೋತ್ಸವವನ್ನು ರಾಷ್ಟ್ರದಲ್ಲಿ ಇದೇ ಮೊದಲ ಬಾರಿ ಆಯೋಜಿಸಲಾಗಿದೆ. ದೇಶದಾದ್ಯಂತ ಸುಮಾರು 40 ತಂಡಗಳು, ದೇಶ ವಿದೇಶಗಳಿಂದ ವಿವಿಧ ತಜ್ಞರು ಆಗಮಿಸಿ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲಿದ್ದಾರೆ. ನಾಟಕಗಳಿಗೂ ಸಮಾಜಕ್ಕೂ ದೊಡ್ಡ ನಂಟಿದೆ. ಇಂದು ಮಕ್ಕಳ ಶಿಕ್ಷಣ ಮೊಬೈಲ್‌ನಲ್ಲಿ ಅಡಗಿದೆ. ಇದೇ ವೇಳೆ ಕನ್ನಡ ರಂಗಭೂಮಿ ಸಹ ಪ್ರೇಕ್ಷಕರನ್ನು ಕಳೆದುಕೊಂಡಿದೆ. ಸಿನಿಮಾ, ಧಾರಾವಾಹಿಗಳಿಂದಾಗಿ ರಂಗಭೂಮಿ ಅನಾಥವಾದಂತಾಗಿದೆ ಹೀಗಾಗಿ ಶೈಕ್ಷಣಿಕ ರಂಗಭೂಮಿಯೇ ಇದಕ್ಕೆಲ್ಲ ಪರಿಹಾರವಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ರಂಗಭೂಮಿ ಮೂಲಕ ಆಸಕ್ತಿ ಮೂಡಿಸಿದಲ್ಲಿ ಅವರಲ್ಲಿನ ಸೃಜನಾತ್ಮಕತೆ, ಕಲ್ಪನಾಶಕ್ತಿ ಬೆಳೆಯಲಿದೆ. ಸಂಸ್ಕೃತಿ, ಭಾಷೆ ಕಲಿಕೆಯೂ ಆಗಲಿದೆ. ಹೀಗಾಗಿ ಈ ನಾಟಕೋತ್ಸವ ಆಯೋಜಿಸಲಾಗಿದೆ ಎಂದರು.

ಸೆ.19 ರಿಂದ 24ರವರೆಗೂ 6 ದಿನಗಳ ಕಾಲ ಮೈಸೂರು ನಗರದಲ್ಲಿ, ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯು 'ರಾಷ್ಟ್ರೀಯ ಮಕ್ಕಳ ರಂಗೋತ್ಸವ' ವನ್ನು



ಆಯೋಜಿಸಿದೆ. ದೊಡ್ಡವರು ಮಕ್ಕಳಿಗಾಗಿ ಅಭಿನಯಿಸುವ ನಾಟಕಗಳು, ಮಕ್ಕಳೇ ಮಕ್ಕಳಿಗಾಗಿ ಅಭಿನಯಿಸುವ ನಾಟಕಗಳು, ಪುಸ್ತಕ ಮೇಳ, ಶೈಕ್ಷಣಿಕ ರಂಗಭೂಮಿ ಸಮಾವೇಶ, ಮಕ್ಕಳ ಸಾಹಿತ್ಯ ಕುರಿತು ವಿಚಾರ ವಿನಿಮಯ ಹಾಗೂ ಭಿತ್ತಿಚಿತ್ರ ಪ್ರದರ್ಶನಗಳು ನಡೆಯಲಿವೆ.

ಉದ್ಘಾಟನೆ: ಈ ಉತ್ಸವದ ಒಂದೊಂದು ದಿನವನ್ನು ಮಕ್ಕಳ ಸಾಹಿತ್ಯ ಹಾಗೂ ರಂಗಭೂಮಿಯಲ್ಲಿ ಕೆಲಸ ಮಾಡಿರುವ ಒಬ್ಬರ ನೆನಪಿನಲ್ಲಿ ನಡೆಸಲಿದ್ದೇವೆ. ಜಿ.ಪಿ. ರಾಜರತ್ನಂ, ಸಿ.ಜಿ. ಕೃಷ್ಣಸ್ವಾಮಿ, ಎ.ಎಸ್. ಮೂರ್ತಿ, ಪ್ರಭುಶಂಕರ, ವೈದೇಹಿ, ಟಿ.ಪಿ. ಕೈಲಾಸಂ ಹಾಗೂ ಶ್ರೀಕಂಠೇಶ ಗೌಡ ಹೆಸರನ್ನು ಕ್ರಮವಾಗಿ ಸೆ.18 ರಿಂದ 24 ರವರೆಗೆ ಇಡಲಾಗಿದೆ. ಸೆ.18 ರಂದು ಹಾರ್ಡ್ವಿಕ್ ಶಾಲೆಯ ಆವರಣದಲ್ಲಿರುವ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ಆವರಣದಲ್ಲಿ ಮಧ್ಯಾಹ್ನ 3.30ಕ್ಕೆ ಹಿರಿಯ ಸರೋದ್ ವಾದಕರಾದ ಪಂಡಿತ್ ರಾಜೀವ್ ತಾರಾನಾಥ್ ಅವರು ರಾಷ್ಟ್ರೀಯ ಮಕ್ಕಳ ರಂಗೋತ್ಸವಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಸೆ.19 ರಂದು ಬೆಳಗ್ಗೆ 11 ಗಂಟೆಗೆ ಕಿರುರಂಗಮಂದಿರದಲ್ಲಿ ಇಮೇಜಸ್ ಆಫ್ ಇಮ್ಯಾಜಿನೇಷನ್ ಕಲಾ ಪ್ರದರ್ಶನಕ್ಕೆ ಹೆಸರಾಂತ ಕಲಾವಿದ ಹರ್ಷ ಚಾಲನೆ ನೀಡಲಿದ್ದಾರೆ. ಸಂಜೆ 5 ಕ್ಕೆ ಮೈಸೂರಿನ ಕಿರುರಂಗಮಂದಿರದ ನಾಟಕೋತ್ಸವದ ಉದ್ಘಾಟನೆಯನ್ನು ಹಿರಿಯ ರಂಗಕರ್ಮಿ ಹಾಗೂ ಶೈಕ್ಷಣಿಕ ರಂಗಭೂಮಿ ತಜ್ಞರಾದ ಮೋಹನ್ ಅಗಾಶೆಯವರು ನಡೆಸಿಕೊಡಲಿದ್ದಾರೆ. ಅಂದಿನಿಂದ ಕಿರುರಂಗಮಂದಿರದಲ್ಲಿ ಪ್ರತಿದಿನ ಮಧ್ಯಾಹ್ನ 3.30 ಮತ್ತು ಸಂಜೆ 7ಕ್ಕೆ ದೊಡ್ಡವರು ಮಕ್ಕಳಿಗಾಗಿ ಅಭಿನಯಿಸುವ ನಾಟಕಗಳು ಪ್ರದರ್ಶನಗೊಳ್ಳಲಿವೆ. ಪ್ರಮುಖವಾಗಿ ಮಕ್ಕಳ ಕಲಿಕಾ ವಿಧಾನದ ಮೇಲೆ ಕೇಂದ್ರೀಕೃತವಾಗಿರುವ 'ತೊತ್ತೊಚಾನ್' ಹಿಂದಿ ನಾಟಕ, ಮಹೀಂದ್ರ ಎಕ್ಸಲೆನ್ಸ್ ಅವಾರ್ಡ್‌ನಲ್ಲಿ ಅತಿ ಹೆಚ್ಚು ಪ್ರಶಸ್ತಿಗಳನ್ನು ಗಳಿಸಿರುವ ಮಾರ್ವಾರಿ ಭಾಷೆಯ 'ಹುಂಕಾರೊ' ನಾಟಕ, ಕನ್ನಡದ 'ಕುಪ್ಪಳ್ಳಿಪುಟ್ಟ' ಹೀಗೆ 21 ನಾಟಕಗಳು ಮಕ್ಕಳಿಗಾಗಿ ಪ್ರದರ್ಶನಗೊಳ್ಳಲಿವೆ ಎಂದರು.

ಅಂಧ ಮಕ್ಕಳ ನಾಟಕ : ಅಂದು ರಂಗಾಯಣದ ಲಂಕೇಶ್ ಗ್ಯಾಲರಿಯಲ್ಲಿ ಮಧ್ಯಾಹ್ನ 12 ಕ್ಕೆ ಅಂತಾರಾಷ್ಟ್ರೀಯ ನಾಟಕದ ಭಿತ್ತಿಚಿತ್ರ ಪ್ರದರ್ಶನವನ್ನು ಹಿರಿಯ ಕಲಾವಿದರಾದ ದ್ವಾರಕನಾಥ್ ಉದ್ಘಾಟಿಸಲಿದ್ದಾರೆ. ಸಂಜೆ 6.30ಕ್ಕೆ ಭೂಮಿಗೀತದ ನಾಟಕೋತ್ಸವದ ಉದ್ಘಾಟನೆಯನ್ನು ಮಾಜಿ ಸಚಿವೆ ರಾಣಿಸತೀಶ್ ಮಾಡಲಿದ್ದಾರೆ. ಪ್ರತಿ ದಿನ ಮಧ್ಯಾಹ್ನ 3–00 ಹಾಗೂ ಸಂಜೆ 6–30 ಕ್ಕೆ ಮಕ್ಕಳು ಮಕ್ಕಳಿಗಾಗಿ ಅಭಿನಯಿಸುವ ನಾಟಕಗಳು ಪ್ರದರ್ಶನಗೊಳ್ಳಲಿದ್ದು, ಸೆ.23ರಂದು ಸಂಜೆ 6.30ಕ್ಕೆ ಮೈಸೂರಿನ ಅಂಧ ಮಕ್ಕಳು ಅಭಿನಯಿಸುತ್ತಿರುವ ಕನ್ನಡದ 'ನೀಲಿ ಕುದುರೆ' ವಿಶೇಷವಾಗಿರುತ್ತದೆ. 24 ರಂದು 'ವೀರ ಅಭಿಮನ್ಯು' ಮಕ್ಕಳ ಯಕ್ಷಗಾನ ಪ್ರದರ್ಶನವು ರಂಜಿಸಲಿದೆ. ರಾಮಕೃಷ್ಣನಗರದ ನಟನ ರಂಗಶಾಲೆಯಲ್ಲಿ ಸೆಪ್ಟೆಂಬರ್ 22 ರಿಂದ 24 ರವರೆಗೆ ಮಧ್ಯಾಹ್ನ 3–00 ಮತ್ತು ಸಂಜೆ 6–30 ಕ್ಕೆ ಪ್ರದರ್ಶನಗಳಿವೆ ಎಂದು ವಿವರಿಸಿದರು.

ವಿಚಾರ ಸಂಕಿರಣ : ಹೆಸರಾಂತ ರಂಗಕರ್ಮಿಗಳು ಭಾಗಿ

ಸೆ.20, 21 ರಂದು ಬೆಳಗ್ಗೆ 10 ಗಂಟೆಗೆ ದಾಸ್‌ಪ್ರಕಾಶ್ ಪ್ಯಾರಡೈಸ್ ಹೋಟೆಲ್‌ನಲ್ಲಿ ಮಕ್ಕಳ ರಂಗಭೂಮಿ ಕುರಿತಾದ 'ರಾಷ್ಟ್ರೀಯ ಕೊಲೋಕ್ವಿಯಮ್' ನಡೆಯಲಿದೆ. ಸ್ವೀಡನ್‌ನ ಶೈಕ್ಷಣಿಕ ರಂಗಭೂಮಿ ತಜ್ಞರಾದ ಲೀನ ಫ್ರೆಡೆಲ್, ಲಿಸ್ ಹೆಲ್‌ಸ್ಟ್ರೋಮ್ ಸ್ವೆನಿಂಗ್‌ಸನ್, ಝಾಕ್ ಒಯಾಹ್ ಅವರು ಮುಖ್ಯವಾಗಿ ಭಾಗವಹಿಸಲಿದ್ದು, ಈ ವಿಚಾರ ವಿನಿಮಯಕ್ಕೆ ದೇಶದ ಹೆಸರಾಂತ ರಂಗಕರ್ಮಿಗಳು ಹಾಗೂ ಶಿಕ್ಷಕರು ಪ್ರತಿನಿಧಿಗಳಾಗಿ ಭಾಗಿಯಾಗಲಿದ್ದಾರೆ.

ಸೆ.23, 24 ರಂದು ಬೆಳಗ್ಗೆ 11ಕ್ಕೆ ಭೂಮಿಗೀತದಲ್ಲಿ ಕನ್ನಡದಲ್ಲಿ 'ಮಕ್ಕಳ ನಾಟಕ ಸಾಹಿತ್ಯ' ಕುರಿತ ವಿಚಾರ ಸಂಕಿರಣ ನಡೆಯಲಿದ್ದು, ಕೆ. ಮರುಳಸಿದ್ದಪ್ಪ ಅವರು ಅಧ್ಯಕ್ಷತೆ ವಹಿಸುವರು ಹಾಗೂ ರಾಜೇಂದ್ರ ಚೆನ್ನಿ ಆಶಯ ನುಡಿ ಆಡಲಿದ್ದಾರೆ. ಅದೇ ದಿನ ಬೆಳಗ್ಗೆ 10.30 ಕ್ಕೆ ರಂಗಾಯಣದ ಶ್ರೀರಂಗ ಸಭಾಂಗಣದಲ್ಲಿ ಮಕ್ಕಳಿಗಾಗಿ 'ಕಥೆ ಕೇಳೋಣ ಬನ್ನಿ' ಕಾರ್ಯಕ್ರಮದ ಉದ್ಘಾಟನೆಯನ್ನು ಗೀತ ರಾಮಾನುಜಂ ನಡೆಸಿಕೊಡುವರು ಹಾಗೂ ಅಧ್ಯಕ್ಷತೆಯನ್ನು ಹಿರಿಯ ರಂಗಕರ್ಮಿ ರಾಮೇಶ್ವರಿವರ್ಮ ವಹಿಸುವರು.

ಸೆ.23, 24ರಂದು ಬೆಳಗ್ಗೆ 11ರಿಂದ ನಗರದ ಸರಸ್ವತಿಪುರಂನಲ್ಲಿರುವ ಪಾರಂಪರಿಕ ಕಟ್ಟಡ (ರಮ್ಯಾ ರೆಸ್ಟೋರೆಂಟ್ ಎದುರು)ದಲ್ಲಿ ಮಕ್ಕಳಿಗಾಗಿ 'ಕಥೆ ಕೇಳೋಣ ಬನ್ನಿ' ಹಾಗೂ ಭಿತ್ತಿಚಿತ್ರ ಪ್ರದರ್ಶನ ಇರುತ್ತದೆ. ಇದಲ್ಲದೇ ಪುಸ್ತಕ ಮೇಳ, ಕಲಾ ಪ್ರದರ್ಶನ ಕಿರುರಂಗಮಂದಿರದ ಗ್ಯಾಲರಿಯಲ್ಲಿ ಸೆ.23 ಮತ್ತು 24 ರಂದು ಏರ್ಪಡಿಸಲಾಗಿರುತ್ತದೆ ಎಂದು ತಿಳಿಸಿದರು.

ಸೆ.24ರಂದು ಸಂಜೆ 6.30ಕ್ಕೆ ರಂಗಾಯಣದ ಕಿರುರಂಗ ಮಂದಿರದಲ್ಲಿ ರಂಗೋತ್ಸವದ ಸಮಾರೋಪ ಸಮಾರಂಭ ಆಯೋಜಿಸಿದ್ದು, ಸುಧಾಕರ್ ರಾವ್ ಉಪಸ್ಥಿತರಿರಲಿದ್ದಾರೆ. ಟಿಕೆಟ್ ದರ 200 ರೂ. ಇದ್ದು, 1 ಸಾವಿರ ರೂ. ಸೀಸನ್ ಟಿಕೆಟ್ ಪಡೆದುಕೊಂಡರೆ 7 ನಾಟಕ ವೀಕ್ಷಿಸಲು ಅವಕಾಶವಿದ್ದು, ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ9108800127, www.indiantheatrefoundation.com ಸಂಪರ್ಕಿಸಿ ಎಂದು.

ಯೋಗ ವಿಭೂಷಣ, ಭೂಷಣ ಪ್ರಶಸ್ತಿ ಪ್ರದಾನ



ಮೈಸೂರು, ಸೆ.16(ಜಿಎ)–ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಹಿಮಾಲಯ ಪ್ರತಿಷ್ಠಾನದ ವತಿಯಿಂದ ಶಿಕ್ಷಕರ ದಿನಾಚರಣೆಯ ಅಂಗವಾಗಿ ಜಿಲ್ಲಾ ಪತ್ರಕರ್ತರ ಭವನದಲ್ಲಿ ಯೋಗ ಶಿಕ್ಷಕರಿಗೆ ಯೋಗ ವಿಭೂಷಣ, ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಮೈಸೂರು ಸರ್ವಪಲ್ಲಿ ರಾಧಾಕೃಷ್ಣನ್ ಅವರಂಥ ಶಿಕ್ಷಣ ತಜ್ಞರಿಗೂ, ಯೋಗ ಧುರೀಣ ಬಿ.ಕೆಎಸ್. ಅಯ್ಯಂಗಾರ್ ಅವರಿಗೂ ತಾಣವಾಗಿತ್ತು ಇದು ರಾಜಯೋಗಿ ನಾಲ್ವಡಿಯವರ ನಗರವಾಗಿದ್ದು, ಇಲ್ಲಿ ಯೋಗಕ್ಕೆ ಸದಾ ಪ್ರೋತ್ಸಾಹವಿರಬೇಕು. ಪ್ರಾಚೀನ ಜ್ಞಾನವಾದ ಯೋಗವನ್ನು ಪಸರಿಸುವಲ್ಲಿ ಶಿಕ್ಷಕರ ಕೊಡುಗೆ ಅಪಾರ ಎಂದರು.

ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ನಮ್ಮ ಯೋಗ ಸಂಸ್ಕೃತಿಯನ್ನು ಪಾಶ್ಚಾತ್ಯರು ಅನುಸರಿಸುತ್ತಿದ್ದಾರೆ. ಆದರೆ, ನಾವುಗಳೇ ಹಿಂದೆ ಬಿದ್ದಿದ್ದೇವೆ. ಇನ್ನಾದರೂ ಈ ಬಗ್ಗೆ ಜಾಗೃತರಾಗಿ, ಆರೋಗ್ಯ ವೃದ್ಧಿಯತ್ತ ಸಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪಿ.ಆರ್.ವಿಶ್ವನಾಥ ಶೆಟ್ಟಿಗೆ ಯೋಗ ವಿಭೂಷಣ ಹಾಗೂ ಡಿ.ಎಸ್ ಶ್ರೀನಿವಾಸ್, ಶಕುಂತಲಾ ಸುರೇಶ್, ಕೆ.ಎಲ್. ಪುರುಷೋತ್ತಮ್, ವಿಜಯಶ್ರೀ, ಕೆ.ನಾಗಲಕ್ಷ್ಮಿ ಅವರಿಗೆ ಯೋಗ ಭೂಷಣ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಈ ವೇಳೆ ಖ್ಯಾತ ವ್ಯಂಗ್ಯಚಿತ್ರಕಾರ ಎಂ.ವಿ.ನಾಗೇಂದ್ರ ಬಾಬು, ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷ ಚಂದನ್ ಗೌಡ ಸಮಾಜ ಸೇವಕಿ ಶ್ರೀವಿದ್ಯಾ, ಮೈಸೂರು ಯೋಗ ಒಕ್ಕೂಟ ಗೌರವ ಕಾರ್ಯದರ್ಶಿ ಬಿ.ಪಿ.ಮೂರ್ತಿ, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಯೋಗಪ್ರಕಾಶ್ ಮತ್ತು ಕಸಾಪ ಉಪಾಧ್ಯಕ್ಷ ಅನಂತು ಉಪಸ್ಥಿತರಿದ್ದರು.

ಸೆ.21ರಂದು ಜಿಲ್ಲಾ ಹಾಪ್ ಕಾಮ್ಸ್ ವಾರ್ಷಿಕ ಸಭೆ

ಮೈಸೂರು, ಸೆ.16– ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹ ಸಂಘದ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸೆ. 21 ರಂದು ಸಂಘದ ಅಧ್ಯಕ್ಷರಾದ ಎಂ.ಟಿ ಅಣ್ಣೇಗೌಡ ಅವರ ಅಧ್ಯಕ್ಷತೆಯಲ್ಲಿ ಮೈಸೂರು ಮೆಡಿಕಲ್ ಕಾಲೇಜಿನ ಅಮೃತ ಮಹೋತ್ಸವ ಭವನದ ಜೆ.ಕೆ ಗ್ರೌಂಡ್‌ನಲ್ಲಿ ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಮುಡಾ ಬಂದ್‌ಗೆ ಬಿಜೆಪಿ ಎಸ್‌ಸಿ ಮೋರ್ಚಾ ಆಗ್ರಹ



ಮೈಸೂರು, ಸೆ.16(ಜಿಎ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ(ಮುಡಾ) ಕಚೇರಿ ಮಧ್ಯವರ್ತಿಗಳು, ಡೆವಲಪರ್ಸ್‌ಗಳಿಂದಲೇ ತುಂಬಿ ತುಳುಕುತ್ತಿದ್ದು, ಮುಡಾ ಎಂಜಿನಿಯರ್‌ಗಳು ಹಾಗೂ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಹೀಗಾಗಿ ಮುಡಾ ಕಚೇರಿ ಬಂದ್ ಮಾಡಬೇಕೆಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಸಮಿತಿ ಸದಸ್ಯ ಕೂಡ್ಲೂರು ಆರ್. ಶ್ರೀಧರ್‌ಮೂರ್ತಿ ಆಗ್ರಹಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲಿ ನಿವೇಶನ ಮಾರಾಟದ ವೇಳೆ ಅಕ್ರಮ ನಡೆಯುತ್ತಿವೆ. ಪ್ರತಿ ಬಾರಿ ನಿವೇಶನ ನೀಡುವುದಾಗಿ ಸಾರ್ವಜನಿಕರಿಗೆ ತಿಳಿಸಿ ಹಣ ಕಟ್ಟಿಸಿಕೊಂಡರೂ ನೀಡುತ್ತಿಲ್ಲ. ಈಗ ಮುಡಾ ಬಗ್ಗೆ ಜನರಲ್ಲಿ ವಿಶ್ವಾಸ ಹೋಗಿದೆ ಆದ್ದರಿಂದ ಮುಡಾ ಎಂಬ ನಾಮಫಲಕ ತೆಗೆದು ರಿಯಲ್ ಎಸ್ಟೇಟ್ ಎಂಬ ನಾಮಫಲಕ ಹಾಕಬೇಕು. ಮಧ್ಯವರ್ತಿಗಳನ್ನು ನಿಯಂತ್ರಿಸಬೇಕು, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮೋರ್ಚಾ ಸದಸ್ಯರಾದ ನಾಗರಾಜು, ಪ್ರಭಾಕರ್, ಪುಟ್ಟಮಾದಯ್ಯ ಹಾಜರಿದ್ದರು.

ಗಾರ್ಮೆಂಟ್ ಸೇಲ್ಸ್ ಇಂದು ಕೊನೆ



ಮೈಸೂರು, ಸೆ. 16– ಇಲ್ಲಿಯ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಆಯೋಜಿಸಿರುವ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಗುಣಮಟ್ಟದ ಬ್ರ್ಯಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೇಳವು ನಾಳೆ (ಭಾನುವಾರ) ಕೊನೆಗೊಳ್ಳಲಿದೆ.

ಮಹಿಳೆಯರು, ಪುರುಷರು ಹಾಗೂ ಮಕ್ಕಳ ರೆಡಿಮೇಡ್ ಬಟ್ಟೆಗಳ ಮೇಲೆ ಭಾರಿ ರಿಯಾಯಿತಿ ನೀಡಲಾಗಿದೆ 10 ಸಾವಿರಕ್ಕಿಂತಲೂ ಮಿಗಿಲಾದ ವಿವಿಧ ಪ್ರಕಾರದ ಜೆಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್ಸ್, ಟಿ–ಶರ್ಟ್ಸ್, ಲೋವರ್ ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೋಗಳು ಕೇವಲ 150 ರೂ.ನಿಂದ 350 ರೂ.ವರೆಗೆ ಮಾರಾಟ ಮಾಡಲಾಗುತ್ತಿದೆ.

ಹೆಸರಾಂತ ಕಂಪನಿಗಳ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್, ಇಂಡಿಯನ್ ಟೆರೆನ್, ಇಂಡಿಗೋ ನೇಷನ್, ಡ್ಯಾನಿಯಲ್ ಹೆಕ್ಟರ್, ಬಫೆಲೋ, ಇಜೋಡ್, ಸೆಲ್ಯೂಲರ್‌ಗಳ ಜೀನ್ಸ್ ಪ್ಯಾಂಟ್ಸ್, ಕಾಟನ್ ಪ್ಯಾಂಟ್ಸ್, ಫಾರ್ಮಲ್ ಶರ್ಟ್ಸ್, ಟಿ–ಶರ್ಟ್ಸ್, ಲೋವರ್ ಇತ್ಯಾದಿಗಳು ಕೇವಲ 499 ರೂ.ನಿಂದ 999 ರೂ.ವರೆಗೆ ಲಭ್ಯವಿದೆ. ಬ್ರ್ಯಾಂಡೆಡ್ ಲೇಡಿಸ್ ಕುರ್ತಾ ಮತ್ತು ಪಾಶ್ಚಿಮಾತ್ಯ ಬಟ್ಟೆಗಳು ಬಿಬಾ, ಜ್ಯಾಕ್–ಜೋನಸ್, ವಿರೊಮೋಡಾ, ಎಬಾಪ್ ಕಂಪನಿಗಳ ಉತ್ಪನ್ನಗಳು ಕೇವಲ 200, 400 ಮತ್ತು 600 ರೂ.ಗಳಲ್ಲಿ ದೊರೆಯುತ್ತಿವೆ. ಆಕರ್ಷಕ ರಾಜಸ್ಥಾನ ರಾಯಲ್ ಪ್ರಿಂಟೆಡ್ ಬೆಡ್‌ಶೀಟ್ಸ್, ಪಿಲ್ಲೋ ಕವರ್, ಸೋಫಾ ಕವರ್ ಕೈಗೆಟುಕುವ ದರದಲ್ಲಿ ದೊರೆಯುತ್ತವೆ. ಲೇಡಿಸ್ ಮತ್ತು ಜೆಂಟ್ಸ್ ಅಂಡರ್ ಗಾರ್ಮೆಂಟ್ಸ್ ಕೇವಲ 60 ರೂ.ನಿಂದ 125 ರೂ.ವರೆಗೆ ಸಿಗುತ್ತವೆ. ಮೇಳಕ್ಕೆ ಭಾನುವಾರ ಕೊನೆಯ ದಿನವಾಗಿದ್ದು, ಗ್ರಾಹಕರು ಸದುಪಯೋಗಪಡಿಸಿಕೊಳ್ಳಲು ವ್ಯವಸ್ಥಾಪಕ ಗಜೇಂದ್ರ ಜಾಜಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಂದು ಮಹಿಳೆಯರಿಗೆ ಬಾಗಿನ ಸಮರ್ಪಣೆ

ಮೈಸೂರು, ಸೆ.16– ಗೌರಿ–ಗಣೇಶ ಹಬ್ಬ ಮತ್ತು ಪ್ರಧಾನ ಮಂತ್ರಿ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಜೀವಧಾರ ರಕ್ತನಿಧಿ ಕೇಂದ್ರ, ವಾರ್ಡ್ ನಂ.24 ಮಂಡಿ ಮೊಹಲ್ಲಾ ಹಿತರಕ್ಷಣಾ ವೇದಿಕೆ ವತಿಯಿಂದ ಸೆ.17 ರಂದು ಸಂಜೆ 4 ಗಂಟೆಗೆ ಲಷ್ಕರ್ ಮೊಹಲ್ಲಾದಲ್ಲಿರುವ ಶ್ರೀಮತಿ ಗುಣಾಭಾಯಿ ರುಕ್ಮಿಣಿ ಭಾಯಿ ಸಮುದಾಯ ಭವನದಲ್ಲಿ ಮಹಿಳೆಯರಿಗೆ ಬಾಗಿನ ನೀಡುವ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್. ಶ್ರೀವತ್ಸ, ಮೇಯರ್ ಶಿವಕುಮಾರ್ ಸೇರಿದಂತೆ ವಿವಿಧ ಮುಖಂಡರು ಭಾಗವಹಿಸಲಿದ್ದಾರೆ ಎಂದು ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಣದಿಂದ ಮಾತ್ರ ಜಾತಿ ವ್ಯವಸ್ಥೆ ತೊಡೆದು ಹಾಕುವುದು ಸಾಧ್ಯ

ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಅಭಿಮತ



ಮೈಸೂರು, ಸೆ.16(ಎಂಟಿವೈ)– ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿರುವ ಜಾತಿ ವ್ಯವಸ್ಥೆಯನ್ನು ತೊಡೆದು ಹಾಕಲು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ನುಲಿಯ ಚಂದಯ್ಯ ಜಯಂತಿ ಆಚರಣೆ ಸಮಿತಿಯ ವತಿಯಿಂದ ಶನಿವಾರ ಆಯೋಜಿಸಿದ್ದ ಶ್ರೀ ಶರಣ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಜಾತಿ ವ್ಯವಸ್ಥೆ ಅಪಾಯಕಾರಿಯಾಗಿ ಬೇರೂರಿದೆ ಇದರಿಂದ ಯಾವುದೇ ವ್ಯಕ್ತಿ ಎಷ್ಟೇ ಒಳ್ಳೆ ಕೆಲಸ ಮಾಡಿದರೂ, ಆತನನ್ನು ಜಾತಿಯಿಂದ ಅಳೆಯುವಂತಹ ದುಸ್ಥಿತಿ ನಮ್ಮಲ್ಲಿದೆ. ಸಾಧಕರನ್ನು ಜಾತಿಯಿಂದ ಗುರುತಿಸುವ ಕೆಟ್ಟ ಪರಿಸ್ಥಿತಿ ಇದೆ. ನಾವು ಯಾರೂ ಇಂತಹ ಜಾತಿಯಲ್ಲೇ ಹುಟ್ಟಬೇಕು ಎಂದು ಬಯಸುವುದಿಲ್ಲ. ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ. ಆದರೂ ಜಾತಿ ವ್ಯವಸ್ಥೆಯ ಕೆಟ್ಟ ಪರಿಸ್ಥಿತಿ ಸಮಾಜದಲ್ಲಿ ತಾರತಮ್ಯ ಹಾಗೂ ಅಸ್ಪೃಶ್ಯತೆಯನ್ನು ಬಿಂಬಿಸುತ್ತಿದೆ ಎಂದು ವಿಷಾದಿಸಿದರು.

ಕಾಯಕ ಸಮಾಜ ಪ್ರತಿನಿಧಿಸುವ ಅಂಬಿಗರ ಚೌಡಯ್ಯ, ನುಲಿಯ ಚಂದಯ್ಯ, ಸಮಗಾರ ಹರಳಯ್ಯ ಹಾಗೂ ಮಾದಾರ ಚೆನ್ನಯ್ಯ ಅವರಂತಹ ಹಲವು ಶರಣರು ಕಾಯಕದ ಶ್ರೇಷ್ಠತೆಯನ್ನು ಅರಿತು ಸಮಾಜದಲ್ಲಿ ತಮ್ಮ ಕಾಯಕಗಳಿಗೆ ಬೆಲೆಕೊಟ್ಟು ಜೀವಿಸಿದ್ದರಲ್ಲದೆ, ಸಮಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದರು ಎಂದರು.

ಸ್ವಾತಂತ್ರ್ಯ ನಂತರದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಆಡಳಿತದಲ್ಲಿ ಅಸಂಘಟಿತ ಸಮುದಾಯಗಳನ್ನು ಗುರುತಿಸಿ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಶೋಷಿತ ಸಮುದಾಯಗಳಿಗೆ ಮೀಸಲಾತಿ ವ್ಯವಸ್ಥೆ ಜಾರಿಗೊಳಿಸಿದರು ಎಂದ ಅವರು, ಅಸಂಘಟಿತ ಸಮಾಜಗಳು ಸಂಘಟಿತರಾಗಿ ಸಮುದಾಯದ ಬೇಡಿಕೆಯನ್ನು ಸರ್ಕಾರದ ಮುಂದಿಡುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ಮುಖ್ಯ ಭಾಷಣಕಾರ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಸಹಾಯಕ ಪ್ರಬಂಧಕ ನಳರಾಜ್ ಮಾತನಾಡಿ, ಕಳೆದ ಐದು ವರ್ಷಗಳ ಹಿಂದೆ ಜನರಿಗೆ ನುಲಿಯ ಚಂದಯ್ಯ ಅವರ ಪರಿಚಯ ವಿರಲಿಲ್ಲ. ಆದರೆ ಸರ್ಕಾರ ನುಲಿಯ ಚಂದಯ್ಯ ಜಯಂತಿ ಆಚರಣೆಯನ್ನು ಜಾರಿಗೆ ತಂದ ಮೇಲೆ ಚಂದಯ್ಯನವರ ಮಹತ್ವ ಜನರಿಗೆ ತಿಳಿಯುತ್ತಿದೆ. 1017ರಲ್ಲಿ ಬಿಜಾಪುರದಲ್ಲಿ ಜನಿಸಿದರೆಂದು ಹಾಗೂ ತಮಿಳುನಾಡಿನ ಕೈಕಿಣಿಯ ರಾಜ ಅಥವಾ ಸಾಮಂತರಾಗಿದ್ದರು. ನಂತರ ಕರ್ನಾಟಕಕ್ಕೆ ಬಂದರು ಎಂದು ಪುರಾವೆಗಳಲ್ಲಿ ಉಲ್ಲೇಖವಿದೆ. ಕಲ್ಯಾಣ ಎಂಬ ಪ್ರದೇಶದಲ್ಲಿ ಬಸವಣ್ಣನವರು ಸ್ಥಾಪಿಸಿದ್ದ ಅನುಭವ ಮಂಟಪದಲ್ಲಿ ನುಲಿಯ ಚಂದಯ್ಯನವರಿಗೂ ಸ್ಥಾನಮಾನವಿತ್ತು. ಬಸವಣ್ಣನವರ ಸಮಕಾಲೀನರಾದ ಚಂದಯ್ಯ ಅವರ ಕಾಯಕ ಹಗ್ಗ ಹೆಣೆಯುವುದು. ಆದ್ದರಿಂದಲೇ ಇವರನ್ನು ನುಲಿಯ ಚಂದಯ್ಯ ಎಂದು ಕರೆಯಲಾಗುತ್ತಿತ್ತು. ಡಾ.ಅಂಬೇಡ್ಕರ್ ಸಂಶೋಧನಾ ತಂಡದವರಿಗೆ ಚಂದಯ್ಯನವರ 48 ವಚನಗಳು ದೊರೆತಿದ್ದು, ವಚನಗಳು ಚಂದೇಶ್ವರ ಅನ್ನುವ ಹೆಸರಿನಲ್ಲಿ ರಚಿತವಾಗಿವೆ ಎಂದರು.

ಇದೇ ವೇಳೆ ಸಮುದಾಯ ಮುಖಂಡರು ನುಲಿಯ ಚಂದಯ್ಯ ಸಮುದಾಯದವರ ನಿಗಮ ಮಂಡಳಿ ರಚನೆ, ಸಮುದಾಯ ಭವನ ನಿರ್ಮಾಣ, ವಿದ್ಯಾರ್ಥಿ ನಿಲಯ ನಿರ್ಮಾಣ ಹಾಗೂ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರಜಾಪ್ರತಿನಿಧಿ ಸ್ಥಾನಮಾನಕ್ಕೆ ಅವಕಾಶ ನೀಡಬೇಕೆಂಬ ಬೇಡಿಕೆಯುಳ್ಳ ಮನವಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್ ಟಿ.ಕೆ, ನುಲಿಯ ಚಂದಯ್ಯ ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ಕೃಷ್ಣಶೆಟ್ಟಿ ಕಾರ್ಯದರ್ಶಿ ಮೋಹನ್ ರಾಜ್ ಸೇರಿದಂತೆ ವಿವಿಧ ಸಮುದಾಯದ ಮುಖಂಡರುಗಳು ಪಾಲ್ಗೊಂಡಿದ್ದರು.

ವಿಶ್ವಕರ್ಮರಿಗೆ ನಮೋನಮಃ



ಇಂದು 'ವಿಶ್ವಕರ್ಮ ಜಯಂತಿ' ತನ್ನಿಮಿತ್ತ ಈ ಪುಟ್ಟ ಲೇಖನ



ಭಾರತದ ಶ್ರೇಷ್ಠತೆಯ ಮಾತು ವಿಶ್ವಮಟ್ಟದಲ್ಲಿ ಚರ್ಚೆಯಾದಾಗಲೆಲ್ಲ, ಇಲ್ಲಿನ ಆಚಾರ-ವಿಚಾರ, ಸಂಸ್ಕೃತಿ, ವೇದ-ಉಪನಿಷತ್ತುಗಳು, ಭಗವದ್ಗೀತೆಗಳ ಉಲ್ಲೇಖ ಜ್ಞಾನದ ಔನ್ನತ್ಯವನ್ನು ಸಾರಿದರೆ, ನಮ್ಮ ದೇಶದ ಅಪೂರ್ವ **ಶಿಲ್ಪಕಲೆಯನ್ನು ಬಿಂಬಿಸುವ** ದೇವಾಲಯಗಳು ವಿದೇಶಿಗರನ್ನು ಮಂತ್ರಮುಗ್ಧರನ್ನಾಗಿಸಿರುವುದು ನಮ್ಮ ಹೆಗ್ಗಳಿಕೆ.

ನಮ್ಮ ಸುತ್ತಮುತ್ತಲೇ ಕಣ್ಣಾಡಿಸಿದರೆ, ಹಲವಾರು ಅದ್ಭುತ ರಚನೆಗಳು ನಮ್ಮನ್ನು ಅಚ್ಚರಿಗೊಳಿಸುತ್ತವೆ. ಬೇಲೂರಿನ ಶಿಲಾಬಾಲಿಕೆಯರು, ಶಿಲ್ಪ ವೈಭವ ಬಿಂಬಿಸುವ ಕಂಬಗಳು, ಛಾವಣಿ, ಗಾಳಿಯಲ್ಲಿ ಹಾರುತ್ತಿರುವಂತಿರುವ ಗರುಡಗಂಬ, ಹಳೇಬೀಡಿನ ನಂದಿ, ಹಂಪಿಯ ದೇವಾಲಯದ ಗೋಪುರ, ಅದರ ನೆರಳು ತಿರುಗುಮುರುಗಾಗಿ ಕಾಣುವ ವಿಸ್ಮಯ, ಶ್ರವಣಬೆಳಗೊಳದ ಭವ್ಯ ಗೊಮ್ಮಟ, ಬಾದಾಮಿಯ ಗುಹಾಂತರ ದೇವಾಲಯಗಳು. ಇವೆಲ್ಲಾ ನಾವು ನೋಡಿರುವ, ಕೇಳಿರುವ ನಮ್ಮದೇ ರಾಜ್ಯದ್ದಾದರೆ, ಪಕ್ಕದ ತಮಿಳುನಾಡಿನಲ್ಲಿ, ಚಿದಂಬರಂನ ನಟರಾಜ ದೇವಸ್ಥಾನ, ಗಂಗೈಕೊಂಡಚೋಳಪುರಂನ ಬೃಹದೀಶ್ವರ, ತಂಜಾವೂರು, ಮಧುರೈನ ಅದ್ಭುತ ದೇವಳಗಳು. ಆಂಧ್ರದ ಲೇಪಾಕ್ಷಿಯ ನಂದಿ. ಕೇರಳಕ್ಕೆ ಕಾಲಿಟ್ಟರೆ ತಿರುವನಂತಪುರಂನ ಅನಂತ ಪದ್ಮನಾಭ ದೇವಾಲಯ, ಗುರುವಾಯೂರಿನ ಕೃಷ್ಣನ ದೇವಸ್ಥಾನ. ಅಬ್ಬಾ. ದಕ್ಷಿಣದಿಂದ ಉತ್ತರಕ್ಕೆ ಹೋದರೆ. ಒಡಿಶಾದ ಪುರಿಯ ಜಗನ್ನಾಥ ಮಂದಿರ ಸೂರ್ಯ ದೇವಾಲಯ, ಕಾಶಿಯ ಅಸಂಖ್ಯ ಮಂದಿರಗಳು, ಚಾರ್ ಧಾಮ್‌ನಲ್ಲಿನ ಮಂದಿರಗಳು, ಗುಜರಾತ್‌ನ ಮೊಧೇರಾ. ಪಟ್ಟಿ ಮುಗಿಯುವುದೇ ಇಲ್ಲ.

ಇವೆಲ್ಲವನ್ನೂ ಇದೀಗ ಮತ್ತೆ ನೆನಪಿಸುವ ಸಂದರ್ಭ ಏಕೆ ಬಂತೆಂದರೆ, ಸೆಪ್ಟಂಬರ್ 17ರಂದು ನಾವು ವಿಶ್ವಕರ್ಮ ಜಯಂತಿಯನ್ನು ಆಚರಿಸುತ್ತಿದ್ದೇವೆ. ಈ ಎಲ್ಲ ಕಲಾಕುಸುರಿಗಳ ರೂವಾರಿಗಳಾದ ಶಿಲ್ಪಿಗಳ ಆರಾಧ್ಯ ದೈವ ವಿಶ್ವಕರ್ಮ. ಪುರಾಣಗಳಲ್ಲಿ ಈತನನ್ನು ಬ್ರಹ್ಮನ ಮಗನೆಂದು ಹೇಳಲಾಗುತ್ತದೆ. ಬಹಿಷ್ಮತಿ, ಸೂರ್ಯದೇವನ ಹೆಂಡತಿ ಸಂಜ್ಞಾ ಮತ್ತು ಚಿತ್ರಾಂಗದಾ ಇವನ ಹೆಣ್ಣುಮಕ್ಕಳು. ಮನು, ಮಾಯಾ, ತ್ವಷ್ಟ, ಶಿಲ್ಪಿ ಮತ್ತು ದೈವಜ್ಞ ಗಂಡು ಮಕ್ಕಳು. ಬ್ರಹ್ಮ ಜಗತ್ತನ್ನು ಸೃಷ್ಟಿಸಿಕೊಟ್ಟರೆ, ಅದನ್ನು ವಾಸಯೋಗ್ಯವನ್ನಾಗಿಸಿ ಸುಂದರಗೊಳಿಸಿಕೊಟ್ಟ ಕೀರ್ತಿ ದೇವಶಿಲ್ಪಿ ವಿಶ್ವಕರ್ಮನಿಗೆ ಸಲ್ಲುತ್ತದೆ. ಪುರಾಣಗಳು ಹೇಳುವ ಪ್ರಕಾರ, ಇಂದ್ರನಿಗೆ ಅಮರಾವತಿಯನ್ನು, ಶ್ರೀಕೃಷ್ಣನಿಗೆ ದ್ವಾರಕೆಯನ್ನು, ರಾವಣನ ಸ್ವರ್ಣಲಂಕೆಯನ್ನು ನಿರ್ಮಿಸಿದವನು ವಿಶ್ವಕರ್ಮನೇ. ಅದಲ್ಲದೆ, ದೇವತೆಗಳಿಗೆ ಅಗತ್ಯವಿರುವ ಆಯುಧಗಳು, ರಥಗಳು ಮತ್ತು ಇತರ ಯುದ್ಧೋಪಕರಣಗಳನ್ನೂ ವಿಶ್ವಕರ್ಮನೇ ತಯಾರಿಸಿಕೊಟ್ಟನೆಂಬ ಉಲ್ಲೇಖ ಪುರಾಣಗಳಲ್ಲಿ ದೊರಕುತ್ತದೆ. ಅಲ್ಲದೆ, ವಿಷ್ಣುವಿನ ಸುದರ್ಶನ ಚಕ್ರ, ಶಿವನ ತ್ರಿಶೂಲ ಮತ್ತು ರಾವಣನ ಪುಷ್ಪಕ ವಿಮಾನವೂ ವಿಶ್ವಕರ್ಮನದೇ ಸೃಷ್ಟಿ. ವಾಸ್ತುಶಾಸ್ತ್ರ ಪಿತಾಮಹ ಎಂದು ಪುರಾಣಗಳು ಇವನನ್ನು ಕರೆದರೂ, ಈ ಪ್ರಪಂಚದ ಪ್ರಪ್ರಥಮ ಇಂಜಿನಿಯರ್ ವಿಶ್ವಕರ್ಮ!

ಕುಶಲಕರ್ಮಿಗಳ ದೈವನೆಂದು ಕರೆಸಿಕೊಳ್ಳುವ ವಿಶ್ವಕರ್ಮನನ್ನು ಆರಾಧಿಸುವವರು, ಕಲ್ಲು, ಲೋಹ, ಚಿನ್ನ ಮತ್ತು ಮರಮುಟ್ಟುಗಳಿಂದ ಕಲಾಕೃತಿಗಳು,





ಆಭರಣಗಳು ಮತ್ತು ಗೃಹೋಪಯೋಗಿ ವಸ್ತುಗಳನ್ನು ತಯಾರಿಸುವವರು. ರಕ್ತಗತವಾಗಿ ಬಂದಿರುವ ಇವರ ಈ ಕೌಶಲ್ಯ ದೇಶದ ಗರಿಮೆಯನ್ನು ಹೆಚ್ಚಿಸಿದೆ. ಬೇಲೂರು ಹಳೇಬೀಡಿನ ಅದ್ಭುತ ದೇವಳಗಳನ್ನು ನಿರ್ಮಿಸಿದ ಸ್ಥಪತಿ ಜಕಣಾಚಾರಿ ಯಾರಿಗೆ ಗೊತ್ತಿಲ್ಲ. ಬೆಳಗ್ಗೆ ಎದ್ದು, ಸ್ನಾನಾದಿ ಕರ್ಮಗಳನ್ನು ಮಾಡಿ, ಒದ್ದೆ ಪಂಚೆಯಲ್ಲಿಯೇ ಕೆತ್ತನೆಗೆ ಕೂರುತ್ತಿದ್ದ ಜಕಣಾಚಾರಿ, ಪಂಚೆಯ ತೇವ ಆರುವವರೆಗೂ ಮಾತ್ರ ಕೆತ್ತನೆಯಲ್ಲಿ ತೊಡಗುತ್ತಿದ್ದ ಎಂಬುದು ದಂತಕತೆಯೇ ಆಗಿರಬಹುದು. ಆದರೆ ಶಿಲ್ಪಿಯ ಕೆಲಸವನ್ನು ಅವನು ತಪಸ್ಸಿನಂತೆ ಮಾಡುತ್ತಿದ್ದದ್ದನ್ನು ನೋಡಿ ಇಂತಹಾ ಕತೆ ಹುಟ್ಟಿರಬಹುದು. ಕಲೆಗಾರ ಅಳಿದರು, ಅವನ ಕಲೆ ಉಳಿಯುತ್ತದೆ ಎಂಬ ಮಾತಿನಂತೆ ಇಂದು ಅವನ ಕೃತಿ ನಮ್ಮ ಮುಂದಿದೆ. ಕರ್ನಾಟಕದಲ್ಲಿ ಸ್ಥಪತಿಗಳ ರೋಚಕ ಇತಿಹಾಸವೇ ಇದೆ. ಅದನ್ನು ಷ.ಶೆಟ್ಟರ್, ತಮ್ಮ ಸಂಶೋಧನಾ ಕೃತಿ, ಸ್ಥಪತಿಯಲ್ಲಿ ದಾಖಲಿಸಿದ್ದಾರೆ.


ಈ ಬಾರಿಯ ವಿಶ್ವಕರ್ಮ ಜಯಂತಿ ಕುಶಲಕರ್ಮಿಗಳಲ್ಲಿ ಹೊಸ ಹುರುಪನ್ನು ಮೂಡಿಸಿದೆ. 77ನೇ ಸ್ವಾತಂತ್ರ್ಯೋತ್ಸವದ ದಿನ ಕೆಂಪುಕೋಟೆಯಿಂದ ಭಾಷಣ ಮಾಡಿದ ಪ್ರಧಾನಮಂತ್ರಿ ಮೋದಿಯವರು, ಕುಶಲಕರ್ಮಿಗಳಿಗಾಗಿ ವಿಶ್ವಕರ್ಮ ಸ್ಕೀಂ ಅನ್ನು ಘೋಷಿಸಿದ್ದಾರೆ. ಕಲೆಯ ಮೂಲವೇ ಆಗಿರುವ ಇವರು, ಆರ್ಥಿಕವಾಗಿ ಹಿಂದುಳಿದಿರುವ ಜನಾಂಗವಾಗಿರುವ ಇವರನ್ನೊಳಗೊಂಡಂತೆ, ಇನ್ನೂ ಅನೇಕ ಕುಶಲಕರ್ಮಿಗಳಿಗೆ ಒಂದು ಲಕ್ಷದವರೆಗೂ ಸಾಲ ನೀಡುವ ಈ ಯೋಜನೆಯಿಂದ, ಇವರು ಇನ್ನಷ್ಟು ಸಬಲರಾಗಿ, ದೇಶದ ಕೀರ್ತಿಪತಾಕೆಯನ್ನು ಇನ್ನಷ್ಟು ಎತ್ತರಕ್ಕೆ ಹಾರಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

ಮಾಹಿತಿ: ಭಾರತದೆಲ್ಲೆಡೆ ವಿಶ್ವಕರ್ಮನಿಗಾಗಿ ದೇವಸ್ಥಾನಗಳು ಸ್ಥಾಪಿಸಲ್ಪಟ್ಟಿದ್ದಾವೆ. ಅತ್ಯಂತ ಹಳೆಯ ವಿಶ್ವಕರ್ಮ ದೇವಾಲಯ ಗುವಾಹಟಿಯಲ್ಲಿದೆ. 1965ರಲ್ಲಿ ಸ್ಥಾಪನೆಯಾದ ಈ ದೇವಸ್ಥಾನ ನೀಲಾಚಲ ಬೆಟ್ಟಗಳ ತಪ್ಪಲಿನಲ್ಲಿರುವ ಪುರಾಣಪ್ರಸಿದ್ಧ ಕಾಮಾಖ್ಯ ದೇವಾಲಯದ ಬಳಿಯಲ್ಲಿದೆ.



ಎಚ್.ನಿವೇದಿತಾ
ಮೈಸೂರು
9964038916








ಮಕ್ಕಳ ಚಿತ್ರಕಥೆ

ಈ ವಿಜ್ಞಾನ ಯುಗದಲ್ಲಿ ಇಂತಹ ಪುಸ್ತಕ ಓದುತ್ತೀರಾ..?

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಒಂದು ದಿನ, ಧೋತಿ ಮತ್ತು ಶಾಲು ಧರಿಸಿದ ಒಬ್ಬ ಮಹಾನುಭಾವರು ಚೆನ್ನೈನ ಸಮುದ್ರ ತೀರದಲ್ಲಿ ಕುಳಿತು ಭಗವದ್ಗೀತೆಯನ್ನು ಓದುತ್ತಿದ್ದರು.




ಆ ಸಮಯದಲ್ಲಿ ಒಬ್ಬ ಹುಡುಗ ಅವರ ಬಳಿಬಂದು ಕೇಳಿದ, "ಈ ವಿಜ್ಞಾನ ಯುಗದಲ್ಲಿ ನೀವು ಇಂದಿಗೂ ಇಂತಹ ಪುಸ್ತಕ ಓದುತ್ತೀರಾ..?". ನೋಡಿ, ಈ ಕ್ಷಣ ನಾವು ಚಂದ್ರನನ್ನು ತಲುಪಿದ್ದೇವೆ ಮತ್ತು ನೀವು ಈ ಗೀತೆ ಮತ್ತು ರಾಮಾಯಣದಲ್ಲಿ ಸಿಲುಕಿಕೊಂಡಿದ್ದೀರಿ".



ಆ ಮಹಾನುಭಾವರು ಹುಡುಗನನ್ನು ಕೇಳಿದರು, "ಗೀತೆಯ ಬಗ್ಗೆ ನಿನಗೆ ಏನು ಗೊತ್ತು?" ಹುಡುಗನು ಪ್ರಶ್ನೆಗೆ ಉತ್ತರಿಸಲಿಲ್ಲ. ಆದರೆ ಉತ್ಸಾಹದಿಂದ ಕೇಳಿದ "ಅದೆಲ್ಲಾ ಓದಿದ ಮೇಲೆ ಏನಾಗುತ್ತದೆ... ನಿಮಗೆ ಗೊತ್ತಾ..?. ನಾನು, ವಿಕ್ರಮ್ ಸಾರಾಭಾಯ್ ಸಂಶೋಧನಾ ಸಂಸ್ಥೆಯ ವಿದ್ಯಾರ್ಥಿ ಮತ್ತು ನಾನು ವಿಜ್ಞಾನಿ. ಈ ಗೀತೆ ನಿಷ್ಪ್ರಯೋಜಕ ಎಂದು ನನಗನಿಸಿದೆ".



ಹುಡುಗನ ಮಾತು ಕೇಳಿ ಆ ಮಹಾನುಭಾವರು ನಕ್ಕರು. ಅಷ್ಟರಲ್ಲಿ ಎರಡು ಕಾರುಗಳು ಬಂದು ಅವರ ಬಳಿ ನಿಂತವು. ಒಂದು ಕಾರಿನಿಂದ ಕೆಲವು ಕಪ್ಪು ಧಿರಿಸಿನ ಕಮಾಂಡೋಗಳು ಮತ್ತು ಇನ್ನೊಂದು ಕಾರಿನಿಂದ ಒಬ್ಬ ಸೈನಿಕ ಇಳಿದ. ಸೈನಿಕನ ವೇಷದಲ್ಲಿದ್ದ ವ್ಯಕ್ತಿ ಕಾರಿನ ಹಿಂಬಾಗಿಲು ತೆರೆದು, ಸೆಲ್ಯೂಟ್ ಹೊಡೆದು ನಿಂತ.



ಗೀತೆಯನ್ನು ಪಠಿಸುತ್ತಿದ್ದ ಮಹಾನುಭಾವರು ನಿಧಾನ ಗತಿಯಲ್ಲಿ ಕಾರು ಹತ್ತಿ ಕುಳಿತರು. ಇದನ್ನೆಲ್ಲಾ ನೋಡಿದ ಹುಡುಗ ಬೆಚ್ಚಿಬಿದ್ದ. ಇವರು ಯಾರೋ ಪ್ರಸಿದ್ಧ ವ್ಯಕ್ತಿಯಾಗಿರಬೇಕು ಎಂದು ಮನಸ್ಸಿನಲ್ಲಿ ಎನ್ನಿಸತೊಡಗಿತ್ತು. ಆ ಹುಡುಗನಿಗೆ ಯಾರನ್ನೂ ಕೇಳಲು ಸಾಧ್ಯವಾಗಲಿಲ್ಲ. ಕೊನೆ ಗಳಿಗೆಯಲ್ಲಿ ಕುತೂಹಲ ತಡೆಯಲಾಗದೆ ಅವರ ಬಳಿಗೇ ಓಡಿ ಬಂದು ಕೇಳಿದ, "ಸಾರ್....ನೀವು ಯಾರು...?".



ಆ ಸಂಭಾವಿತರು ಬಹಳ ಶಾಂತ ಧ್ವನಿಯಲ್ಲಿ ಹೇಳಿದರು "ನಾನು ವಿಕ್ರಮ್ ಸಾರಾಭಾಯ್". ಆ ಹುಡುಗ, ಬೆಚ್ಚಿ-ಬೆವರಿ ನಿಂತ. ಆ ಹುಡುಗ ಯಾರು ಗೊತ್ತೆ..?"ಡಾ. ಅಬ್ದುಲ್ ಕಲಾಮ್". ಆನಂತರ ಡಾ.ಕಲಾಮ್‌ರವರು "ಭಗವದ್ಗೀತೆ" ಓದಿದರು. ಜೊತೆಗೆ ರಾಮಾಯಣ, ಮಹಾಭಾರತಗಳನ್ನೂ ಓದಿದರು. ಈ ಗೀತೆಯನ್ನು ಓದಿದ ಪರಿಣಾಮವಾಗಿ ಜೀವನ ಪರ್ಯಂತ ಮಾಂಸಾಹಾರ ಸೇವಿಸಲಿಲ್ಲ. ಡಾ. ಕಲಾಂ ಅವರು ತಮ್ಮ ಆತ್ಮಚರಿತ್ರೆ "ಗೀತಾ ಎ ಸೈನ್ಸ್" ನಲ್ಲಿ ಈ ವಿಷಯ ಪ್ರಸ್ತಾಪಿಸಿದ್ದಾರೆ.



ವಾರಭವಿಷ್ಯ

17.9.2023 ರಿಂದ 23.9.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಸಿಂಹ, ಚಂದ್ರ-ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಕುಜ-ಕನ್ಯಾ, ಬುಧ-ಸಿಂಹ, ಗುರು-ಮೇಷ, ಶುಕ್ರ-ಕಟಕ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಯೋಚಿಸದೆ ಮಾಡಿದ ಕೆಲಸಗಳಿಂದ ನಷ್ಟ, ಪತ್ನಿಯೊಂದಿಗೆ ಹೊಂದಾಣಿಕೆಯ ಕೊರತೆ. ನಿಮಗೆ ಚಿಂತನಾ ಸಾಮರ್ಥ್ಯದ ಕೊರತೆ ಕಾಡಿಸಲಿದೆ. ವಾರದ ಉತ್ತರಾರ್ಧಕ್ಕೆ ಸರ್ಕಾರಿ ಕೆಲಸಗಳಲ್ಲಿ ಅನುಕೂಲವಾಗುವುದು. ವರಮಾನದಲ್ಲಿ ಏರಿಕೆಯನ್ನು ಕಾಣುವಿರಿ. ನೂತನ ವಸ್ತ್ರಾಭರಣ ಪ್ರಾಪ್ತಿ. ನೆಂಟರಿಷ್ಟರ ಸತ್ಕಾರಕ್ಕೆ ಧನವ್ಯಯ. ದೂರ ಪ್ರಯಾಣಗಳು ಸಂಭವಿಸುತ್ತದೆ.

ಶ್ರೀ ಗಣಪತಿಗೆ ಗರಿಕೆ ಸಮರ್ಪಿಸಿ. ಶುಭ ಸಂಖ್ಯೆ-8.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದ ಪೂರ್ವಾರ್ಧಕ್ಕೆ ಮನಸ್ಸಿಗೆ ಸ್ಥಿರತೆ ಇರದು. ಸಲ್ಲದ ವಿಷಯಗಳಿಗೆ ಹಣ ಪೋಲಾಗುವುದು. ನ್ಯಾಯಾಲಯ ವ್ಯವಹಾರಗಳು ನಿಮ್ಮ ಮನೋನುಕೂಲಕ್ಕಿಲ್ಲ. ನೆರೆಹೊರೆಯಲ್ಲಿ ಒಡನಾಟ ಚೆನ್ನಾಗಿರಲಿ. ವಾರಮಧ್ಯೆ ಬರಬೇಕಾದ ಹಣ ಕೈಸೇರುವುದು. ಬಂಧು ಮಿತ್ರರ ಮಿಲನ ಸಂತಸ ತರುವುದು. ಶ್ರೀಮತಿಯೊಂದಿಗೆ ಸೋತು ಗೆಲ್ಲಿ. ಸಜ್ಜನರ ಸಂಗದಿಂದ ವಾರಕ್ಕೆ ಗುಡ್ ಬೈ.

ಶ್ರೀದೇವಿ ಸ್ತುತಿ. ಶುಭ ಸಂಖ್ಯೆ-5.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದ ಆದಿಗೆ ಧಾರಾಳವಾಗಿ ಹಣದ ಗಳಿಕೆ ಆಗುವುದು. ಗುರುಕೃಪೆಯಿಂದ ಹಳೆಯ ದ್ವೇಷ, ವೈಷಮ್ಯಗಳು ಬಗೆಹರಿಯುವುದು. ಖರ್ಚು ಹೆಚ್ಚಾದ ಸಮಯಕ್ಕೆ ಕಾಣದ ಕೈಗಳ ಸಹಾಯ ದೊರೆಯುವುದು. ಮನೆಯಲ್ಲಿ ಮಂಗಳ ಕಾರ್ಯ ಜರುಗುವುದು. ವಿದ್ಯಾರ್ಥಿಗಳಿಗೆ ಪ್ರಶಂಸೆಯ ಸರಮಾಲೆ, ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ದೊರೆಯುವ ಸಾಧ್ಯತೆ ಇದೆ. ನೌಕರಿ ನಿಮಿತ್ತ ಪ್ರಯಾಣಕ್ಕೆ ತಯಾರಾಗಿರಿ.

ಶ್ರೀ ವಿಷ್ಣು ನಾಮಸ್ಮರಣೆ. ಶುಭ ಸಂಖ್ಯೆ-3.



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭ ಆಶಾದಾಯಕವಾಗಿದ್ದರೂ ನಿಮಗಿದು ಸತ್ವ ಪರೀಕ್ಷೆಯ ಕಾಲ. ವಿತ್ತ ಲಾಭ, ದೂರ ಪ್ರಯಾಣಗಳೂ ಉಂಟು. ಗುರು ಹಿರಿಯರಿಗೆ ಅಗೌರವ ತೋರದಿರಿ. ಪ್ರತಿ ಕೆಲಸವನ್ನೂ ತುಲನಾತ್ಮಕವಾಗಿ ಮಾಡಿ. ಅಷ್ಟಮ ಶನಿಯ ಕಾರಣ ಕೋಪ-ತಾಪಗಳನ್ನು ತ್ಯಜಿಸುವುದು ಶ್ರೇಯಸ್ಕರ. ನೌಕರಿ ಸ್ಥಳದಲ್ಲಿ ಹೆಚ್ಚಿನ ಒತ್ತಡವಿರುತ್ತದೆ. ವಾರಾಂತ್ಯಕ್ಕೆ ಪುಣ್ಯಕ್ಷೇತ್ರಕ್ಕೆ ಭೇಟಿ ನೀಡುವುದರಿಂದ ಮನಃಶಾಂತಿ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-4.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವ್ಯಾಪಾರ, ವ್ಯವಹಾರಗಳಲ್ಲಿ ಹೆಚ್ಚಿನ ಲಾಭವನ್ನು ಗಳಿಸುವಿರಿ. ಇಷ್ಟಪಟ್ಟ ವಸ್ತುಗಳ ಖರೀದಿ. ಉನ್ನತ ಅಧಿಕಾರಿಗಳ ಭೇಟಿಯಿಂದ ಕಾರ್ಯಸುಲಭ. ವಾರಮಧ್ಯೆ ಬಂಧು ಬಳಗದವರ ಒಡನಾಟದಿಂದ ಮನಸ್ಸಿಗೆ ಹರ್ಷ. ಚಿನ್ನ-ಬೆಳ್ಳಿ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರ ಹಾಗೂ ಲಾಭ ಗಳಿಕೆ. ಧರ್ಮಕಾರ್ಯಾಸಕ್ತಿ, ಜನ ಮೆಚ್ಚುಗೆಗೆ ಪಾತ್ರರಾಗುವಿರಿ. ಉಷ್ಣಜನಿತ ಕಾಯಿಲೆ ಕಾಡಬಹುದು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-1.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಹಣದ ತಾಪತ್ರಯ ಕಗ್ಗಂಟೆನಿಸಿ ನಂತರ ಪರಿಹಾರವಾಗುವುದು. ಇದು ನಿಮಗೆ ಚಟುವಟಿಕೆಗಳಿಂದ ಕೂಡಿದ ವಾರ. ಶ್ರೀಮತಿಯ ಸಲಹೆ ಸಹಕಾರಗಳಿಂದ ಉತ್ತಮ ಫಲ ದೊರೆಯುವುದು. ವಾಹನ ಖರೀದಿಯ ಹಂಬಲಕ್ಕೆ ಚಂದ್ರ ಗ್ರಹದ ಪುರಸ್ಕಾರವಿದೆ. ಹಳೆಯ ಮಿತ್ರರ ಭೇಟಿಯಿಂದ ಸಂತಸ ಹಾಗೂ ಮಿನಿ ಪಾರ್ಟಿಗಳು. ದುಡುಕಿನ ವಾಹನ ಚಾಲನೆ ಒಳ್ಳೆಯದಲ್ಲ.

ಶ್ರೀ ವೆಂಕಟೇಶ್ವರನಿಗೆ ತುಳಸಿಮಾಲೆ ಅರ್ಪಣೆ. ಶುಭ ಸಂಖ್ಯೆ-2.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಿತ್ತ ಲಾಭ, ಮಿತ್ರರ ಮಿಲನ, ಉತ್ತಮ ಸ್ತ್ರೀ ಸಂಗ. ಮನೆಯ ಹೊರಗೆ ನೂತನ ಉತ್ಸಾಹದಿಂದ ವೈಯಕ್ತಿಕ ಕೆಲಸಗಳನ್ನು ಪೂರ್ಣಗೊಳಿಸುತ್ತೀರಿ. ಗೃಹ ನಿರ್ಮಾಣ ಕಾರ್ಯಗಳು ವೇಗಗೊಳ್ಳುತ್ತವೆ. ನಿಮ್ಮ ದೀರ್ಘಕಾಲದ ಶ್ರಮವು ಗುರುಕೃಪೆಯಿಂದ ಫಲಪ್ರದವಾಗುತ್ತದೆ. ನಿರುದ್ಯೋಗಿಗಳಿಗೆ ಶುಭ ಸಂದೇಶ ಬರುವುದು. ವಾರದ ಕಡೆಗೆ ಆದಾಯದ ಮಾರ್ಗಗಳು ಕಡಿಮೆಯಾಗುತ್ತವೆ.


ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

'ಧೈರ್ಯಂ ಸರ್ವತ್ರ ಸಾಧನಂ' ಎಂಬ ಉಕ್ತಿಯಂತೆ ಈಗ ಅದನ್ನು ಅನುಸರಿಸುವ ಸಮಯ ಬಂದಿದೆ. ಇದು ನಿಮಗೆ ಸತ್ವಪರೀಕ್ಷೆಯ ಕಾಲವೂ ಹೌದು. ಸದ್ಯದಲ್ಲೇ ಕೆಲವು ಅನಿಷ್ಟಗಳೂ ನಿವಾರಣೆಯಾಗುವುದು. ವಾರದ ಕಡೆಗೆ ಗುರುಜನರ ಭೇಟಿಯಿಂದ ಸಾಂಸಾರಿಕ ಸಮಸ್ಯೆಗಳು ಪರಿಹಾರವಾಗುವುದು. ಇಷ್ಟ ಜನರ ಭೇಟಿಯಿಂದ ಸಂತಸ. ಆರೋಗ್ಯದ ಬಗ್ಗೆ ಅಸಡ್ಡೆ ಬೇಡಿ.

ಶ್ರೀ ಯೋಗಾನರಸಿಂಹ ಸೇವೆ. ಶುಭ ಸಂಖ್ಯೆ-9.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಫ.ಬೆ)

ಗುರು-ಚಂದ್ರರ ಸಂಚಾರ ಶುಭವಿದೆ, ಮನೆ-ಮನದಲ್ಲಿ ಹರುಷದ ವಾತಾವರಣ ಇರುತ್ತದೆ. ಕೈಗೊಂಡ ಕೆಲಸ ಕಾರ್ಯಗಳು ನೀವಂದುಕೊಂಡಂತೆ ಸಾಗಲಿದೆ. ನಿವೇಶನ ಅಥವಾ ಮನೆ ಖರೀದಿಸಲು ಚಿಂತನೆಗಳು ಮನೆಯಲ್ಲಿ ನಡೆಯುವುದು. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಹೊರ ದೇಶಕ್ಕೆ ಹೋಗುವ ಅವಕಾಶ ಉಂಟು. ಮಕ್ಕಳ ಇಷ್ಟಾನಿಷ್ಟಗಳನ್ನು ಮುಕ್ತ ಮನಸ್ಸಿನಿಂದ ಚರ್ಚಿಸಿ.

ಶ್ರೀ ಗುರುರಾಯರ ಪೂಜೆ. ಶುಭ ಸಂಖ್ಯೆ-5.



ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಆರ್ಥಿಕ ಪರಿಸ್ಥಿತಿ ಹಿಂದಿನದಕ್ಕಿಂತ ಉತ್ತಮವಾಗಿರುತ್ತದೆ. ಕೈಗೆತ್ತಿಕೊಂಡ ಕೆಲಸಗಳು ನಿಧಾನವೆನಿಸಿದರೂ ಪೂರ್ಣಗೊಳ್ಳುತ್ತವೆ. ಮನೆಗೆ ದೂರದ ಬಂಧುಗಳ ಅಪರೂಪದ ಆಗಮನ ಸಂತಸ ತರುತ್ತದೆ. ದೂರ ಪ್ರಯಾಣದ ಸೂಚನೆಗಳಿವೆ. ಆರೋಗ್ಯದ ಬಗ್ಗೆ ಉದಾಸೀನ ತಾಳದಿರಿ. ವಾರದ ಕಡೆಗೆ ಕುಟುಂಬ ಸದಸ್ಯರ ನಡುವೆ ಹಠಾತ್ ವಾಗ್ವಾದಗಳು ಉಂಟಾಗುತ್ತವೆ. ವಿದ್ಯಾರ್ಥಿಗಳಿಗೆ ಆಲಸ್ಯತನ ಕಾಡುತ್ತದೆ.

ಓಂ ನಮಃ ಶಿವಾಯ ಜಪಿಸಿ. ಶುಭ ಸಂಖ್ಯೆ-2.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಯೋಜಿತ ಕಾರ್ಯಗಳು ನಿರೀಕ್ಷಿತ ರೀತಿಯಲ್ಲಿ ಪೂರ್ಣಗೊಳ್ಳುವುದು. ಸರ್ಕಾರಿ ಕೆಲಸ ಕಾರ್ಯಗಳು ನಿಮಗೆ ಅನುಕೂಲಕರವಾಗಿರುತ್ತದೆ. ಆಟೋಮೊಬೈಲ್ ವ್ಯಾಪಾರಿಗಳಿಗೆ ನಿರೀಕ್ಷೆ ಮೀರಿ ವ್ಯಾಪಾರವಾಗುವುದು. ರಾಜಕಾರಣಿಗಳ ಭೇಟಿಯಿಂದ ಒಳಿತನ್ನು ನಿರೀಕ್ಷಿಸಬಹುದು. ಸರ್ಕಾರಿ ನೌಕರರಿಗೆ ಹಿರಿಯ ಅಧಿಕಾರಿಗಳ ಕಾಕದೃಷ್ಟಿ. ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗಿ ವೈದ್ಯರ ಭೇಟಿ ಅನಿವಾರ್ಯವಾಗಬಹುದು.

ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-7.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಪ್ರಾರಂಭಕ್ಕೆ ಮುದಿತವಾದ ಮೈ, ಮನಸ್ಸುಗಳು. ಉತ್ತಮ ಜನರ ಸಹವಾಸ. ಹಿರಿಯರ ಮಾರ್ಗದರ್ಶನದಿಂದ ಜಟಿಲ ಸಮಸ್ಯೆಗೆ ಪರಿಹಾರ ದೊರಕುವುದು. ವಿದ್ಯಾರ್ಥಿಗಳು ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯುವರು. ಹೊಸ ವಾಹನ ಖರೀದಿಯ ಕನಸು ನನಸಾಗಲಿದೆ. ವೃತ್ತಿಪರ ಉದ್ಯೋಗಗಳಲ್ಲಿ ಕೆಲವು ಅನಿರೀಕ್ಷಿತ ಘಟನೆಗಳು ಉಂಟಾದರೂ ಅವುಗಳನ್ನು ಎದುರಿಸಿ ಮುಂದೆ ಸಾಗುತ್ತೀರಿ.

ಶ್ರೀ ಅಶ್ವತ್ಥ ವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-1.

ನಂಜನಗೂಡು ನಗರಸಭೆ ನರಕ ಸಭೆಯಾಗಿದೆ...

● ನಂ.ಗೂಡು ಪುರಸಭೆಗೆ ಹಸ್ತಾಂತರಿಸಿರುವ ಬಡಾವಣೆಗಳ ದಾಖಲೆಗಳು ತಿರುಚಿರುವುದು ಮೇಲ್ನೋಟಕ್ಕೆ ಸಾಬೀತು: ಡಿಸಿ ● ಲೋಪವೆಸಗಿದ ಸಿಬ್ಬಂದಿ, ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಸೂಚನೆ ● ಸಭಾ ನಡಾವಳಿಗಳನ್ನು ತಿದ್ದಿದ್ದಾರೆ, ನಿಯಮಾವಳಿ ಪ್ರಕಾರ ಏನೂ ನಡೆದಿಲ್ಲ

ನಂಜನಗೂಡು, ಸೆ.16– ನಂಜನಗೂಡು ನಗರಸಭೆ ನರಕ ಸಭೆಯಾಗಿದೆ ಎಂದು ವಿಷಾದ ವ್ಯಕ್ತಪಡಿಸಿದ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರು, ನಗರಸಭೆಗೆ ಹಸ್ತಾಂತರವಾಗಿರುವ ಕೆಲ ಬಡಾವಣೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ತಿರುಚಿರುವುದು ಮೇಲ್ನೋಟಕ್ಕೆ ರುಜುವಾತಾಗಿದ್ದು, ಕರ್ತವ್ಯಲೋಪವೆಸಗಿರುವ ಸಿಬ್ಬಂದಿ ಮತ್ತು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ನಿರ್ದೇಶನ ನೀಡಿದ್ದಾರೆ.



ನಗರಸಭೆ ಆಡಳಿತಾಧಿಕಾರಿಯಾದ ಜಿಲ್ಲಾಧಿಕಾರಿಗಳು ಶನಿವಾರ ನಗರಸಭೆ ಸಭಾಂಗಣದಲ್ಲಿ ನಡೆದ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ನಗರಸಭೆಗೆ ಸೇರ್ಪಡೆಗೊಂಡಿರುವ ದೇವಿರಮ್ಮನಹಳ್ಳಿ ಹಾಗೂ ದೇಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಡಾವಣೆಗಳಲ್ಲಿ ಖಾತೆ ಬದಲಾವಣೆ ಮಾಡಿಕೊಡುವುದಾಗಿ ದಾಖಲೆಗಳನ್ನು ತಿರುಚಿರುವ ಬಗ್ಗೆ ದೂರುಗಳು ಕೇಳಿ ಬಂದಿವೆ ಎಂದರು.

ನಗರಸಭೆಯ ಸಿಬ್ಬಂದಿಗಳೂ ಈ ಕೃತ್ಯದಲ್ಲಿ ಭಾಗಿಯಾಗಿರುವ ಶಂಕೆಯಿದ್ದು, ನಗರಸಭೆಯ ಈ ಹಿಂದಿನ ಪೌರಾಯುಕ್ತರಿಗೆ ವಿವರಣೆ ಕೇಳಿ ನೋಟಿಸ್ ನೀಡಲಾಗಿತ್ತು. ಅವರಿಂದ ಸಮಂಜಸ ಉತ್ತರ ಲಭ್ಯವಾಗದಿರುವ ಕಾರಣ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವುದರ ಜೊತೆಗೆ ಇಲಾಖಾ ತನಿಖೆಗೆ ಕೋರಿ ಸರಕಾರಕ್ಕೆ ಮನವಿ ಮಾಡುವುದಾಗಿ ಹೇಳಿದರು.

ನಗರಸಭೆಯಲ್ಲಿ ಈ ಹಿಂದಿನ ಸಭೆಗಳಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ನಡಾವಳಿ ಪುಸ್ತಕದಲ್ಲಿ ಬರೆಯುವ ಸಂದರ್ಭ ತಿದ್ದಿರುವ ಹಾಗೂ ಪೇಪರ್ ಅಂಟಿಸಿರುವುದನ್ನು ಉಲ್ಲೇಖಿಸಿದ ಅವರು, ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ಉಲ್ಲಂಘಿಸುವುದು ಸರಿಯಲ್ಲ. ಯಾವುದೂ ಕೂಡ ನಿಯಮಾವಳಿ ಪ್ರಕಾರ ನಡೆದಿಲ್ಲ. ಹೀಗಾಗಿ ನಗರಸಭೆಯ ಸಿಬ್ಬಂದಿಗಳಿಗೆ ಎರಡು ದಿನಗಳ ರಜಾ ಅವಧಿಯಲ್ಲಿ ತರಬೇತಿ ಕೊಡಿಸುವುದಾಗಿ ಹೇಳಿದರು.

ಅವರು ನಡಾವಳಿ ಪುಸ್ತಕ ನಿಯಮಾವಳಿ ಪ್ರಕಾರ ದಾಖಲು ಮಾಡದ ನಗರಸಭೆಯ ಅಧಿಕಾರಿ, ಅಕೌಂಟ್ ಸೂಪರಿಂಟೆಂಡೆಂಟ್, ಕಂದಾಯ ಅಧಿಕಾರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಬೇಕು ಎಂದು ತಿಳಿಸಿದರಲ್ಲದೆ. ನಗರಸಭೆ ನರಕಸಭೆ ಯಾಗಿದೆ. ಅಧಿಕಾರಿಗಳು ನಗರಸಭೆಗೆ ಭಾರ ಆಗಿದ್ದಾರೆ. ಅಧಿಕಾರಿಗಳನ್ನು ಒಂದು ದಿನದ ಮಟ್ಟಿಗಾದರೂ ಸಹ ಅಮಾನತುಗೊಳಿಸದಿದ್ದಲ್ಲಿ ಅವರು ಬುದ್ಧಿ ಕಲಿಯುವುದಿಲ್ಲ ಎಂದು ಗರಂ ಆದರು.

ನಗರಸಭೆಗೆ ಸಂದಾಯ ಮಾಡಬೇಕಿರುವ ಕಂದಾಯ ಹಾಗೂ ನೀರಿನ ತೆರಿಗೆಯನ್ನು ವಸೂಲಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ ಜಿಲ್ಲಾಧಿಕಾರಿ ಡಾ.ರಾಜೇಂದ್ರ, ನಗರ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಮೊತ್ತದ ಕಂದಾಯ ಹಾಗೂ ನೀರಿನ ತೆರಿಗೆ ಬಾಕಿ ಉಳಿಸಿಕೊಂಡಿರುವ 10 ಮಂದಿಯನ್ನು ಪಟ್ಟಿ ಮಾಡಿ ನಗರಸಭೆ ಕಚೇರಿಯ ಪ್ರಕಟಣಾ ಫಲಕದಲ್ಲಿ ಹಾಕುವುದರ ಜೊತೆಗೆ ಮಾಧ್ಯಮಗಳಲ್ಲಿ ಪ್ರಕಟಣೆ ನೀಡುವಂತೆ ಸೂಚಿಸಿದರು.

ಉಳಿದಂತೆ ಸಭೆಯ ನಡಾವಳಿಯಲ್ಲಿ ದಾಖಲಿಸಿರುವ ಎಲ್ಲಾ ಕಾಮಗಾರಿಗಳನ್ನು ದಸರಾ ಮುಗಿಯುವುದರೊಳಗೆ ಪೂರ್ಣಗೊಳಿಸಬೇಕು. ಅರ್ಧಕ್ಕೆ ನಿಂತಿರುವ ಕಾಮಗಾರಿ ಹಾಗೂ ಆರಂಭವೇ ಆಗದ ಕಾಮಗಾರಿಗಳಿಗೆ ಕಾರಣ ಸಮೇತ ವಿವರಣೆ ಸಲ್ಲಿಸಬೇಕು. ಬಜಾರ್ ರಸ್ತೆಯಲ್ಲಿ ಫುಟ್‌ಪಾತ್ ಒತ್ತುವರಿ ತೆರವಿಗೆ ಕ್ರಮವಹಿಸಬೇಕು. ಇನ್ನು ಮುಡಾ ಬಡಾವಣೆಗಳನ್ನು ನಗರಸಭೆ ವ್ಯಾಪ್ತಿಗೆ ಹಸ್ತಾಂತರ ಮಾಡಿಕೊಳ್ಳುವ ಬಗ್ಗೆ ಕ್ರಮವಹಿಸಬೇಕು. ಶ್ರೀಕಂಠೇಶ್ವರಸ್ವಾಮಿ ದೇವಾಲಯ ಸುತ್ತಮುತ್ತ ಅನಧಿಕೃತ ವಾಣಿಜ್ಯ ಕಟ್ಟಡಗಳು ನಿರ್ಮಾಣ ಆಗದಂತೆ ನಿಗಾವಹಿಸಬೇಕು ಎಂದು ಸೂಚಿಸಿದರು.

ಒಳಚರಂಡಿ ವ್ಯವಸ್ಥೆಯ ಬಗ್ಗೆ ಕಾರ್ಯಪಾಲಕ ಇಂಜಿನಿಯರ್ ಚಿನ್ನಸ್ವಾಮಿ ಅವರನ್ನು ತರಾಟೆಗೆ ತೆಗೆದುಕೊಂಡು ಜಿಲ್ಲಾಧಿಕಾರಿಗಳು, ಎರಡು ಸಾವಿರದ ಹನ್ನೊಂದರಲ್ಲಿ ನಂಜನಗೂಡಿನ ಜನಸಂಖ್ಯೆ ಎಷ್ಟಿತ್ತು. ಈಗ ಎಷ್ಟಿದೆ, ಮುಂದಿನ 30 ವರ್ಷಗಳಲ್ಲಿ ಜನಸಂಖ್ಯೆ ಎಷ್ಟಾಗುತ್ತದೆ? ಇದನ್ನು ಗಮನ ಹರಿಸಿ ಒಳಚರಂಡಿ ವ್ಯವಸ್ಥೆಯ ಯೋಜನೆಯನ್ನು ರೂಪಿಸಬೇಕು, ಆದರೆ ನೀವು ನಡೆಸಿರುವ ಕಾಮಗಾರಿಯಲ್ಲಿ ನಿಗದಿತ ಪ್ರಮಾಣದ ತ್ಯಾಜ್ಯ ಹೊರಬರುವುದಿಲ್ಲ. ಈಗಾಗಲೇ ಸಾಕಷ್ಟು ಮ್ಯಾನ್‌ವಾಲ್ವ್‌ಗಳು ಹಾಳಾಗಿದ್ದು. ಕಾಮಗಾರಿ ಮುಗಿಯುವವರೆಗೆ ಸಂಪರ್ಕವೂ ಸಹ ಹಾಳಾಗುತ್ತದೆ. ಅಲ್ಲಿಗೆ ಒಳಚರಂಡಿ ವ್ಯವಸ್ಥೆ ಸಂಪೂರ್ಣವಾಗಿ ಹದಗೆಡುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಗರಸಭಾ ಸದಸ್ಯ ಗಂಗಾಧರ್ ಮಾತನಾಡಿ, 24X7 ಕುಡಿಯುವ ನೀರಿನ ಮೀಟರ್ ಲೋಪದೋಷದಿಂದಾಗಿ ಇಬ್ಬರು ಇರುವ ಬಡ ಕುಟುಂಬಗಳಿಗೂ ಸಹ ನಾಲ್ಕರಿಂದ ಐದು ಸಾವಿರ ನೀರು ಬಿಲ್ ಬರುತ್ತಿದೆ. ಈ ಬಗ್ಗೆ ನಗರಸಭೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು. ಸಭೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ, ನಗರ ಜಿಲ್ಲಾ ಯೋಜನಾಧಿಕಾರಿ ಶುಭಾ, ನಗರಸಭಾ ಪೌರಾಯುಕ್ತ ನಂಜುಂಡಸ್ವಾಮಿ, ಎಇಇ ಶ್ರೀನಿವಾಸ್, ನಗರಸಭಾ ಸದಸ್ಯರಾದ ಎಸ್ ಪಿ ಮಹೇಶ್, ಶ್ರೀಕಂಠಸ್ವಾಮಿ, ಮಹದೇವಮ್ಮ, ಪ್ರದೀಪ್, ಸೇರಿದಂತೆ ನಗರಸಭೆಯ ಸದಸ್ಯರು ಭಾಗವಹಿಸಿದ್ದರು.

ಗೌರಿ–ಗಣೇಶ ಹಬ್ಬ ಶಾಂತಿಯುತವಾಗಿ ಆಚರಿಸಲು ಪೊಲೀಸ್ ಇಲಾಖೆ ಮನವಿ



ಬೆಟ್ಟದಪುರ, ಸೆ.16– ಗೌರಿ–ಗಣೇಶ ಹಾಗೂ ಈದ್‌ಮಿಲಾದ್ ಹಬ್ಬದ ಪ್ರಯುಕ್ತ ಬೆಟ್ಟದಪುರ ಪೊಲೀಸ್ ಠಾಣಾ ವ್ಯಾಪ್ತಿಯ ನಾಗರಿಕ ಸಭೆಯನ್ನು ಹುಣಸೂರು ಡಿವೈಎಸ್ಪಿ ಮಹೇಶ್ ಸಮ್ಮುಖದಲ್ಲಿ ನಡೆಸಲಾಯಿತು.

ಸಭೆಯಲ್ಲಿ ಮಾತನಾಡಿದ ಡಿವೈಎಸ್ಪಿ ಮಹೇಶ್, ಗಣೇಶ ಹಬ್ಬ, ಹಿಂದೂಗಳು ಅತ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಿಕೊಂಡು ಬಂದಿರುವ ಹಬ್ಬವಾಗಿದ್ದು, ಹಬ್ಬದ ವೇಳೆ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡುವಂತೆ ತಿಳಿಸಿದರು.

ಸರ್ಕಾರ ನೀಡಿರುವ ಸೂಚನೆಗಳನ್ನು ಪಾಲಿಸಿ ಗಣಪತಿಯನ್ನು ಪೂಜಿಸಿ ಪೊಲೀಸ್ ಇಲಾಖೆ ಕೊಟ್ಟಿರುವ ಸಮಯದಲ್ಲಿ ವಿಸರ್ಜಿಸಬೇಕು. ರಾತ್ರಿ ವೇಳೆಯಲ್ಲಿ ಗಣಪತಿಯನ್ನು ವಿಸರ್ಜಿಸಬಾರದೆಂದು ತಿಳಿಸಿದರು.

ಸರ್ಕಲ್ ಇನ್ಸ್‌ಪೆಕ್ಟರ್ ಪ್ರಕಾಶ್ ಮಾತನಾಡಿ, ಗ್ರಾಮದಲ್ಲಿ ಶಾಂತಿ ಕದಡುವ ವ್ಯಕ್ತಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು. ಹಾಗೂ ಯಾವುದೇ ಅಹಿತಕರ ಘಟನೆ ನಡೆಯದಂತೆ ಗ್ರಾಮಸ್ಥರು ಎಚ್ಚರಿಕೆ ವಹಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬೆಟ್ಟದಪುರ ಪಿಎಸ್‌ಐ ಪ್ರಕಾಶ ಎಂ.ಎತ್ತಿನಮನಿ ಮಾತನಾಡಿ, ಬೆಟ್ಟದಪುರ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆ ನಡೆದರೆ ಯಾರ ಒತ್ತಡಕ್ಕೂ ಮಣಿಯದೆ ಕಾನೂನು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಇದೇ ರೀತಿ ಮುಸ್ಲಿಂ ಬಾಂಧವರು ಕೂಡ ಈದ್‌ಮಿಲಾದ್ ಹಬ್ಬವನ್ನು ಶಾಂತಿಯುತವಾಗಿ ಆಚರಿಸಬೇಕು ಎಂದು ಸಭೆಯಲ್ಲಿ ತಿಳಿಸಲಾಯಿತು.

ಬೆಟ್ಟದಪುರ ಗ್ರಾಮ ಪಂಚಾಯತಿ ಅಧ್ಯಕ್ಷ ಬಿಎನ್ ಗಿರೀಶ್, ನಿವೃತ್ತ ಶಿಕ್ಷಕ ಸಣ್ಣಸ್ವಾಮಿ ಗೌಡ, ಸಾಲುಕೊಪ್ಪಲು ಪುಟ್ಟರಾಜ, ಚಿಕ್ಕನೇರಳೆ ಇಲಿಯಾಸ್ ಪಾಷಾ ಹಾಗೂ ತಾಹಿರ್ ಪಾಷಾ, ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ಇಕ್ಬಾಲ್ ಶರೀಫ್, ರಜನಿಕಾಂತ್, ಭೀಮಣ್ಣ, ರವಿ, ಬಿ.ವಿ.ಮಲ್ಲೇಶ, ಕಣಗಾಲು ಗ್ರಾಮ ಪಂಚಾಯತಿ ಮಾಜಿ ಉಪಾಧ್ಯಕ್ಷ ಕುಮಾರ್ ಶೆಟ್ಟಿ, ಬೆಟ್ಟದತುಂಗಾ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ದೇವರಾಜು, ಬಾರಸೆ ಚಂದ್ರೇ ಅರಸ್, ಬೆಟ್ಟದಪುರ ಪೊಲೀಸ್ ಠಾಣಾ ವ್ಯಾಪ್ತಿಯ ಗ್ರಾಮಗಳ ಮುಖಂಡರು ಹಾಜರಿದ್ದರು

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಚಿರತೆ ಪ್ರತ್ಯಕ್ಷ

ಮೂರು ಮೇಕೆ, ಕರು ಬಲಿ; ಚಿರತೆ ಸೆರೆಗೆ ಬೋನಿಟ್ಟ ಅರಣ್ಯ ಇಲಾಖೆ



▶ ನೇರಳೆ ಗ್ರಾಮದ ನಿವಾಸಿಗಳಾದ ಸೋಮೇಶ್ ಹಾಗೂ ಅವರ ಸ್ನೇಹಿತ ಕುಮಾರ್ ಅವರು ಕೆಲಸ ಮುಗಿಸಿ ಶುಕ್ರವಾರ ರಾತ್ರಿ ಗ್ರಾಮಕ್ಕೆ ಬೈಕ್‌ನಲ್ಲಿ ಹಿಂತಿರುಗುತ್ತಿದ್ದಾಗ ಚಿರತೆ ರಸ್ತೆ ಬದಿ ಹೋಗುತ್ತಿರುವುದನ್ನು ಕಂಡು ಅವರ ಮೊಬೈಲ್‌ನಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟಿದ್ದಾರೆ.

ಹೆಚ್.ಡಿ.ಕೋಟೆ, ಸೆ.16– ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲೂಕಿನ ಕೆಲವು ಗ್ರಾಮಗಳಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದು, ಮೂರು ಮೇಕೆ ಮತ್ತು ಕರುವಿನ ಮೇಲೆ ದಾಳಿ ನಡೆಸಿ, ಕೊಂದು ಹಾಕಿದೆ. ಇದರಿಂದ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ತಾಲೂಕಿನ ನೇರಳೆ ಗಣೇಶನ ಗುಡಿ ಹಾಗೂ ಸುಣ್ಣಕಲ್ ಮುಂಟಿ ಗ್ರಾಮದಲ್ಲಿ ಈ ಘಟನೆ ನಡೆದಿದೆಯಲ್ಲದೆ ರಾತ್ರಿ ವೇಳೆ ಗ್ರಾಮಕ್ಕೆ ಹಿಂತಿರುಗುತ್ತಿದ್ದ ಕೆಲವರಿಗೆ ಚಿರತೆ ಕಾಣಿಸಿಕೊಂಡಿದೆ.



ತಾಲೂಕಿನ ನೇರಳೆ ಗಣೇಶನ ಗುಡಿ ಗ್ರಾಮದ ನಿವಾಸಿ ವೆಂಕಟಸ್ವಾಮಿ ಅವರ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ ಮೇಕೆ ಮೇಲೆ ಚಿರತೆ ಶುಕ್ರವಾರ ಮಧ್ಯರಾತ್ರಿ ದಾಳಿ ನಡೆಸಿದೆ. ಈ ವೇಳೆ ಮೇಕೆ ಕಿರುಚಾಡಿದ ಸಂದರ್ಭದಲ್ಲಿ ಮನೆಯವರು ಎಚ್ಚರಗೊಂಡು ಅಬ್ಬರಿಸಿದ್ದರಿಂದ ಕೊಂದ ಮೇಕೆಯನ್ನು ಸ್ಥಳದಲ್ಲೇ ಬಿಟ್ಟು ಹೋಗಿದೆ. ಅದೇ ರೀತಿ ನೇರಳೆ ಗ್ರಾಮದ ನಿವಾಸಿ ಚಿಕ್ಕಯ್ಯ ಎಂಬುವರ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ ಮೇಕೆ ಮೇಲೂ ದಾಳಿ ನಡೆಸಿ ಮೇಕೆಯನ್ನು ಕೊಂದು, ನಂತರ ಸುಣ್ಣಕಲ್ ಮುಂಟಿ ಗ್ರಾಮದ ನಿವಾಸಿ ಸಿದ್ದೇಗೌಡ ಅವರ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಮೇಕೆ ಮೇಲೆ ದಾಳಿ ನಡೆಸಿ ಮೇಕೆಯನ್ನು ಸ್ಥಳದಲ್ಲೇ ಬಿಟ್ಟು ಹೋಗಿದೆ. ಮತ್ತೆ ಅದೇ ಗ್ರಾಮದ ನಾಗೇಗೌಡ ಎಂಬುವರ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ, ಕರುವಿನ ಮೇಲೆ ದಾಳಿ ಮಾಡಿ ಕರುವಿನ ಅರ್ಧ ಭಾಗವನ್ನು ತಿಂದು ಹಾಕಿದೆ.

ಬೀಚನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಅಂಗಡಿ ಗೋವಿಂದರಾಜು ಮಾತನಾಡಿ, ಕಳೆದ ಒಂದು ತಿಂಗಳಿಂದ ಚಿರತೆ ಗಣೇಶನ ಗುಡಿ, ನೇರಳೆ, ಸುಣ್ಣಕಲ್ ಮುಂಟಿ, ಯಲಮತ್ತೂರು, ನೇರಳೆ ಹೊಸೂರು, ಮಾಗಡಿಲು ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು, ರೈತರುಗಳು ಜೀವನೋಪಾಯಕ್ಕಾಗಿ ಸಾಕಿರುವ ಮೇಕೆ ಮತ್ತು ಜಾನುವಾರುಗಳ ಮೇಲೆ ದಾಳಿ ನಡೆಸಿ ಕೊಂದು ಹಾಕುತ್ತಿದೆ. ಮತ್ತೆ ರೈತರುಗಳು ಜಮೀನಿಗೆ ತೆರಳಲು ಹಿಂಜರಿಯುವ ಪರಿಸ್ಥಿತಿ ನಿರ್ಮಾಣಗೊಂಡಿದೆ. ಆದ್ದರಿಂದ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆಯನ್ನು ಸೆರೆಹಿಡಿದು ರೈತರುಗಳಿಗೆ ಪರಿಹಾರ ಕೊಡಬೇಕು ಎಂದು ಒತ್ತಾಯಿಸಿದ್ದಾರೆ.

ಡಿಆರ್‌ಎಸ್‌ಓ ಚಂದನ್ ಮಾತನಾಡಿ, ಈ ಭಾಗದಲ್ಲಿ ಚಿರತೆ ಹಾವಳಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಿಬ್ಬಂದಿಗಳ ಗಸ್ತು ಮಾಡಲು ನೇಮಕ ಮಾಡಲಾಗಿದೆ. ವಾಚರ್‌ಗಳಾದ ಮಹಮದ್, ನಾರಾಯಣ್, ಅವರೊಡನೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಚಿರತೆಯನ್ನು ಸೆರೆ ಹಿಡಿಯಲು ನಾಗೇಗೌಡ ಎಂಬುವರ ಮನೆ ಬಳಿ ಶನಿವಾರ ಬೋನ್ ಇರಿಸಲಾಗಿದೆ. ಆದುದರಿಂದ ಸುತ್ತಮುತ್ತಲಿನ ಗ್ರಾಮಸ್ಥರುಗಳು ಬಹಳ ಎಚ್ಚರಿಕೆಯಿಂದ ಓಡಾಡಬೇಕು. ಹಾಗೂ ನಿಮ್ಮ ದನ–ಕರುಗಳು, ಮೇಕೆಗಳ ಮೇಲೆ ಎಚ್ಚರಿಕೆ ವಹಿಸಿ ಎಂದರಲ್ಲದೆ, ಚಿರತೆ ದಾಳಿಯಿಂದ ಸಾವನ್ನಪ್ಪಿರುವ ಮೇಕೆ ಹಸು ಇವುಗಳಿಗೆ ಪರಿಹಾರ ಕೊಡಿಸುವ ಭರವಸೆಯನ್ನು ನೀಡಿದ್ದಾರೆ.

ಸೆ.20, ಹಾಡ್ಯ ಕೃಷಿಪತ್ತಿನ ಸಹಕಾರ ಸಂಘದ ಮಹಾಸಭೆ

ಮಲ್ಕುಂಡಿ, ಸೆ.16– ಸಮೀಪದ ಹಾಡ್ಯ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2022–23 ನೇ ಸಾಲಿನ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷ ಹೆಚ್.ಎಂ. ಶಂಕರ್ ಅವರ ಅಧ್ಯಕ್ಷತೆಯಲ್ಲಿ ಸೆ.20 ರಂದು ಸಂಘದ ಆವರಣದಲ್ಲಿ ನಡೆಯಲಿದ್ದು ಸುತ್ತಮುತ್ತ ಗ್ರಾಮಸ್ಥರು ಭಾಗವಹಿಸಬೇಕೆಂದು ಸಿಇಓ ಎಂ.ಪಿ.ವೆಂಕಟರಾಜಯ್ಯ ಪ್ರಕಟಣೆಯಲ್ಲಿ ಕೋರಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಮಾರ್ಕ್ ಆಂಟೋನಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತತ್ಸಮ ತದ್ಭವ(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾರ್ಕ್ ಆಂಟೋನಿ (ತ)	4 ಪ್ರದರ್ಶನಗಳು
ಸಂಗಂ	
ಜವಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಋಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜವಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
DRC CINEMAS — ದೂ : 4240422/4241800

ಸ್ಕ್ರೀನ್ 1	ಸಪ್ತಸಾಗರದಾಚೆ ಎಲ್ಲೋ (ಕ): ಬೆ.10.15ಕ್ಕೆ, ಮ.1.05ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ಜವಾನ್ (ಹಿಂ): ಮ.3.55ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, 13 ಪಾರ್ಟ್ 1 (ಕ): ಮ.1.45ಕ್ಕೆ, ಮಿಸ್ ಶೆಟ್ಟಿ ಮಿಸ್ಟರ್ ಪೊಲಿಶೆಟ್ಟಿ (ತೆ): ಸಂ.4.15ಕ್ಕೆ.
ಸ್ಕ್ರೀನ್ 3	ಪರಿಮಳಾ ಡಿಸೋಜಾ (ಕ): ಬೆ.11ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.15ಕ್ಕೆ, ಎ ಹಾಂಟಿಂಗ್ ಇನ್ ವೆನಿಸ್ (ಇಂ): ರಾ.7.15ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.45ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE — ದೂ : 2533444 / 2433456

ಸ್ಕ್ರೀನ್ 1	ತತ್ಸಮ ತದ್ಭವ (ಕ): ಬೆ.11.10ಕ್ಕೆ, ಸಂ.4.45ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ರಾ.7.20ಕ್ಕೆ, ಮಾರ್ಕ್ ಆಂಟೋನಿ (ತ): ರಾ.10.20ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.10.15ಕ್ಕೆ, ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 4	ಪರಿಮಳಾ ಡಿಸೋಜಾ (ಕ): ಬೆ.10.30ಕ್ಕೆ, 13 (ಕ): ಮ.1.20ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ, ಟೇಲ್ ಆಫ್ ಮಹಾನಗರ (ಕ): ರಾ.7.30ಕ್ಕೆ, ಕಾಸರ್‌ಗೋಲ್ಡ್ (ಮ): ರಾ.10.30ಕ್ಕೆ

ಮೈಸೂರು ವಿಷನ್ ಸಿನಿಮಾ
MVC — ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS — ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗಣಪತಿ ಪ್ರತಿಷ್ಠಾಪನೆಗೆ ನಿಯಮ ಪಾಲನೆ ಕಡ್ಡಾಯ



ಹುಣಸೂರು, ಸೆ.16– ಸರ್ಕಾರದ ನಿಯಮದಂತೆ ಗಣೇಶನ ಮೂರ್ತಿ ಪ್ರತಿಷ್ಠಾಪಿಸಬೇಕು. ಕಾರ್ಯಕ್ರಮ ನಡೆಸಲು ಅನುಮತಿ ಪಡೆಯುವುದು ಕಡ್ಡಾಯ ಎಂದು ಇನ್ಸ್‌ಪೆಕ್ಟರ್ ದೇವೇಂದ್ರ ತಿಳಿಸಿದ್ದಾರೆ.

ಗೌರಿ–ಗಣೇಶ ಹಬ್ಬದ ಪ್ರಯುಕ್ತ ಕಲ್ಕುಣಿಕೆ ರಂಗನಾಥ ಬಡಾವಣೆಯ ಶಾಲಾ ಆವರಣದಲ್ಲಿ ಆಯೋಜಿಸಿದ್ದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಚುನಾವಣೆ ವೇಳೆ ಕಲ್ಕುಣಿಕೆ ಜನರು ಕಾನೂನು ಸುವ್ಯವಸ್ಥೆ ಕಾಪಾಡುವ ಮೂಲಕ ಪೊಲೀಸರೊಂದಿಗೆ ಸಹಕರಿಸಿದ್ದೀರಾ, ಸರಕಾರ ಸಾರ್ವಜನಿಕ ಸ್ಥಳಗಳಲ್ಲಿ ಗಣಪತಿ ಪ್ರತಿಷ್ಠಾಪಿಸಲು ಕೆಲವು ನಿಯಮಗಳನ್ನು ಅನುಸರಿಸುವುದು ಕಡ್ಡಾಯಗೊಳಿಸಿದ್ದು, ಕಾನೂನುಗಳನ್ನು ಪಾಲಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಗಣಪತಿ ಪ್ರತಿಷ್ಠಾಪಿಸುವವರು ಪಿಓಪಿ ಗಣಪತಿ ಕೂರಿಸುವಂತಿಲ್ಲ. ಡಿ.ಜೆ.ಬಳಸುವಂತಿಲ್ಲ. ವಿದ್ಯುತ್ ಸಂಪರ್ಕ ಪಡೆಯುವ ವೇಳೆ ಚೆಸ್ಕಾಂನಿಂದ ಅನುಮತಿ ಪಡೆಯಬೇಕು, ಬೆಂಕಿ ಅವಘಡಗಳ ಬಗ್ಗೆ ಮುಂಜಾಗ್ರತೆ ವಹಿಸಬೇಕು, ಸಾರ್ವಜನಿಕರಿಗೆ ತೊಂದರೆಯಾಗದಂತೆ ಪ್ರತಿಷ್ಠಾಪಿಸಬೇಕು. ರಾತ್ರಿ 10 ನಂತರ ಕಾರ್ಯಕ್ರಮಗಳನ್ನು ಆಯೋಜಿಸಬಾರದು. ಸಾರ್ವಜನಿಕ ಸಂಚಾರಕ್ಕೆ ಅಡಚಣೆಯಾಗದಂತೆ ಪೆಂಡಾಲ್ ಅಳವಡಿಸಬೇಕು. ವಿಸರ್ಜನೆ ವೇಳೆ ನಿಗದಿತ ಸ್ಥಳದಲ್ಲೇ ವಿಸರ್ಜನೆಗೆ ಕ್ರಮವಹಿಸಬೇಕು. ಪ್ರತಿಷ್ಠಾಪನೆ ಮತ್ತು ವಿಸರ್ಜನೆಯ ಕುರಿತು ಪೊಲೀಸರಿಗೆ ಮುಂಚಿತವಾಗಿ ಮಾಹಿತಿ ನೀಡುವುದು ಕಡ್ಡಾಯ ಎಂದು ಅವರು ವಿವರಿಸಿದರು.

ನಗರಸಭೆ ಸದಸ್ಯ ದೇವರಾಜ್, ಮುಖಂಡರಾದ ಕೃಷ್ಣನಾಯಕ, ರಾಜು, ರಾಘು, ರಂಗ, ಮಹೇಶ್, ಕೃಷ್ಣ, ದೇವರಾಜ್, ಗುರು ಸೇರಿದಂತೆ ಅನೇಕರಿದ್ದರು.

ಪಿ.ಪಟ್ಟಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಜೆಡಿಎಸ್ ತೆಕ್ಕೆಗೆ



ಪಿರಿಯಾಪಟ್ಟಣ, ಸೆ.16– ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ರಮೇಶ್ ಎಚ್.ಬಿ. ಅಧ್ಯಕ್ಷರಾಗಿ, ಗೀತಾ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡರು. ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಇವರಿಬ್ಬರೇ ನಾಮಪತ್ರ ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಅವಿರೋಧವಾಗಿ ಆಯ್ಕೆ ಘೋಷಿಸಿದರು.

ಡಿಸಿಸಿ ಬ್ಯಾಂಕಿನ ಸೂಪರ್‌ವೈಸರ್ ಜಗದೀಶ್, ನಿರ್ದೇಶಕರುಗಳಾದ ಸುರೇಶ್, ರಾಮೇಗೌಡ, ಸಯ್ಯದ್ ಜಮೀರ್, ಬಿ.ಆರ್. ಸತೀಶ್ ಕುಮಾರ್, ವೆಂಕಟೇಶ್, ಗೀತಾ, ನಳಿನಿ, ಶೋಭಾ, ಕರಿನಾಯಕ, ರಾಮಕೃಷ್ಣ, ಮುಖಂಡರುಗಳಾದ ರಾಮಚಂದ್ರು, ಪಾರೇಕೊಪ್ಪಲು, ಚಂದ್ರು, ಗೋಪಾಲ್, ಶಿವರಾಜ್, ಮುನೀರ್, ಸಣ್ಣ ಸ್ವಾಮಿ, ಶಿವಣ್ಣ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಯುವ ಜನತೆಗೆ ನೈತಿಕತೆ ಪಾಠದ ಅಗತ್ಯವಿದೆ: ಹೆಚ್‌ಸಿಎಂ

ತಿ.ನರಸೀಪುರ, ಸೆ.16– ಪ್ರತಿಯೊಬ್ಬ ಶಿಕ್ಷಕರೂ ಸಚ್ಚಾರಿತ್ರ್ಯ ಹಿನ್ನೆಲೆಯಲ್ಲಿ ನೈತಿಕತೆ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿ, ಶಿಕ್ಷಣದ ಮೂಲಕ ಯುವ ಜನರಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ಹೊಣೆಗಾರಿಕೆ ಅರಿವನ್ನು ಮೂಡಿಸಬೇಕು ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.



ಪಟ್ಟಣದ ಹಳೇ ತಿರುಮಕೂಡಲಿನ ಮೈಸೂರು ರಸ್ತೆಯಲ್ಲಿರುವ ಶ್ರೀನಿವಾಸ ಕನ್ವೆನ್ಷನ್ ಹಾಲ್‌ನಲ್ಲಿ ಶನಿವಾರ ತಾಲೂಕು ಆಡಳಿತ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ ಮಾತನಾಡಿದ ಅವರು, ಇಂದಿನ ಯುವ ಜನತೆಗೆ ನೈತಿಕತೆ ಪಾಠದ ಅಗತ್ಯವಿದೆ. ಶಿಕ್ಷಕರ ವೃತ್ತಿ ಧರ್ಮ ಸಮಾಜಕ್ಕೆ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಬೇಕು ಎಂದರು.

ದೇಶದ ಶೇ.95 ಕ್ಕೂ ಬಹುಸಂಖ್ಯಾತ ಜನರಿಗೆ ಶಿಕ್ಷಣವನ್ನು ನಿರಾಕರಿಸಿದ ಮನುವಾದದಿಂದ ಸ್ವಾತಂತ್ರ್ಯದ ನಂತರದ ದೇಶದಲ್ಲಿ ಶೇ.10 ರಷ್ಟು ಶಿಕ್ಷಣದ ಪ್ರಮಾಣ ಇರಲಿಲ್ಲ. ಮಿಲ್ಲರ್ ಆಯೋಗವನ್ನು ವಾಪಸ್ಸು ಹೋಗು ಎನ್ನುವ ಪರಿಸ್ಥಿತಿಯಿತ್ತು ದೇಶವನ್ನು ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿದ್ದ ಬ್ರಿಟಿಷರ ಕಾಲದಲ್ಲಿ ಲಾರ್ಡ್ ಮೆಕಾಲೆ ಅವರು ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸಿ ಎಲ್ಲರೂ ಕಲಿಯಲು ಮುನ್ನುಡಿ ಬರೆದರು ಎಂದರು.

ಪುಲೆ ದಂಪತಿಗಳು ಹಿಂದುಳಿದ ವರ್ಗಗಳು ಹಾಗೂ ಹೆಣ್ಣು ಮಕ್ಕಳಿಗೆ ಶಿಕ್ಷಣ ಆರಂಭಿಸಿ 20ಕ್ಕೂ ಹೆಚ್ಚು ಶಾಲೆಗಳನ್ನು ತೆರೆದರು. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸಿ, ವೈಚಾರಿಕತೆಯ ವೈಜ್ಞಾನಿಕ ಶಿಕ್ಷಣವನ್ನು ಪ್ರತಿಪಾದಿಸಿದರು. 1954ರಲ್ಲಿ ಇಂದಿರಾ ಗಾಂಧಿ ಪ್ರಧಾನಿಯಾಗಿ ಜಾರಿಗೊಳಿಸಿದ ಶಿಕ್ಷಣ ನೀತಿಯಿಂದ ಶೇ.30 ರಷ್ಟು ಹಾಗೂ 1984ರಲ್ಲಿ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರು ಜಾರಿಗೊಳಿಸಿದ ಶಿಕ್ಷಣ ನೀತಿಯಿಂದ ಶೇ.75 ರಷ್ಟು ಪ್ರಗತಿಯನ್ನು ಸಾಧಿಸಲಾಯಿತು. ಈಗಿನ ಕೇಂದ್ರ ಸರ್ಕಾರ ನೂತನ ಶಿಕ್ಷಣ ನೀತಿ ಮನುವಾದವನ್ನು ಅರ್ಥೈಸುವಂತಿದ್ದು, ಅದಕ್ಕೆ ತೀವ್ರ ಆಕ್ಷೇಪ ದೇಶದಾದ್ಯಂತ ವ್ಯಕ್ತವಾಗುತ್ತಿದೆ ಎಂದು ತಿಳಿಸಿದರು.

ಶಿಕ್ಷಕರ ಸಾಮಾಜಿಕ ಜವಾಬ್ದಾರಿ ಹಾಗೂ ವೃತ್ತಿಯ ಮಹತ್ವದ ಬಗ್ಗೆ ರಾಜ್ಯ ಸಂಪನ್ಮೂಲ ವ್ಯಕ್ತಿ ಎಸ್.ತುಕಾರಾಂ ತಿಳಿಸಿದರು. ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಮಾತನಾಡಿದರು. ತಾಲೂಕಿನಲ್ಲಿ ದಶಕಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ 48 ಶಿಕ್ಷಕರನ್ನು ಸನ್ಮಾನಿಸಲಾಯಿತು.

ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ, ಮೈಮುಲ್ ನಿರ್ದೇಶಕ ಆರ್. ಚಲುವರಾಜು, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು, ತಹಸೀಲ್ದಾರ್ ಟಿ.ಜಿ.ಸುರೇಶ್ ಅಚಾರ್, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಸಿ.ಕೃಷ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಶೋಭ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಡಿ.ಮಾದಪ್ಪ, ಪ್ರಧಾನ ಕಾರ್ಯದರ್ಶಿ ಕುಪ್ಯಾ ಪುಟ್ಟಸ್ವಾಮಿ, ಕೆ ಪಿ ಮಹದೇವಸ್ವಾಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ ವಿ ಶಿವಶಂಕರ ಮೂರ್ತಿ, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಬಿಆರ್‌ಪಿ ನಾಗೇಶ್, ಸಿ ಆರ್ ಪಿ ಸೋಸಲೆ ನಾಗೇಶ್, ಸಹಾಯಕ ಪ್ರಾಧ್ಯಾಪಕ ಡಾ. ಬಿ.ಕೆ.ಜ್ಞಾನಪ್ರಕಾಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ತಾ.ಪಂ ಮಾಜಿ ಸದಸ್ಯರಾದ, ನರಸಿಂಹ ಮಾದನಾಯಕ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕಿ ಲತಾ ಜಗದೀಶ್, ಪುರಸಭೆ ಮಾಜಿ ಸದಸ್ಯ ಎಸ್.ಸಿದ್ದೇಗೌಡ, ಹಿಂದುಳಿದ ವರ್ಗಗಳ ಅಧ್ಯಕ್ಷ ಎ.ಎನ್.ಸ್ವಾಮಿ ಸೇರಿದಂತೆ ವಿವಿಧ ಶಾಲೆಗಳ ಶಿಕ್ಷಕರು ಹಾಗೂ ಮುಖಂಡರುಗಳು ಹಾಜರಿದ್ದರು.

ನಿಧನ



ಶ್ರೀಮಾನ್ ಪಟೇಲ್ ಕೆಂಚೇಗೌಡ್ರು

ನಿಧನ: 16.9.2023

(ಮಾಜಿ ಸದಸ್ಯರು, ಬೀರಿಹುಂಡಿ ಗ್ರಾಮ ಪಂಚಾಯಿತಿ)
ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು,
ಹಾಗೂ ಹಾಲಿ ಸದಸ್ಯರು PACCSN ಸೊಸೈಟಿ, ಕೇರ್ಗಳ್ಳಿ,
ಕೆ. ಬಡಗಲಹುಂಡಿ ಗ್ರಾಮದ ಅವರ ಜಮೀನಿನಲ್ಲಿ
ಅಂತ್ಯಕ್ರಿಯೆಯನ್ನು ದಿ. 17.9.2023,
11.30ಕ್ಕೆ ನೆರವೇರಿಸಲಾಗುವುದು.

ದು:ಖತಪ್ತರು: ಶ್ರೀಮತಿ ಸಿದ್ದಮ್ಮ ಮತ್ತು ಕುಟುಂಬವರ್ಗದವರು,
ಕೆ. ಬಡಗಲಹುಂಡಿ, ಮೈಸೂರು ತಾಲೂಕು, ಜಯಪುರ ಹೋಬಳಿ.

PREMIUM VILLA FOR SALE
- 4 Bedrooms
- Prime Location
- Open Kitchen
- Semi Furnished

at Vijayanagar 4th Stage, Mysore. Call for more info
9845114303 / 9902714303

GOWRI GANESHA SPECIAL FESTIVAL OFFER
SITES FOR SALE
Mugilu Meadows
20x30 & 30x40
(Hasiru Layout Attached)
DTCP APPROVED
Pre Launching Site in Premium Layout
6 Mins from Bogadi Ring Road Junction, Bogadi Gadige Road
SAP DEVELOPERS & PROPERTIES
97435 32664 / 97409 44448

RBM ಕಾಲೇಜ್
ಕುವೆಂಪುನಗರ, ಮೈಸೂರು
ಪ್ರವೇಶ ತೆರೆದಿದೆ
B Com, B.Voc in Medical Lab Technology, Cardiac Care Technology, OT and Dialysis
9886654463 | 9945738573

SITES FOR SALE
MUDA APPROVED
20x30, 30x40
4.5 kms from Bogadi Ring Road, attached to Pheripheral Ring Road, Mysore
9611277776, 9880440033

ಮನೆ ಮಾರಾಟಕ್ಕಿದೆ
30x40 RCC ಕಟ್ಟಡ, 2 Portion,
ಕೆಳಗೆ 1 ರೂಂ, ಮಹಡಿ ಮೇಲೆ 2 ರೂಂ
ಕಾರ್ಪೊರೇಷನ್ ಕಂದಾಯ, ಬೋರ್‌ವೆಲ್, ಸೋಲಾರ್, ಕಾರ್‌ಪಾರ್ಕಿಂಗ್ ಇದೆ.
ಹಾಲನಹಳ್ಳಿ ಗ್ರಾಮ ಪಂಚಾಯ್ತಿ ಮುಂಭಾಗ, ಮೈಸೂರು
9353635001, 9008030666

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್
ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ಮೈಸೂರು
ಪ್ರವೇಶ ತೆರೆದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)
9886654463 / 9945738573

SITES FOR SALE
A PREMIUM RESIDENTIAL LAYOUT NEAR SRINAGAR (J.P.NAGAR)
MUDA APPROVED
Bank Loan Available
Ready To Construct Locality
Call 90719 66999

ಸೈಟು ಮಾರಾಟಕ್ಕಿದೆ
ನಂಜನಗೂಡು
KHB ಕಾಲೋನಿಯಲ್ಲಿ
1788 Sqft ನಾರ್ಥ್ ಈಸ್ಟ್ ಕಾರ್ನರ್ ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ:
9880218745

ಕಾರ್ಯಕ್ರಮಗಳು ಹಾಗೂ ಸಭೆಗಳಿಗೆ
ವೈದ್ಯರ ಸಮುದಾಯ ಭವನ



ಆಲನಹಳ್ಳಿ, ಟಿ.ನರಸೀಪುರ ರಸ್ತೆ, ರಿಂಗ್ ರಸ್ತೆ ಜಂಕ್ಷನ್, ಮೈಸೂರು
ಸುಸಜ್ಜಿತ ಸಭಾಂಗಣ, ಡೈನಿಂಗ್ ಹಾಲ್, ಜನರೇಟರ್, ಪಾರ್ಕಿಂಗ್ ಸ್ಥಳ, ಇತ್ಯಾದಿ.
Call: 96111 72148, 94495 61722
Office time 11 am to 6.00 pm on all days

REQUIRED
FOR CAFE & ICE CREAM PARLOUR
Boys & Girls
with minimum qualification : PUC
9886694690 / 8553632733
Email : info@urbaniteinfra.com

ತಿದ್ದುಪಡಿ

ಈ ಕೆಳಗೆ ಸಹಿ ಮಾಡಿರುವ ಮೋಹನ.ಸಿ ವಕೀಲನಾದ ನಾನು ನನ್ನ ಕಛೇರಿಯಿಂದ ಮೈಸೂರು ಮಿತ್ರ ಪತ್ರಿಕೆಯಲ್ಲಿ ದಿನಾಂಕ 02/08/2023 ರಂದು ಸಾರ್ವಜನಿಕ ತಿಳುವಳಿಕೆ ಪತ್ರವನ್ನು ನೀಡಿದ್ದು ಸದರಿ ತಿಳುವಳಿಕೆ ಪತ್ರದ ಅನುಸೂಚಿಯಲ್ಲಿ ಪೂರ್ವಕ್ಕೆ: ನಿವೇಶನ ಸಂಖ್ಯೆ–363/ಎ ಮತ್ತು 363/ಬಿ ಎಂಬುದರ ಬದಲಾಗಿ ಪೂರ್ವಕ್ಕೆ: ನಿವೇಶನ ಸಂಖ್ಯೆ–365/ಎ ಮತ್ತು 363/ಬಿ ಎಂದು ತಪ್ಪಾಗಿ ನಮೂದಾಗಿರುತ್ತದೆ, ಅದನ್ನು ಪೂರ್ವಕ್ಕೆ: ನಿವೇಶನ ಸಂಖ್ಯೆ–363/ಎ ಮತ್ತು 363/ಬಿ ಎಂದು ಓದಿಕೊಳ್ಳತಕ್ಕದ್ದು.

ಸಹಿ/– ಮೋಹನ ಸಿ, ವಕೀಲರು,
ನಂ.1164, 1ನೇ ಮಹಡಿ, ಚಾಮುಂಡೇಶ್ವರ ಕಾಂಪ್ಲೆಕ್ಸ್,
ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಮೊಹಲ್ಲಾ,
ಮೈಸೂರು–04, ಮೊ: 94484 48407.

ದಿನಾಂಕ: 16/09/2023, ಸ್ಥಳ: ಮೈಸೂರು

ಮೈಸೂರು ಮಿತ್ರ
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ರಿ.ನಂ.82/RCS ಸ್ಥಾಪನೆ : 1910

ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಲಿ.,
ಶ್ರೀ ಹರ್ಷ ರಸ್ತೆ, ಮೈಸೂರು –01

113ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಬ್ಯಾಂಕಿನ 2022–23 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 17–09–2023 ಭಾನುವಾರ ಬೆಳಿಗ್ಗೆ 10 ಗಂಟೆಗೆ ಮೈಸೂರು ನಗರದ ಚಂದ್ರಗುಪ್ತ ರಸ್ತೆಯಲ್ಲಿರುವ ಎಂ.ಎಲ್. ವರ್ಧಮಾನಯ ಸ್ಮಾರಕ ಭವನ, ಸಂಗಮ ಟಾಕೀಸ್ ಹತ್ತಿರ, ಮೈಸೂರು ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಂ ಎಸ್ ಸ್ವರೂಪ್ ರವರ ಘನ ಅಧ್ಯಕ್ಷತೆಯಲ್ಲಿ ಏರ್ಪಡಿಸುತ್ತದೆ ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಅಂಚೆ ಮೂಲಕ ಆಹ್ವಾನ ಪತ್ರದ ವರದಿ ಪುಸ್ತಕಗಳನ್ನು ಕಳುಹಿಸಲಾಗಿದ್ದು ಆಹ್ವಾನ ಪತ್ರದ ವರದಿ ಪುಸ್ತಕ ಈವರೆಗೂ ತಲುಪದಿದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಸಭೆಗೆ ಆಗಮಿಸಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ

ಶ್ರೀ ಎಂ.ಎಸ್. ಸ್ವರೂಪ್ – ಅಧ್ಯಕ್ಷರು
ಶ್ರೀ ಜೆ. ಪ್ರಕಾಶ್ – ಉಪಾಧ್ಯಕ್ಷರು
ಶ್ರೀ ಹೆಚ್. ರಾಜಶೇಖರ – ಪ್ರಭಾರ ವ್ಯವಸ್ಥಾಪಕರು

ನಿರ್ದೇಶಕರುಗಳಾದ : ಶ್ರೀ ಎಸ್ ಬಿ ಶಿವ, ಶ್ರೀ ಎನ್ ಧ್ರುವರಾಜ್, ಶ್ರೀ ವಿ ಮಧು , ಶ್ರೀ ಎಂ ಪುಟ್ಟಸ್ವಾಮಿ ಶ್ರೀ ಪ್ರಸನ್ನ ಎನ್ ಲಕ್ಷ್ಮಣ್, ಶ್ರೀ ದಿನೇಶ ಎಂ ವೆಂಕಟಲಿಂಗಯ್ಯ, ಶ್ರೀ ಜಯಕುಮಾರ್, ಶ್ರೀ ಎಸ್ ಸ್ವಾಮಿ ಶ್ರೀ ಎಂ ಕೆ ಅಶೋಕ, ಶ್ರೀಮತಿ ಹೇಮಾ, ಶ್ರೀಮತಿ ಪುಷ್ಪಲತಾ.

1ನೇ ವರ್ಷದ ಸವಿನೆನಪು



ಶ್ರೀ ಜೆ. ತಮ್ಮಣ್ಣರವರು
ನಿಧನ:17.09.2022
ದುಃಖತಪ್ತರು: ಕುಟುಂಬವರ್ಗದವರು, ಸಂಬಂಧಿಕರು,, ಕುರುಬಾರಹಳ್ಳಿ, ಮೈಸೂರು

5ನೇ ವರ್ಷದ ಸವಿನೆನಪು



ಶ್ರೀಮತಿ ಪುಟ್ಟಸಿದ್ದಮ್ಮ
(ಮಂಗಳ)
ಜನನ: 10.05.1967 ನಿಧನ:17.09.2018
ದುಃಖತಪ್ತರು:
ಶೇಷಣ್ಣ-ರಾಜಮ್ಮ, ರಮಾಬಾಯಿನಗರ, ಮೈಸೂರು

WANTED FOR PURCHASE IN MYSORE
Commercial / Farm / Residential Plot or Building of bigger dimensions.
Owners can Contact with property details & price.
No Brokers.
Immediate Registration
Email : aanp2727@gmail.com

HERITAGE HOMES
MYSURU - HUNSUR HIGHWAY
MEGA RESIDENTIAL TOWNSHIP
MUDA LIMITS
DREAM HOME COMES YOUR WAY
RIGHT TIME TO INVEST IN MYSURU
30x40 30x50 40x60 50x80
HURRY!! FEW LEFT
Just ₹550/Per Sq.ft
Easy 4 Instalment Facility
ADVIKA VENTURES
Hunsur-Mysore Highway, Mysuru
95133 01854
90713 86615

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

Hi! TAXI
ONLY ONE WAY TAXI CHARGE
MYSORE to BANGALORE
City drop or Pick up
BANGALORE to MYSORE
Airport drop or Pick up
Shakthi Nagar MYSURU
9611177599

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಗೌರಿ ಗಣೇಶ ಹಬ್ಬದ ಶುಭಾಶಯಗಳು

ಮೈಸೂರಿನ ಹೃದಯ ಭಾಗವಾದ ಕೆ.ಟಿ.ಸ್ಟ್ರೀಟ್ ಮುಖ್ಯ ರಸ್ತೆಯಲ್ಲಿರುವ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ.

ನಿರ್ಮಾಣದ ವಿವರ		
	ನೆಲ ಅಂತಸ್ತು	10'x11' ಅಳತೆಯ ಮಳಿಗೆಗಳು
	ಮೊದಲ ಮಹಡಿ	10'x23' ಅಳತೆಯ ಮಳಿಗೆಗಳು
	2ನೇ ಮಹಡಿ	1750 ಚದರ ಅಡಿ ಅಳತೆಯ ಹಾಲ್
	3ನೇ ಮಹಡಿ	1750 ಚದರ ಅಡಿ ಅಳತೆಯ ಹಾಲ್
	ಟೆರೇಸ್	1750 ಚದರ ಅಡಿ ಅಳತೆಯ ಖಾಲಿ ಜಾಗ

ಇವುಗಳು ಸ್ಟುಡಿಯೋ, ಸಾಫ್ಟ್‌ವೇರ್ ಕಂಪನಿ, ರೂಫ್ ಟಾಪ್ ರೆಸ್ಟೋರೆಂಟ್, ಆಫೀಸ್, ಶೋರೂಂ, ಚಾಟ್ ಸೆಂಟರ್, ಕೋಚಿಂಗ್ ಸೆಂಟರ್‌ಗಳಿಗಾಗಿ ಉಪಯುಕ್ತವಾಗಿವೆ. ಲಿಫ್ಟ್ ಮತ್ತು ಬೋರ್‌ವೆಲ್ ಸೌಲಭ್ಯವಿರುತ್ತದೆ.



ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 98440 94100

PUBLIC NOTICE

My client intends to purchase the Schedule Property from M/S Jain Kaigarike represented by its Proprietrix Smt. Roopa Suresh Jain, Plot No.427-G, Hebbal Industrial Area, Mysuru for a valuable consideration. In this connection my client has entered into an agreement of sale with M/s Jain Kaigarike. This notice is issued to public at large if any person has any right over the Schedule Property, the same shall be lodged with me within 15 days from the date of the publication of this notice.

SCHEDULE

All that piece of land known as Plot NO.427-G in Hebbal Industrial-Area situated in Sy.No.42 of Hebbal village Kasaba Hobi, Mysuru taluk Mysuru District containing by admeasurements 1978.00 sq. mtrs. or thereabouts and bounded as follows: East by Plot No.427-H; West by Plot No.427-F; North by KIADB Road and South by Storm Water Drain.

Sd/- B.M Shivaswamy
No.1127/2A, 1st Cross
Vanivilas Road,
Chamarajapuram
Mysuru-570005
bmsswamy@gmail.com
Mob: 9448505433

Date:
14-09-2023



ಕೇಂದ್ರೀಯ ವಿದ್ಯಾಲಯ ಮೈಸೂರು, ಜಿ.ಐ.ಟಿ.ಬಿ. ಪ್ರೆಸ್ ಕ್ಯಾಂಪಸ್, ಸಿದ್ಧಾರ್ಥನಗರ, ಮೈಸೂರು- ೫೭೦ ೦೧೧
केन्द्रीय विद्यालय मैसूरु, जी.आई.टी.बी.प्रेस कैंपस, सिद्धार्थनगर, मैसूरु-५७००११
KENDRIYA VIDYALAYA, MYSURU,
GITB, PRESS CAMPUS, SIDDHARTHNAGAR, MYSURU-570011
Web site: https://mysore.kvs.ac.in Email-kvmysore@gmail.com Phone: 080-2473515

ನೇರ ಸಂದರ್ಶನ

ಕೇಂದ್ರಿಯ ವಿದ್ಯಾಲಯ ಮೈಸೂರು, ಜಿ.ಐ.ಟಿ.ಬಿ. ಪ್ರೆಸ್ ಕ್ಯಾಂಪಸ್, ಸಿದ್ಧಾರ್ಥನಗರ, ಮೈಸೂರು–570 011
ನೇರ ಸಂದರ್ಶನ : 23.09.2023 ರಂದು ವಿದ್ಯಾಲಯ ಆವರಣದಲ್ಲಿ 2023–2024ರ ಒಪ್ಪಂದದ ಆಧಾರದ ಮೇಲೆ ಸಮಿತಿಯನ್ನು ತಯಾರಿಸಲು ವಿವಿಧ ಹುದ್ದೆಗಳಿಗೆ 23.09.2023 ರಂದು ಕೇಂದ್ರೀಯ ವಿದ್ಯಾಲಯ, ಮೈಸೂರಿನಲ್ಲಿ ನೇರ ಸಂದರ್ಶನಕ್ಕಾಗಿ ಕರೆಯಲಾಗಿದೆ. ಅರ್ಹ ಅಭ್ಯರ್ಥಿಗಳು ತಮ್ಮ ಪ್ರಮಾಣಪತ್ರಗಳೊಂದಿಗೆ ದಿನಾಂಕ 23.09.2023 ರಂದು ಖುದ್ದು ಹಾಜರಾಗಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.
ನೋಂದಣಿ ಸಮಯ : 8.30am to 10.00am

ದಿನಾಂಕ ಮತ್ತು ಸಮಯ	ಹುದ್ದೆ ಮತ್ತು ವಿಷಯ
23.09.2023 ನೋಂದಣಿ ಸಮಯ 8:30am to 10:00am	ಹುದ್ದೆ, ಪಿಜಿಟಿ – ಭೌತಶಾಸ್ತ್ರ ಟಿಜಿಟಿ, ಇಂಗ್ಲಿಷ್, ವಿಜ್ಞಾನ, ಸಾಮಾಜಿಕ ಅಧ್ಯಯನಗಳು, ಹಿಂದಿ ಗಣಿತ
	ಹುದ್ದೆ, ಪ್ರಾಥಮಿಕ ಶಿಕ್ಷಕರು
ಸೂಚನೆ :	1. ಅಭ್ಯರ್ಥಿಗಳು ಸರಿಯಾಗಿ ಭರ್ತಿ ಮಾಡಿದ ಅರ್ಜಿ ನಮೂನೆ, ವಿದ್ಯಾರ್ಹತೆಯ ಮೂಲ ಪ್ರಮಾಣ ಪತ್ರಗಳ ಒಂದು ಸೆಟ್ ಸ್ವಯಂ ದೃಢೀಕರಿಸಿದ ಪ್ರಮಾಣಪತ್ರ ಮತ್ತು 2 (ಎರಡು) ಪಾಸ್‌ಪೋರ್ಟ್ ಅಳತೆಯ ಛಾಯಾಚಿತ್ರಗಳೊಂದಿಗೆ ನೋಂದಣಿಗಾಗಿ ವರದಿ ಮಾಡಬೇಕು.
	2. ಸಂದರ್ಶನಕ್ಕೆ ಯಾವುದೇ ಟಿಎ/ಡಿಎ ನೀಡಲಾಗುವುದಿಲ್ಲ.
	3. ಅರ್ಜಿ ನಮೂನೆಯ ಅರ್ಹತಾ ಮಾನದಂಡಗಳು, ಕನಿಷ್ಠ ವಿದ್ಯಾರ್ಹತೆ, ವೇತನ ಇತ್ಯಾದಿಗಳನ್ನು ಡೌನ್‌ಲೋಡ್ ಮಾಡಲು ದಯವಿಟ್ಟು ವೆಬ್‌ಸೈಟ್‌ಗೆ ಭೇಟಿ ನೀಡಿ http://mysore.kvs.ac.in
	ಅರ್ಹತೆ ಮತ್ತು ಸಂಭಾವನೆಯ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ವಿದ್ಯಾಲಯ ವೆಬ್‌ಸೈಟ್‌ಅನ್ನು ನೋಡಿ.

ಪ್ರಾಂಶುಪಾಲರು